
ತಿರುಮಲೆ ತಿರುಪತಿ ದೇವಸ್ಥಾನಗಳು
ಸಪ್ತಗಿರಿ
ಸಚಿತ್ರ ಮಾಸಪತ್ರಿಕೆ
ಏಪ್ರಿಲ್ 2020, ಬೆಲೆ ರೂ. 5/-
2020 ಏಪ್ರಿಲ್ 02 ರಿಂದ 10 ರ ವರೆಗೆ
ಒಂಟಿಮಿಟ್ಟ
ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು



ತಿರುಮಲ ತಿರುಪತಿ ದೇವಸ್ಥಾನಗಳು

## ನಾಗುಲಾಪುರಂ
## ಶ್ರೀ ವೇದವಲ್ಲಿ ಸಮೇತ ಶ್ರೀ ವೇದನಾರಾಯಣ
## ಸ್ವಾಮಿಯವರ ಬ್ರಹ್ಮೋತ್ಸವಗಳು
## 05-05-2020 ರಿಂದ 13-05-2020 ರ ವರೆಗೆ

**05-05-2020**
ಮಂಗಳವಾರ
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**06-05-2020**
ಬುಧವಾರ
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**07-05-2020**
ಗುರುವಾರ
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**08-05-2020**
ಶುಕ್ರವಾರ
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**09-05-2020**
ಶನಿವಾರ
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ
ರಾತ್ರಿ: ಗರುಡವಾಹನ

**10-05-2020**
ಭಾನುವಾರ
ಹಗಲು: ಹನುಮದ್ವಾಹನ
ಸಂಜೆ : ವಸಂತೋತ್ಸವ
ರಾತ್ರಿ: ಗಜವಾಹನ

**11-05-2020**
ಸೋಮವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**12-05-2020**
ಮಂಗಳವಾರ
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**13-05-2020**
ಬುಧವಾರ
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ

**ಅನ್ಯೇ ಚ ಬಹವಃ ಶೂರಾಃ ಮದರ್ಥೇ ತ್ಯಕ್ತ ಜೀವಿತಾಃ।**
**ನಾನಾಶಸ್ತ್ರಪ್ರಹರಣಾಃ ಸರ್ವೇ ಯುದ್ಧ ವಿಶಾರದಾಃ॥**

(ಶ್ರೀ ಮದ್ಭಗವದ್ಗೀತೆ - 1, ಶ್ಲೋಕ -೯)



ಇನ್ನೂ ಅನೇಕ ಶೂರರು ನನಗಾಗಿ ಜೀವ ತೆರಲು ಸಿದ್ಧರಾಗಿ ಇದ್ದಾರೆ. ಎಲ್ಲರೂ ಎಲ್ಲ ಬಗೆಯ ಆಯುಧಗಳನ್ನೂ ಉಪಯೋಗಿಸ ಬಲ್ಲವರು ಮತ್ತು ಯುದ್ಧದಲ್ಲಿ ಗಟ್ಟಿಗರು.



ನಮಿಸುವೆ ನಾನೆಂದೂ ಶ್ರೀ ರಾಮ
ಪಾದವ ಜಪಿಸುವೆನು ಶ್ರೀರಾಮ ನಾಮವ
ಕಂಟಕ ಕಳೆಯುವ ಶ್ರೀ ರಾಮ ಪಾದ ಮುಕ್ತಿ
ಮೋಕ್ಷ ಕೊಡುವ ಶ್ರೀರಾಮ ನಾಮ

ಪುತ್ರಕಾಮೇಷ್ಟಿಯ ಫಲ ಪುಂಡರೀಕಾಕ್ಷ
ಅವತರಿಸಿದನಯ್ಯಾ ಅಯೋಧ್ಯೆಯಲ್ಲಿ
ದಶರಥನಂದನ ದಯಾನಿಧಿ ಶ್ರೀರಾಮ
ಕೌಸಲ್ಯತನಯ ಕರುಣಾಕರ ಶ್ರೀರಾಮ

ಅಯೋಧ್ಯಾನಗರವನು ಪವಿತ್ರ ಮಾಡಿದ
ಪಾದ ಎಲ್ಲ ವೇಳೆಯಲಿ ರಕ್ಷಣೆ ಶ್ರೀರಾಮ ನಾಮ
ಮುನಿಸಾಂಗತ್ಯದಿ ವನಕೆ ತೆರಳಿದ ಪಾದ
ಸರ್ವಲೋಕ ರಕ್ಷಣೆ ಶ್ರೀರಾಮ ನಾಮ

ಸೋದರರು ಪೂಜಿಸಿದ ಪಾದ ವಾಲ್ಮೀಕಿಯನು
ಮಹರ್ಷಿಯ ಮಾಡಿದ ಶ್ರೀರಾಮನಾಮ
ಅಹಲ್ಯೆ ಶಾಪ ಪರಿಹಾರ ಮಾಡಿದ ಪಾದ
ಶಬರಿ ನಿರಂತರ ಜಪಿಸುವ ಶ್ರೀ ರಾಮನಾಮ

ಹನುಮ ಸದಾ ಪೂಜಿಸುವ ಶ್ರೀ ರಾಮ ಪಾದ
ಈಶ್ವರ ಸದಾ ಜಪಿಸುವ ಶ್ರೀರಾಮ ನಾಮ
ಸೀತಾ ಮಾತೆ ಸೇವೆ ಮಾಡುವ ಪಾದ ಸರಿ
ಸಾಟಿ ಇಲ್ಲದ ಶ್ರೀರಾಮ ನಾಮ

ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರ
ಅವತಾರ ಪುರುಷ ಸದ್ಗುಣ ಸಾಂದ್ರ
ಕಲಿಯುಗದಲಿ ನಮಿಸುವೆ ವೆಂಕಟರಾಮ
ಪಾದ ಭಜಿಸುವೆ ಪದ್ಮಾವತಿ ರಮಣನ ನಾಮ

– ವಿ. ಸ್ವಯಂಪ್ರಕಾಶಂ

(ಐದನೆಯ ದಶಕ)

# ದಯಾ ಶತಕಮ್

- ಎನ್. ನರಸಿಂಹಾಚಾರ್ಯ



**ನಾಭೀ ಪದ್ಮಸ್ಫುರಣ ಸುಭಗಾ ನವ್ಯನೀಲೋತ್ಪಲಾಭಾ ಕ್ರೀಡಾಶೈಲಂ ಕಮಪಿ ಕರುಣೇ ವೃಣ್ವತೀ ವೇಂಕಟಾಖ್ಯಮ್।**
**ಶೀತಾ ನಿತ್ಯಂ ಪ್ರಸದನವತೀ ಶ್ರದ್ಧ ಧಾನಾವಗಾಹ್ಯಾ ದಿವ್ಯಾ ಕಾಚಿಜ್ಜಯತಿ ಮಹತೀ ದೀರ್ಘಿಕಾ ತಾವಕೀನಾ ॥ ೪೩ ॥**

ಹಿಂದಿನ ಪದ್ಯದಲ್ಲಿ ಯೋಗಿಗಳಾದ ಹಿರಿಯರು ಭಗವಂತನ ದಿವ್ಯವಾದ ಕಟಾಕ್ಷದಲ್ಲಿ ಆಶೆಗೊಂಡು ತಿರುಮಲೆಯಲ್ಲಿ ಯಾವುದಾದರೂ ಒಂದು ಜನ್ಮವನ್ನು ಬೇಡಿದರೆಂದು ವರ್ಣಿಸಿರುತ್ತಾರೆ.ಈ ಪದ್ಯದಿಂದ ಆರಂಭಿಸಿ, ಹಾಗೆ ತಿರುಮಲೆಯಲ್ಲಿ ಜನ್ಮವುಂಟಾದವರಿಗೆ ಭಗವಂತನ ಕಟಾಕ್ಷಪಾತವು ಲಭಿಸುವಂತೆ ಇನ್ನೂ ಕೆಲವು ಲಾಭಗಳುಂಟೆಂದು ವರ್ಣಿಸಿರುತ್ತಾರೆ.

**"ಯಶ್ಚ ರಾಮಂ ನ ಪಶ್ಯೇತ್ತು ಯಂ ಚ ರಾಮೋ ನ ಪಶ್ಯತಿ।"**

ಎಂಬಂತೆ ಭಗವಂತನ ಕಟಾಕ್ಷಪಾತವು ಹಿಂದಿಯೇ ತಿಳಿಸಲ್ಪಟ್ಟಿತು. ಇಲ್ಲಿ, ಆ ಕಟಾಕ್ಷ ಪಾತದಿಂದ ಈ ಪುಣ್ಯಾತ್ಮರಿಗೆ ಸತ್ವಗುಣವು ತಲೆದೋರಿ ಆ ಭಗವಂತನನ್ನು ಸೇವಿಸುವ ಭಾಗ್ಯವು ದೊರಕುವುದೆಂದು ನಿರೂಪಿಸುವರು. ಇದು ಒಂದು ಮಹಾಭಾಗ್ಯವಲ್ಲವೇ! ದಿವ್ಯ ಮಂಗಳವಿಗ್ರಹ ಸೇವೆಯೆಂದೂ, ದಿವ್ಯಾತ್ಮಸ್ವರೂಪ ಸೇವೆಯೆಂದೂ ಎರಡು ವಿಧವಾದ ಭಗವತ್ಸೇವೆಯಲ್ಲಿ ದಿವ್ಯ ಮಂಗಳವಿಗ್ರಹ ಸೇವೆಯನ್ನು ಈ ಪದ್ಯದಲ್ಲಿ ವರ್ಣಿಸಿ, ದಿವ್ಯಾತ್ಮಸ್ವರೂಪ ಸಾಕ್ಷಾತ್ಕಾರವನ್ನು ಮುಂದಿನ ಪದ್ಯದಲ್ಲಿ ವರ್ಣಿಸುವರು.

ಶ್ರೀನಿವಾಸನ ದಿವ್ಯಮಂಗಳವಿಗ್ರಹವನ್ನು "ಗ್ರಿಷ್ಮೇ ಶೀತಮಿವಹ್ರದಂ" ಎಂಬಂತೆ ಒಂದು ದೊಡ್ಡ ಮಡುವಿನಂತೆ ಚಿತ್ರಿಸಿರುತ್ತಾರೆ.ಅರಳಿದ ತಾವರೆಯ ಹೂವುಗಳ ಕಾಂತಿಯಿಂದ ಅತ್ಯಂತ ರಮಣೀಯವಾಗಿಯೂ,ಆಗತಾನೆ ವಿಕಸಿತವಾದ ನೈದಿಲೆಗಳಿಂದ ಅಲಂಕೃತವಾಗಿಯೂ, ಕನ್ನೈದಿಲೆಯ ಪುಷ್ಪದಂತೆ ಹೊಳಪುಳ್ಳದಾಗಿಯೂ, ಅತ್ಯಂತ ಆಳವಾಗಿರುವುದರಿಂದ ಯಾವಾಗಲೂ ಶೀತಲವಾಗಿರುವುದಾಗಿಯೂ, ಸಾಧುಗಳಾದವರು ನಿರ್ಭಯವಾಗಿ ಅದರಲ್ಲಿ ಇಳಿದು ಸ್ನಾನಪಾನಾದಿಗಳನ್ನು ಮಾಡಿ ತಮ್ಮ ಸರ್ವವಿಧತಾಪಗಳನ್ನೂ ಪರಿಹರಿಸಿಕೊಳ್ಳಲು, ಯೋಗ್ಯವಾದುದಾಗಿಯೂ ಅತ್ಯಂತ ದೊಡ್ಡದಾಗಿಯೂ ಇರುವ ಒಂದು ಮಡುವು, ಒಂದು ವಿಶಾಲವಾದ ಪರ್ವತದ ಮಧ್ಯದಲ್ಲಿದ್ದರೆ ಹೇಗೆ ಸರ್ವೋತ್ಕೃಷ್ಟವಾಗಿ ಪ್ರಕಾಶಿಸುವುದೋ,ಹಾಗೆಯೇ ಶ್ರೀನಿವಾಸನ ದಿವ್ಯಮಂಗಳವಿಗ್ರಹವೂ ಇರುವುದೆಂದು ವರ್ಣಿಸುತ್ತಾರೆ. ಭಗವಂತನ ದಿವ್ಯಮಂಗಳವಿಗ್ರಹವು ನೀಲಮೇಘಶ್ಯಾಮಲಾಕಾರವಾದುದರಿಂದ ಅದರ ಥಳ ಥಳಿಸುವ ಕಾಂತಿಯ ಪ್ರವಾಹವು ಒಂದು ದೊಡ್ಡ ಮಡುವಿನಂತೆ ತೋರುವುದು. ಕನ್ನೈದಿಲೆ ಹೂವುಗಳ ಕಾಂತಿಯಂತಹ ಒಂದು ಕಾಂತಿ ವಿಶೇಷವನ್ನು ಅಲ್ಲಿ ನಾವು ನೋಡಬಹುದು. ಚತುರ್ಮುಖಬ್ರಹ್ಮನಿಗೆ ಉತ್ಪತ್ತಿ ಸ್ಥಾನವಾದ ವಿಕಸಿತವಾದ ಒಂದು ತಾವರೆಯ ಈ ಮಡುವಿಗೆ ಒಂದು ವಿಶೇಷವಾದ ಕಾಂತಿಯನ್ನುಂಟು ಮಾಡುವುದು. ಯಾವಾಗಲೂ ಶೀತಲವಾಗಿರುವುದು-ಅಂದರೆ, ಉಷ್ಣವೆಂಬ ಗುಣವನ್ನು ಹತ್ತಿರಕ್ಕೇ ಸೇರಿಸದಂತಹ ಸೌಮ್ಯಸ್ವಭಾವವುಳ್ಳದ್ದು ಹಾಗೆಯೇ ಯಾವಾಗಲೂ ಪ್ರಸಾದಗುಣವುಳ್ಳದ್ದು, ಅಂದರೆ-ಅನುಗ್ರಹಶೀಲವಾದುದು.ಅತ್ಯಂತ ವಿಶ್ವಾಸವುಳ್ಳವರಿಂದ ಬಂದು ಸೇವಿಸಲ್ಪಟ್ಟು ಶರಣು ಹೊಂದಿ ತಮ್ಮ ಸರ್ವವಿಧವಾದ ತಾಪಗಳನ್ನೂ ಪರಿಹರಿಸಿಕೊಳ್ಳಲು ಯೋಗ್ಯವಾದುದು. ಪರಮಾಕಾಶದಲ್ಲಿ ಪ್ರಕಾಶಿಸುವಂತಹುದು. ಎಲ್ಲ ರೀತಿಯಿಂದಲೂ ಸರ್ವೋತ್ಕೃಷ್ಟವಾದುದು. ಅಂತಹ ದಿವ್ಯಮಂಗಳ ವಿಗ್ರಹವೆಂಬ ಈ ಮಡುವು ದಯಾದೇವಿಗೆ ಕ್ರೀಡಾರ್ಥವಾಗಿ ಏರ್ಪಟ್ಟ ಒಂದು ಉಪಕರಣವಾಗಿದೆ. ಅಂದರೆ, ದಯಾದೇವಿಯ ಆಶ್ರಿತಪಾಪಹರಣವೆಂಬ ಕ್ರಿಡೆಗೆ ಇದೊಂದು ಉತ್ಕೃಷ್ಟವಾದ ಸ್ಥಾನ.ಇಂತಹ ದಿವ್ಯಮಂಗಳವಿಗ್ರಹವನ್ನು ಸೇವಿಸಿದವನಿಗೆ ಮಾತ್ರವೇ ಸಮಸ್ತ ಪಾಪವೂ ಪರಿಹೃತವಾಗುವುದು. ಅಂತಹ ಈ ಮಡುವು, ದಯಾದೇವಿಗೆ ಕ್ರೀಡಾಪರ್ವತವಾಗಿ ಏರ್ಪಟ್ಟಿರುವ ತಿರುಮಲೆಯನ್ನು ಆಶ್ರಯಿಸಿರುವಂಥದು. ವೇಂಕಟಾಚಲವೆಂಬ ಹೆಸರಿನಿಂದಲೇ ತಿರುಮಲೆಗಿರುವ ಮಹತ್ವವು ವ್ಯಕ್ತವಾಗುವುದು.

**"ಸರ್ವಪಾಪಾನಿ ವೇಂ ಪ್ರಾಹುಃ ಕಟಸ್ತದ್ದಾಹ ಉಚ್ಯತೇ"**

ಎಂಬ ಪುರಾಣವಾಕ್ಯದಂತೆ ಸರ್ವಪಾಪಗಳನ್ನೂ ಸುಟ್ಟುಹಾಕುವಂತಹುದು... ಎಂಬ ಅರ್ಥವುಂಟಾಗುವುದರಿಂದಲೂ, ದಯಾದೇವಿಯ ಕ್ರೀಡೆಯೂ ಪಾಪವನ್ನು ಹೋಗಲಾಡಿಸುವುದೇ ಆಗಿರುವುದರಿಂದಲೂ, ಆ ದಯಾದೇವಿಯ ಕ್ರೀಡೆಗೆ ತಿರುಮಲೆಯು ಆಶ್ರಯವಾಗಿರಲು ಅಡ್ಡಿಯಿಲ್ಲ. ಭಗವಂತನ ದಿವ್ಯಮಂಗಳವಿಗ್ರಹವೂ ತಿರುಮಲೆಯೂ ಒಂದೇ ಸ್ವಭಾವವುಳ್ಳದ್ದು. ಈ ಪದ್ಯದಲ್ಲಿರುವ "ವೃಣ್ವತೀ" ಎಂಬ ಪದಕ್ಕೆ "ವಿವೃಣ್ವತೀ" ಅಂದರೆ, ಪ್ರಕಾಶಪಡಿಸುವಂತಹುದು ಎಂಬ ಅರ್ಥವನ್ನು ಮಾಡಿ, ಭಗವಂತನ ದಿವ್ಯ ಮಂಗಳ ವಿಗ್ರಹವೆಂಬ ಒಂದು ದೊಡ್ಡ ಮಡುವು, ತನ್ನ ಮಧ್ಯದಲ್ಲಿ ದಯಾದೇವಿಯ ಕ್ರೀಡಾಪರ್ವತವಾದ ತಿರುಮಲೆಯನ್ನು ಆವರಿಸಿಕೊಂಡು ಪ್ರಕಾಶಗೊಳಿಸುತ್ತಿರುವುದೆಂಬ ಒಂದು ವಿಚಿತ್ರವಾದ ಅರ್ಥವನ್ನು ಕೆಲವರು ವರ್ಣಿಸಿರುತ್ತಾರೆ.

"ದೀರ್ಘಿಕಾ ಕ್ರಿಡಾಶೈಲಂವೃಣ್ವತೀ" ಎಂಬ ಪದಗಳ ಜೋಡಣೆಯಿಂದಲೂ ಉಚಿತವಾದ ವಿಶೇಷಣಗಳಿಂದಲೂ ಉತ್ತಮರಾದ ನಾಯಿಕಾನಾಯಕರ ಪ್ರಣಯ ಪ್ರಸಂಗವೂ ಧ್ವನಿತವಾಗುವುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ




ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಶಾರ್ವರಿನಾಮ - ಸಂವತ್ಸರ ಚೈತ್ರ - ವೈಶಾಖ ಮಾಸ ಸಂಚಿಕೆ

ಸಂಪುಟ - 50 ಏಪ್ರಿಲ್ 2020 ಸಂಚಿಕೆ - 11


## ವಿಷಯಸೂಚಿಕೆ


| | |
|---|---|
| ಸಂಪಾದಕೀಯ | 6 |
| ಹಸಿರುತೋರಣ | |
| ಸದ್ಗುಣ ಸಾಂದ್ರ ಶ್ರೀ ರಾಮಚಂದ್ರ ಪ್ರಭು<br>- ವೆಂಕಟರಾಘವನ್. ಎಸ್ | 7 |
| ವಿಶಿಷ್ಟ ಮಹಿಮೆಯ ವೈಶಾಖಮಾಸ<br>- ಶ್ರೀಮತಿ. ಕೆ.ವಿ. ಪದ್ಮಾವತಿ | 12 |
| ಯತಿರಾಜ ರಾಮಾನುಜಾಚಾರ್ಯರು<br>- ಡಾ॥ ಗುರುರಾಜಪೋಶೆಟ್ಟಿಹಳ್ಳಿ | 13 |
| ಹರಿದಾಸ ವಾಙ್ಮಯದಲ್ಲಿ ಶ್ರೀ ವೆಂಕಟಾಚಲಧೀಶನು<br>-ಸುಸ್ವರಂ ನಾಗರಾಜಾಚಾರ್ಯ | 17 |
| ಚಿತ್ರ ಕೇತುವಿನ ವೃತ್ತಾಂತ<br>- ಡಿ. ಎಸ್. ಬದ್ರಿನಾಥ್ | 21 |
| ಯುಗ ಯುಗಗಳಿಂದ ಇರುವ ಏಕಶಿಲಾನಗರ<br>- ಶ್ರೀಮತಿ ಎನ್. ಪಾರ್ವತಿ | 24 |
| ಅನ್ನಮಯ್ಯ ಜೀವನ ಚರಿತ್ರೆ<br>- ಶ್ರೀಮತಿ. ಸೂರ್ಯವಂಶಿ | 31 |
| ಅಮ್ಮನಂತೆ ಆರೋಗ್ಯದಾಶೀರ್ವಾದ ನೀಡುವ ನಿಂಬೆ<br>-ಶ್ರೀಮತಿ | 34 |
| ಶ್ರೀ ರಾಮನಿಗೆ ನಮನ<br>- ಬಿ. ಆರ್. ಶ್ರೀಕಂಠಯ್ಯ | 36 |
| ದಿವ್ಯಕ್ಷೇತ್ರ ತಿರುಮಲೆ<br>- ಶ್ರೀಮತಿ. ಬಿ. ಪದ್ಮಜ | 40 |
| ಸಂಸ್ಕೃತ ಕಲಿಯೋಣ!<br>- ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್ | 41 |
| ನಿನ್ನ ಸುಖ ದುಃಖಗಳಿಗೆ ನೀನೇ ಕಾರಣ<br>- ಡಿ.ಎಸ್. ಭೂಮಿಕ | 43 |
| ಶ್ರೀ ರಾಮಾವತಾರ<br>- ಡಾ॥ ರಾಮಚಂದ್ರದಾಸ್ ಸಿ.ಜೆ. | 45 |
| ದಾಸ ಸಾಹಿತ್ಯದಲ್ಲಿ ತೀರ್ಥಕ್ಷೇತ್ರಗಳ ವಿವರಣೆ<br>- ಡಾ॥ ಬಿ. ಗೋಪಾಲಾಚಾರ್ | 48 |


ಮುಖಚಿತ್ರ - ಶ್ರೀ ಸೀತಾಲಕ್ಷ್ಮಣ ಸಮೇತ ಶ್ರೀ ಕೋದಂಡರಾಮ ಸ್ವಾಮಿ, ಒಂಟಿಮಿಟ್ಟ

ಹಿಂಬದಿಚಿತ್ರ - ಶ್ರೀ ಸೀತಾರಾಮ ಪಟ್ಟಾಭಿಷೇಕ


**ಗೌರವ ಸಂಪಾದಕರು**

ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್

ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**

ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**

ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**

ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,

ಉಪಕಾರ್ಯನಿರ್ವಹಣಾಧಿಕಾರಿ,

(ಪ್ರಕಾಶನ ಮತ್ತು ಮುದ್ರಣಾಲಯ),

ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**

ಪ್ರಧಾನ ಸಂಪಾದಕರ -ಕಾರ್ಯಾಲಯ

ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**

ಶ್ರೀ ಪಿ.ಎನ್.ಶೇಖರ್,

ಛಾಯಗ್ರಹಣ,ತಿ.ತಿ.ದೇ.

ಶ್ರೀ ಬಿ.ವೆಂಕಟರಮಣ,

ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ/ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ, ತಿರುಪತಿ - 517 507

**ಇತರ ವಿವರಗಳಿಗೆ**

ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.


| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



# ಶ್ರೀ ರಾಮಾಯಣ ಮಹಾಕಾವ್ಯಾವತರಣ

## ಸಂಪಾದಕೀಯ

ಶ್ರೀ ರಾಮಚರಿತೆ ರಸಭರಿತ. ರಾಮಾಯಣದಂತೆ ಲೋಕವ್ಯವಹಾರವನ್ನು ವಿವರವಾಗಿ ಬೋಧಿಸುವ ಕಾವ್ಯ ಇನ್ನೊಂದಿಲ್ಲ. ಆದಿಕವಿ ವಾಲ್ಮೀಕಿಯಿಂದ ಇಲ್ಲಿಯವರೆಗೂ ರಮಣೀಯವಾದ ಸುಂದರವಾದ ರಾಮಕಥೆ ಹಲವಾರು ಭಾಷೆಗಳಲ್ಲಿ, ಹಲವಾರು ರೀತಿಯಲ್ಲಿ ರೂಪುಗೊಂಡಿದೆ. ಇದು ಭಾರತದಲ್ಲೇ ಅಲ್ಲದೇ ಭಾರತೀಯ ಸಂಸ್ಕೃತಿಯನ್ನು ಇತರ ದೇಶಗಳಲ್ಲಿ ಪ್ರಚಾರಗೊಂಡಿದೆ.

ರಾಮಾಯಣ ಆದಿಕಾವ್ಯ. ವಾಲ್ಮೀಕಿ ಮಹರ್ಷಿ ಈ ಮಹಾಕಾವ್ಯವನ್ನು ರಚಿಸುವುದಕ್ಕೆ ಕಾರಣವೇನೆಂದರೆ ಬ್ರಹ್ಮ ದೇವನ ಅನುಗ್ರಹ. ಆ ತಪಸ್ವಿ ತಮಸಾನದಿಗೆ ಸ್ನಾನಕ್ಕೆ ಹೋದಾಗ, ಆ ನದೀ ತೀರದಲ್ಲಿ ಒಂದು ಕರುಣಾರಸಭರಿತ ದೃಶ್ಯವನ್ನು ನೋಡಿದ. ಎದಿರಿಗೆ ಇದ್ದ ಮರದ ಮೇಲೆ ಕ್ರೀಡಿಸುತ್ತಿದ್ದ ಕ್ರೌಂಚ ಪಕ್ಷಿಗಳಲ್ಲಿ ಗಂಡು ಹಕ್ಕಿ ಬೇಟೆಗಾರನು ಬಿಟ್ಟ ಬಾಣದಿಂದ ನೆಲದ ಮೇಲೆ ಬಿದ್ದು ವಿಲವಿಲ ಒದ್ದಾಡಿ ಪ್ರಾಣವನ್ನು ಬಿಟ್ಟಿತ್ತು. ಅದನ್ನು ನೋಡಿದ ಹೆಣ್ಣು ಪಕ್ಷಿ ರೋಧಿಸತೊಡಗಿತು. ಅದರ ಆಕ್ರಂದನ ಆ ಮಹರ್ಷಿಯ ಹೃದಯವನ್ನು ಕರಗಿಸಿತ್ತು. ಇದ್ದಕ್ಕಿದ್ದಂತೆ ಆತನ ಹೃದಯಶೋಕ ಶ್ಲೋಕ ರೂಪದಲ್ಲಿ ಹೊರಬಂತು.

ಮಾ ನಿಷಾದ! ಪ್ರತಿಷ್ಠಾಂ ತ್ವ ಮಗಮ ಶ್ಯಾಶ್ವತೀಸ್ಸಮಾಃ।

ಯತ್ ಕ್ರೌಂಚಮಿಥುನಾ ದೇಕ ಮವಧೀಃ ಕಾಮಮೋಹಿತಮ್॥

"ಓ ನಿಷಾಧಾ ! ಕಾಮಮೋಹಿತವಾಗಿದ್ದ ಕ್ರೌಂಚಪಕ್ಷಿಗಳಲ್ಲಿ ಒಂದನ್ನು ಕೊಂದ ನೀನು ಹೆಚ್ಚಿನ ಕಾಲ ಜೀವಿಸಲಾರೆ. " ಇದು ಕಿರಾತಕನಿಗೆ ನೀಡಿದ ಶಾಪ ಮಾತ್ರವಲ್ಲ. ಈ ಶ್ಲೋಕದಲ್ಲಿ ರಾಮಾಯಣ ಕಥಾ ಸೂಚಕವಾದ ಮತ್ತೊಂದು ಅರ್ಥವಿದೆ. ಆಗ ಅವರಿಗೆ ಬ್ರಹ್ಮ ಪ್ರತ್ಯಕ್ಷನಾಗಿ "ನಿನ್ನ ಬಾಯಿಂದ ಸರಸ್ವತಿ ಹೊರಳಿದ್ದಾಳೆ. ಇದು ನನ್ನ ಸಂಕಲ್ಪ. ಇನ್ನು ನೀನು ರಾಮಾಯಣವನ್ನು ರಚಿಸು. ಅದು ಭೂಮಿಯಲ್ಲಿ ಶಾಶ್ವತವಾಗಿ ಇರುತ್ತದೆ." ಎಂದು ಆದೇಶಿಸಿದ.

ವಾಲ್ಮೀಕಿ ಮಹರ್ಷಿ "ಮಾ ನಿಷಾದ" ಎಂಬ ಶ್ಲೋಕವನ್ನು ಉಚ್ಚರಿಸುವವರೆಗೂ ಲೌಕಿಕ ವಾಙ್ಞಯದಲ್ಲಿ ಛಂದೋಬದ್ಧವಾದ ವಾಣಿಯೇ ಇರಲಿಲ್ಲ. ರಾಮಾಯಣ ಕಾವ್ಯಾವತರಣೆಗೆ ಈ ಕ್ರೌಂಚಮಿಥುನ ಕಥೆ ಕಾರಾಣವಾಗಿದೆ. ವಾಲ್ಮೀಕಿ ಮಹರ್ಷಿ ಆದಿಕವಿಯಾಗಿ ಹೆಸರುವಾಸಿಯಾದ. ಮನೋಹರವಾದ ಕವಿತ್ವಾನಂದದೊಂದಿಗೆ, ಮಹಾಸಿದ್ಧಿಯನ್ನು ಪ್ರಸಾದಿಸುವ ಮಹಾಗ್ರಂಥವಾಗಿಯೂ ಕೂಡಾ ಶ್ರೀರಾಮಾಯಣ ಜಗತ್ ಪ್ರಸಿದ್ಧಿಯಾಯಿತು.

ಎಲ್ಲರ ಮನೆ ಮನದಲ್ಲೂ ಶ್ರೀ ಸೀತಾರಾಮರು ಪ್ರತೀ ಅಣುವಣುವಿನಲ್ಲೂ, ಪ್ರತೀ ಅಕ್ಷರದಲ್ಲೂ ಪ್ರಕಾಶಿಸುವ ದಿವ್ಯ ದಂಪತಿಗಳು, ಶ್ರೀ ರಾಮಾಯಣವನ್ನು ಓದುವುದರಿಂದ ತಂದೆ ತಾಯಿಗಳ ಮೇಲೆ ಭಕ್ತಿ, ಸೋದರ ಪ್ರೀತಿ, ಜ್ಯೇಷ್ಠಾನುವರ್ತನೆ, ಲೋಕ ಮರ್ಯಾದೆಯ ಅನುಕರಣೆ, ಪ್ರತಿಜ್ಞೆಯನ್ನು ಪಾಲಿಸುವುದು, ಆಶ್ರಿತ ವಾತ್ಸಲ್ಯ , ಸ್ವಾಮಿಕಾರ್ಯನಿರ್ವಹಣೆ, ಸ್ವಾರ್ಥಪರತೆಯನ್ನು ಬಿಡುವುದು, ಚಿತ್ತಶುದ್ಧಿ, ಪರೋಪಕಾರದ ಬುದ್ಧಿ, ಇಂತಹಾ ಅನೇಕ ಸದ್ಗುಣಗಳು ಅಭ್ಯಾಸವಾಗುತ್ತವೆ.

ನಾವೆಲ್ಲರೂ ಶ್ರೀ ರಾಮಾಯಣವನ್ನು ಪಾರಾಯಣ ಮಾಡೋಣ. ಪಾವನರಾಗೋಣ. ಶ್ರೀ ರಾಮನ ಹಾದಿಯಲ್ಲಿ ನಡೆಯೋಣ ಎಂಬ ದೃಢ ಸಂಕಲ್ಪದೊಂದಿಗೆ ಮುಂದಕ್ಕೆ ಹೆಜ್ಜೆ ಹಾಕೋಣ. ಶ್ರೀ ಸೀತಾರಾಮರ ಅನುಗ್ರಹಕ್ಕೆ ಪಾತ್ರರಾಗೋಣ.

# ಸದ್ಗುಣ ಶ್ರೀ ರಾಮ ಸಾಂದ್ರ ಚಂದ್ರ ಪ್ರಭು



## ಹಸಿರು ತೋರಣ

- ವೆಂಕಟ ರಾಘವನ್ ಎಸ್.
9845793917

ಸೃಷ್ಟಿ ಸ್ಥಿತಿ, ಲಯ ಕಾರಕರು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು. ಸ್ಥಿತಿಕಾರಕ ಶ್ರೀಹರಿ. ವೇದಸಂರಕ್ಷಣೆ, ಮಾಡಲು ಧರ್ಮವ ಉಳಿಸಲು ಯುಗಯುಗದಲ್ಲಿ ಅವತರಿಸಿದರು. ಒಂದೊಂದು ಅವತಾರಗಳಿಗೆ ವಿಶಿಷ್ಟತೆ ಇದೆ. ಶ್ರೀ ಹರಿಯನ್ನು ಪರಮಪುರುಷ, ಅವತಾರ ಪುರುಷ ಎಂದು ಪುರಾಣಗಳು ಕೊಂಡಾಡುವುವು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮ ನುಡಿದ ಶ್ಲೋಕ:-

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ॥

ಧರ್ಮದಹಾನಿ, ಅಧರ್ಮದ ವೃದ್ಧಿ ಆದಾಗ ನಾನು ನನ್ನ ಸ್ವರೂಪವನ್ನು ರಚಿಸುತ್ತೇನೆ. ಸಾಕಾರ ರೂಪದಿಂದ ಲೋಕದಲ್ಲಿ ಪ್ರಕಟವಾಗುತ್ತೇನೆ. ಸಾಧು ಪುರುಷರನ್ನು ಉದ್ಧರಿಸುವುದಕ್ಕಾಗಿ, ಪಾಪಕರ್ಮ ಮಾಡುವವರ ವಿನಾಶಕ್ಕಾಗಿ ಧರ್ಮ ಸ್ಥಾಪಿಸುವುದಕ್ಕೆ ನಾನು ಯುಗಯುಗಗಳಲ್ಲಿ ಪ್ರಕಟನಾಗುತ್ತೇನೆ!

**ದಶಾವತಾರಗಳು:**

ಶ್ರೀ ಹರಿಯ ಹತ್ತು ಅವತಾರಗಳು - ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಶ್ರೀ ಕೃಷ್ಣ, ಬುದ್ಧ, ಮತ್ತು ಕಲ್ಕಿ.ವೇದಗಳನ್ನು ರಕ್ಷಿಸಲು ಮತ್ಸ್ಯಾವತಾರ, ಕ್ಷೀರಸಮುದ್ರ ಮಥನಕ್ಕಾಗಿ ಕೂರ್ಮಾವತಾರ, ಭೂದೇವಿಯನ್ನು ರಕ್ಷಿಸಲು, ಹಿರಣ್ಯಾಕ್ಷನನ್ನು ಸಂಹರಿಸಲು ವರಾಹ ಅವತಾರ, ಹಿರಣ್ಯಕಶಿಪನನ್ನು ಸಂಹರಿಸಲು ಶ್ರೀ ಪ್ರಹ್ಲಾದರನ್ನು ರಕ್ಷಿಸಲು ನರಸಿಂಹ ಅವತಾರ, ದಾನ ವಾಸುರನಾದ ಬಲಿಚಕ್ರವರ್ತಿಯಿಂದ ಮೂರು ಅಡಿ ಜಾಗವನ್ನು ದಾನವಾಗಿ ಪಡೆದು ಪಾತಾಳಕ್ಕೆ ತುಳಿದ ವಾಮನಾವತಾರ, ಲೋಕಕಂಟಕರಾದ ಕ್ಷತ್ರಿಯ ಕುಲವನ್ನೇ ನಾಶ ಮಾಡಲು ಪರಶುರಾಮಾವತಾರ, ಮರ್ಯಾದಾ ಪುರುಷೋತ್ತಮನೂ ಆದ ಶ್ರೀ ರಾಮಾವತಾರ, ಪರಮಾತ್ಮನಾದ ಕೃಷ್ಣ ಧರ್ಮ ಸಂಸ್ಥಾಪನಾರ್ಥವಾಗಿ ಈ ಧರೆಯಲ್ಲಿ ಅವತರಿಸಿದ ಕೃಷ್ಣಾವತಾರ, ಸನ್ಮಾರ್ಗವನ್ನು ತೋರಲು, ಅಹಿಂಸೆಯೇ ಪರಮೋಧರ್ಮ ಎಂದು ಬೋಧಿಸಲು ಬೌದ್ಧಾವತಾರ, ಶ್ರೀ ಹರಿ ಧರ್ಮ ಸಂಸ್ಥಾಪನೆಗಾಗಿ ಕಲಿ ಯುಗದಲ್ಲಿ ಕಲ್ಕಿಯಾಗಿ ಅವತರಿಸುವವರು.

## ಇಕ್ಷ್ವಾಕು ವಂಶ:

ಬ್ರಹ್ಮ ದೇವರು ಹತ್ತು ಪ್ರಜಾಪತಿಗಳಿಗೆ ಜನ್ಮವ ಕೊಟ್ಟರು. ಅವರಲ್ಲಿ ಒಬ್ಬರು ಮರೀಚಿ. ಮರೀಚಿಯವರ ಪುತ್ರರು ಕಶ್ಯಪರು. ಕಶ್ಯಪರ ಪುತ್ರ ಸೂರ್ಯದೇವರು. ಸೂರ್ಯ ದೇವರ ಪುತ್ರ ಶ್ರಾದ್ಧದೇವ. ಶ್ರಾದ್ಧ ದೇವರ ಪುತ್ರ ಇಕ್ಷ್ವಾಕು. ಇಕ್ಷ್ವಾಕು, ಸೂರ್ಯವಂಶದ ಮೊದಲನೆಯ ಚಕ್ರವರ್ತಿ, ಸೂರ್ಯ ವಂಶದ ಪರಿಪಾಲಕರು. ವೈವಸ್ವತ-ಇಕ್ಷ್ವಾಕು-ಕುಕ್ಷಿ-ವಿಕುಕ್ಷಿ-ಬಾಣ-ಅನರಣ್ಯ-ಪೃಥು-ತ್ರಿಶಂಕು (ಸತ್ಯವ್ರತ)-ಹರಿಶ್ಚಂದ್ರ-ದುಂಧುಮಾರ-ಯವ ನಾಶ್ವ-ಮಂಧಾತ-ಸುಸಂಧಿ-ಧ್ರುವಸಂಧಿ-ಭರತ-ಅಸಿತ-ಸಗರ-ಅಸಮಂಜ-ಅಂಶುಮಂತ-ದಿಲೀಪ-ಭಗೀರಥ-ಕುಕುತ್ಸ-ರಘು-ಪ್ರವೃದ್ಧ-ಶಂಖಣ-ಸುದರ್ಶನ-ಅಗ್ನಿವರ್ಣ-ಶೀಘ್ರಗ-ಮರು-ಪ್ರಶುಶೃಕ-ಅಂಬರೀಷ-ನಹುಷ-ಯಯಾತಿ-ನಭಾಗ-ಅಜ-ದಶರಥ ಮಹಾರಾಜ. ೬೪ ನೆಯ ಚಕ್ರವರ್ತಿ ಶ್ರೀ ರಾಮಚಂದ್ರ ಪ್ರಭು.

## ಸೂರ್ಯವಂಶದ ಕೀರ್ತಿಪ್ರತಿಷ್ಠೆ

ಸೂರ್ಯವಂಶದ ಆದಿ ಸೂರ್ಯನಿಂದಲೇ. ವಿವಸ್ವಾನ ಕಿರಣಗಳ ಒಡೆಯ ಸೂರ್ಯದೇವರು. ಆದುದರಿಂದ ಸೂರ್ಯನಿಗೆ ವಿವಸ್ವಂತ ಎನ್ನುವ ಹೆಸರೂ ಇದೆ. ಸೂರ್ಯ ವಂಶದ ರಾಜರು ಸಕಲ ಸದ್ಗುಣಗಳನ್ನು ಹೊಂದಿದವರು. ಧರ್ಮ, ಸತ್ಯ, ಪ್ರಜಾರಂಜನೆ, ರಾಜ್ಯ ಸಮೃದ್ಧಿಯಲ್ಲಿ ಸದಾ ನಿಮಗ್ನರಾಗಿ ರಾಜ್ಯ ಪರಿಪಾಲನೆ ಮಾಡಿದವರು. ಶ್ರೀ ಕಾಳಿದಾಸ ಕವಿ ರಘುವಂಶ ಚರಿತೆಯಲ್ಲಿ ಮಹಾರಾಜರ ಗುಣಗಳು, ಕೀರ್ತಿ, ನಿಷ್ಠೆ,ತ್ಯಾಗ, ಸತ್ಯವಚನ ಮುಂತಾದ ಸದ್ಗುಣಗಳ ವಿಶ್ಲೇಷಣೆ ಮಾಡಿದ್ದಾರೆ.ರಘುವಂಶ ೧೯ ಸರ್ಗಗಳಿಂದ ಕೂಡಿದ ಸೂರ್ಯವಂಶದ ರಾಜರ ಚರಿತೆಯನ್ನು ವರ್ಣಿಸುವ ಕಾಳಿದಾಸರ ಸಂಸ್ಕೃತ ಮಹಾಕಾವ್ಯ.

ಸೋಽಹಮಾಜನ್ಮ ಶುದ್ಧಾನಾಮಾಫಲೋದಯ ಕರ್ಮಣಾಮ್।
ಅಸಮುದ್ರಕ್ಷಿತೀಶಾ ನಾಮಾನಾಕರ ಥವರ್ತ್ಮನಾಮ್॥

ರಘುವಂಶದಲ್ಲಿ ಜನ್ಮಿಸಿದ ಮಹಾರಾಜರೆಲ್ಲರೂ ಜನ್ಮತಃ ಪರಿಶುದ್ಧವಾಗಿರುವವರು. ಆರಂಭ ಮಾಡಿದ ಕಾರ್ಯಗಳನ್ನೆಲ್ಲ ವಿಜಯವಂತವಾಗಿ ಪೂರ್ಣಗೊಳಿಸುವವರು,ಸಮುದ್ರದ ಅಂಚಿನವರೆಗೂ ಇರುವ ಭೂಮಿಗೆ ಅಧಿಪತಿಗಳು. ಸ್ವರ್ಗಕ್ಕೆ ಸೇರುವ ಮಾರ್ಗ ಉಳ್ಳವರು.

ಯಥಾವಿಧಿಹುತಾಗ್ನೀನಾಂ ಯಥಾಕಾಮಾರ್ಚಿ ತಾರ್ಥಿನಾಮ್।
ಯಥಾಪರಾಧದಂಡಾನಾಂ ಯಥಾಕಾಲ ಪ್ರಬೋಧಿನಾಮ್।

ಶಾಸ್ತ್ರೋಕ್ತವಾಗಿ ಹೋಮ ಮಾಡುವವರು,ಯಾಚಿಸಿದಾಗ ಬೇಡಿಕೆ ಅನುಸಾರವಾಗಿ ದಾನ ಮಾಡುವವರು, ಮಾಡಿದ ತಪ್ಪಿಗೆ ಶಿಕ್ಷೆ ವಿಧಿಸುವವರು, ಸಮಯಕ್ಕೆ ಅನುಸಾರ ಜಾಗೃತರಾಗಿ ಇರುವವರು.

ತ್ಯಾಗಾಯ ಸಂಭೃತಾರ್ಥಾನಾಂ ಸತ್ಯಾಯ ಮಿತ ಭಾಷಿಣಾಮ್।
ಯಶಸೇ ವಿಜಿಗೀಷೂಣಾಂ ಪ್ರಜಾಯೈ ಗೃಹ ಮೇಧಿನಾಮ್

ಧನ ಸಂಪಾದನೆ ಸತ್ಪಾತ್ರರಿಗೆ ದಾನ ಮಾಡಲು ಮಾತ್ರ, ಸತ್ಯವನ್ನೇ ನುಡಿಯುವವರು, ಮಿತವಾಗಿ ಕೀರ್ತಿಗಳಿಸಲು ಶ್ರಮಿಸುವವರು,ಸತ್ಸಂತಾನಕ್ಕಾಗಿಯೇ ವಿವಾಹ ಮಾಡಿಕೊಳ್ಳುವವರು.

ಶೈಶವೇಽಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಮ್ ।
ವಾರ್ಧ್ಧಕೇ ಮುನಿವೃತ್ತೀನಾಂ ಯೋಗೇ ನಾನ್ತೇ ತನುತ್ಯಜಾಮ್॥

ಬಾಲ್ಯದಲ್ಲಿ ವಿದ್ಯಾಭ್ಯಾಸ ಮಾಡುತ, ಯೌವನದಲ್ಲಿ ಗೃಹಸ್ಥಾಶ್ರಮ ಧರ್ಮ ಪಾಲಿಸುತ, ವೃದ್ಧಾಪ್ಯದಲ್ಲಿ ವಾನಪ್ರಸ್ಥಾಶ್ರಮದಲ್ಲಿ ಇದ್ದು ಅಂತ್ಯ ಕಾಲದಲ್ಲಿ ಯೋಗದಿಂದ ದೇಹತ್ಯಾಗ ಮಾಡುವವರು.

ಪ್ರಜಾನಾಂ ವಿನಯಾಧಾನಾದ್ರಕ್ಷಣಾದ್ಭರಣಾದಪಿ ।
ಸ ಪಿತಾ ಪಿತರಸ್ತಾಸಾಂ ಕೇವಲಂ ಜನ್ಮಹೇತವಃ ॥

ದಿಲೀಪ ಮಹಾರಾಜರು ಪ್ರಜೆಗಳನ್ನು ಸತ್ಯ ಧರ್ಮ, ಕಾರ್ಯನಿರ್ವಹಣೆ ಮಾಡುವುದರಿಂದ ದಿಲೀಪ ಮಹಾರಾಜರನ್ನು ಪ್ರಜೆಗಳು ತಂದೆಯಾಗಿ ಭಾವಿಸುತ್ತಿದ್ದರು ಮತ್ತು ಪ್ರಜೆಗಳಲ್ಲಿ ಭಯ, ಚಿಂತೆ ಇರುತ್ತಿರಲಿಲ್ಲ. ದಿಲೀಪ ಮಹಾರಾಜರ ತ್ಯಾಗಶೀಲತೆ ಮೆಚ್ಚಿ ಪರಮೇಶ್ವರ ಸಂತುಷ್ಟರಾಗಿ ಸಂತಾನ ವರ ಕೊಟ್ಟರು.ಸತ್ಯವಚನೆ ಪಾಲನೆಯಲ್ಲಿ ಹರಿಶ್ಚಂದ್ರ ಮುನಿಯ ಪರೀಕ್ಷೆಯಲ್ಲಿ ರಾಜ್ಯ, ಕುಟುಂಬವನ್ನು ಕಳೆದುಕೊಂಡರೂ ಸತ್ಯವಚನ ಬಿಡಲಿಲ್ಲ.ಸತ್ಯವನ್ನು ಕಾಪಾಡಲು ಯಾವ ಕಾರಣಕ್ಕೂ ಹಿಂದೆಜ್ಜೆ ಹಾಕುವವರಲ್ಲ ಸೂರ್ಯವಂಶೀಯರು. ಭಗೀರಥರು ಗಂಗೆಯನ್ನು ಸ್ವರ್ಗದಿಂದ ಭುವಿಗೆ ತರಲು ಮಾಡಿದ ಯತ್ನ ವರ್ಣನಾತೀತ. ವೈವಸ್ವತ ಮನುವಿನಿಂದಲೇ ಮಾನವನ ಅಭಿವೃದ್ಧಿ. ಭಕ್ತ ಅಂಬರೀಷ ಹರಿಭಕ್ತಿ, ರಾಜ್ಯ ಪಾಲನೆ ಪ್ರಶಂಶನೀಯ. ಮನುವಿನಿಂದ ಮನುಷ್ಯ. ಮನು ಮಹಾರಾಜರು ಮನು ಧರ್ಮಶಾಸ್ತ್ರ ರಚಿಸಿದರು.ಮನು ಮಹಾ

ರಾಜರು ಕಟ್ಟಿದ ಸತ್ಯ ನಗರ ಸತ್ಯಪುರಿ. ಸತ್ಯವೇ ದೇವರು ಎಂದು ಸಾರುವ ಧರ್ಮಪಾಲಕರು ಸೂರ್ಯವಂಶೀಯರು.

ಅಯೋಧ್ಯಾ ನಾಮ ನಗರೀ ತತ್ರಾಸೀಲ್ಲೋಕ ವಿಶ್ರುತ।
ಮನುವಾ ಮಾನವೇಂದ್ರೇಣ ಯಾ ಪುರೀ ನಿರ್ಮಿತಾ ಸ್ವಯಂ॥

ಮನು ಮಹಾರಾಜರು ಅದ್ಭುತವಾದ ಕೋಟೆಯನ್ನು ವಿಶಾಲವಾಗಿ, ಭದ್ರತೆ ಆಗಿರುವ ಶೈಲಿಯಲ್ಲಿ ನಿರ್ಮಿಸಿದರು. ಶತ್ರು ರಾಜರಿಗೆ ಕೋಟೆಯನ್ನೇರಿ ನಗರ ಪ್ರವೇಶ ಮಾಡುವುದು ಸಾಧ್ಯವಾಗುತ್ತಿರಲಿಲ್ಲ.ಎಂತಹ ಯೋಧರಿಗೂ ಭೇದಿಸಲಾಗ ದ್ದರಿಂದ ಪ್ರಜೆಗಳು ತಮ್ಮ ಪಟ್ಟಣವನ್ನು " ಅ-ಯೋಧ್ಯ" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಅಯೋಧ್ಯಾ ಸರಯೂ ನದಿಯ ತೀರದಲ್ಲಿ ಪ್ರಸಿದ್ಧವಾದ ಕೋಸಲರಾಜ್ಯದ ರಾಜಧಾನಿ. ಸತ್ಯ ವಚನ ಮತ್ತು ಧರ್ಮದ ಜೀವನ ಪ್ರಜೆಗಳ-ಪ್ರಭುಗಳ ಉಸುರಾಗಿತ್ತು, ಸ್ಕಂದ ಪುರಾಣದಲ್ಲಿ ಅಯೋಧ್ಯಾನ ಗರಿಯ ಉಲ್ಲೇಖವಿದೆ.ಸಪ್ತಪುರಿಗಳಲ್ಲಿ ಅಯೋಧ್ಯಾನಗರಿ ಪುಣ್ಯಸ್ಥಳ.ಪರಮ ಪವಿತ್ರವಾದ ಅಯೋಧ್ಯಾನಗರಿ ಏಳು ಮುಖ್ಯ ತೀರ್ಥಯಾತ್ರಾ ಸ್ಥಳದಲ್ಲಿ ಒಂದಾಗಿದೆ. ದಶರಥ ಮಹಾ ರಾಜರಿಗೆ ಮೂವರು ಪತ್ನಿಯರು.ಕೌಶಲ್ಯ, ಸುಮಿತ್ರ, ಕೈಕೇಯಿ. ಮಕ್ಕಳಾಗದಿರುವುದರಿಂದ ವಂಶ ಉದ್ಧಾರ ಹೇಗೆ ಆಗುವುದು ಎಂಬುವ ಚಿಂತೆ ಮಹಾರಾಜರಿಗೆ ಕಾಡುತ್ತಿತ್ತು. ಮಂತ್ರಿಯು ಸಾಮಂತರಾದ ಸಮಂತ್ರರೊಡನೆ ಸಮಾಲೋಚನೆ ನಡಿಸಿ, ಸರಯೂ ನದಿಯ ಉತ್ತರ ತೀರದಲ್ಲಿ ಸಿದ್ಧತೆಗಳು ನಡೆದವು. ಋಷ್ಯಶೃಂಗ ಪುತ್ರಾಕಾಮೇಷ್ಟಿ ಯಾಗವನ್ನು ಮಾಡಿಸಿ, ಯಾಗ ಫಲದಿಂದ ಪ್ರಜಾಪತಿ ಪಾಯಸವನ್ನು ದಶರಥ ರಾಜರಿಗೆ ಕೊಟ್ಟು, ತನ್ನ ಮಡದಿಯರಿಗೆ ಪ್ರಸಾದವಾಗಿ ಕೊಡಲು ಸೂಚಿಸಿ, ವಂಶ ಉದ್ಧಾರ ಆಗುವುದೆಂದು ಆಶೀರ್ವಾದ ಮಾಡಿ ದರು. ದಶರಥ ಮಹಾರಾಜರು ಯಾಗ ಫಲವಾದ ಪಾಯಸ ವನ್ನು ಮಡದಿಯರಿಗೆ ಕೊಟ್ಟರು. ಚೈತ್ರ ಮಾಸ ಶುಕ್ಲಪಕ್ಷದ ನವಮಿಯಂದು ಪುನರ್ವಸು ನಕ್ಷತ್ರದಲ್ಲಿ ಶ್ರೀರಾಮಚಂದ್ರ ಜನಿಸಿದರು. ದಶಮಿಯಂದು ಕೈಕೇಯಿಗೆ ಭರತ, ಸುಮಿತ್ರ ದೇವಿಗೆ ಲಕ್ಷ್ಮಣ ಶತೃಘ್ನರು ಜನಿಸಿದರು.ರಾಜ್ಯದ ಪ್ರಜೆಗಳೆಲ್ಲ ಸಂತಸಗೊಂಡರು.ದಶರಥ ಮಹಾರಾಜರ ಆನಂದಕ್ಕೆ ಮಿತಿಯೇ ಇಲ್ಲ. ರಾಮಚಂದ್ರರ ಅವತಾರದಿಂದ ಅಯೋಧ್ಯ ನಗರಿ ಪಾವನವಾಯಿತು.

## ರಾಮಚಂದ್ರ ಪ್ರಭುವಿನ ಗುಣಗಳು

ರಘುಕುಲ ಭೂಷಣ ಶ್ರೀ ರಾಮಚಂದ್ರಪ್ರಭುವಿನಂತೆ ಮರ್ಯಾದೆಯ ರಕ್ಷಕರು ಇನ್ನೊಬ್ಬರಿಲ್ಲ. ಶ್ರೀರಾಮ ಸಾಕ್ಷಾತ್ ಪೂರ್ಣ ಪರಬ್ರಹ್ಮ ಪರಮಾತ್ಮನಾಗಿದ್ದರೆ. ಶ್ರೀ ರಾಮಚಂದ್ರ ಪ್ರಭು ಸದ್ಗುಣಗಳ ಸಾಗರ. ಸತ್ಯ, ಸೌಹಾರ್ದತೆ, ದಯ, ಕ್ಷಮೆ, ಮೃದುತ್ವ, ಧೀರತೆ, ವೀರತೆ, ಗಾಂಭೀರ್ಯ,ಅಸ್ತ್ರ ಶಸ್ತ್ರಗಳ ಜ್ಞಾನ, ಪರಾಕ್ರಮ, ನಿರ್ಭಯತೆ, ವಿನಯ, ಶಾಂತಿ,ಸಹನೆ, ಉಪರತಿ, ಸಂಯಮ, ನಿಸ್ಪೃಹತೆ, ನೀತಿಜ್ಞತೆ, ತೇಜಸ್ಸು, ಪ್ರೇಮ, ತ್ಯಾಗ, ಗೌರವ ರಕ್ಷಣೆ, ಏಕ ಪತ್ನೀವ್ರತ, ಪ್ರಜಾರಂಜನೆ, ಬ್ರಾಹ್ಮಣ ಭಕ್ತಿ ಮಾತಾ-ಪಿತೃ ಭಕ್ತಿ, ಗುರುಭಕ್ತಿ, ಭ್ರಾತೃಪ್ರೇಮ, ಮೈತ್ರಿ, ಶರಣಾ ಗತ ವತ್ಸಲತೆ, ಸರಳತೆ, ವ್ಯವಹಾರ ಕುಶಲತೆ, ಪ್ರತಿಜ್ಞಾ ಪಾಲನೆ, ಸಾಧು ಸಂತರ ರಕ್ಷಣೆ, ದುಷ್ಟ ದಮನ, ನಿರ್ವಯರತೆ, ಲೋಕ ಪ್ರಿಯತೆ, ಬಹುಜ್ಞತೆ, ಧರ್ಮಜ್ಞತೆ, ಪವಿತ್ರತೆ, ಮುಂತಾದ ಎಲ್ಲ ಗುಣಗಳೂ ಮರ್ಯಾದಾ ಪುರುಷೋತ್ತಮ ಶ್ರೀ ರಾಮನಲ್ಲಿ ಪೂರ್ಣ ರೂಪದಿಂದ ವಿಕಾಸ ಹೊಂದಿದ್ದವು. ಜಗತ್ತಿನಲ್ಲಿ ಒಬ್ಬ ವ್ಯಕ್ತಿಯಲ್ಲೇ ಇಷ್ಟೊಂದು ಸದ್ಗುಣಗಳು ಇರುವುದು ಎಲ್ಲೂ ಕಂಡು ಬರುವುದಿಲ್ಲ. ವಾಲ್ಮೀಕಿ ರಾಮಾಯಣದ ಬಾಲಕಾಂಡ ಮತ್ತು ಅಯೋಧ್ಯ ಕಾಂಡಗಳ ಮೊದಲಲ್ಲಿ ಶ್ರೀ ರಾಮನ ಗುಣಗಳ ಅತ್ಯಂತ ಸುಂದರ ವರ್ಣನೆ ಇದೆ. ತಂದೆ - ತಾಯಿ, ಬಂಧು - ಮಿತ್ರ, ಪತ್ನಿ - ಪುತ್ರ, ಸೇವಕ-ಪ್ರಜೆ ಮುಂತಾದವರ ಜೊತೆ ಆದರ್ಶವರ್ತನೆ ಎಲ್ಲರಿಗೂ ಮಾರ್ಗದರ್ಶನ, ಧರ್ಮದ ದಾರಿ. ಹದಿನಾರು ಕಲೆಗಳ ಚಂದ್ರನಂತೆ ಶೋಭಿಸುತ. ಹದಿನಾರು ಉತ್ತಮ ಗುಣನಿಧಿ ಪ್ರಭು ಶ್ರೀರಾಮಚಂದ್ರ. ರಾಮ! ಎಂದರೆ ಲೋಕಕ್ಕೆ ಕ್ಷೇಮ ಒದಗುವ ದೇವರು. ವಾಲ್ಮೀಕಿ ಯವರು ನಾರದರನ್ನು ಚತುಷ್ಷಷ್ಠಿ ಕಲೆಗಳ ಚಂದ್ರನಂತೆ ಪುರು ಷೋತ್ತಮ ಯಾರು ಇರುವರು? ಇದಕ್ಕಿಂತಲೂ ಹೆಚ್ಚು ಗುಣಗಳ ಸಾಧ್ಯತೆ ಇದೆಯೇ? ಎಂದು ನಾರದ ಮುನಿಯನ್ನು ಪ್ರಶ್ನಿಸಿದರು. ನಾರದ ಮಹಾಮುನಿ ಇಕ್ಷ್ವಾಕು ವಂಶದಲ್ಲಿ ಜನ್ಮಿಸಿದ ಶ್ರೀ ರಾಮಚಂದ್ರರಲ್ಲಿ ಇರುವವು ಎಂದು ನುಡಿದರು. ಎಲ್ಲ ಗುಣಗಳ ನಿಧಿ ರಾಮಚಂದ್ರ ಪ್ರಭು, ಪ್ರಜಾರಂಜಕರಾಗಿ ನಾಯಕತ್ವ ಮಾಡುವ ಸಮರ್ಥರು ಎಂದು ನುಡಿದರು. ವಸಿಷ್ಠ ಮಹರ್ಷಿ, ರಮಯತೀತಿ ರಾಮಃ ಲೋಕಗಳನ್ನು ಪ್ರಜೆಗಳನ್ನು ರಂಜಿಸುವ ಪ್ರಭು ಎಂದು ಉಲ್ಲೇಖಿಸಿದರು.

## ರಾಮಾನಾಮದ ಮಹಿಮೆ

ರಾಮೋ ವಿಗ್ರಹವಾನ್ ಧರ್ಮಃ - ಧರ್ಮವೇ ಶರೀರ ಧಾರಿ ಅವತರಿಸಿದವರು ಶ್ರೀ ರಾಮಚಂದ್ರ ಪ್ರಭು. ರಾಮನ್ನಾಸ್ತಿಪರಾಯಣಂ ಪರತರಂ - ರಾಮನಿಗಿಂತ ಹೆಚ್ಚಾಗಿ ಏನೂ ಇಲ್ಲ. ರಾಮ ನಾಮದ ಮಹಿಮೆ ವರ್ಣನಾತೀತ. ಶ್ರೀ ರಾಮ ನಾಮ ಜಪಿಸುತ್ತ ವಾಲ್ಮೀಕಿಯವರು ಮಹರ್ಷಿ ಆದರು.



ಸುಂದರವಾದ ರಾಮಾಯಣವನ್ನು ರಚಿಸಿ ಶ್ರೀರಾಮ ಕೃಪೆಗೆ ಪಾತ್ರರಾಗಿ ರಾಮಲೀಲೆ, ಮಹಿಮೆಯನ್ನು ಮಾನವಾಳಿಗೆ ಅಂಕಿತ ಮಾಡಿದರು. ಬುಧಕೌಶಿಕ ಮುನಿರಾಮ ರಕ್ಷಾ ಸ್ತೋತ್ರದಲ್ಲಿ ಶ್ರೀ ವಾಲ್ಮೀಕಿ ಮಹರ್ಷಿಯನ್ನು ಕೋಗಿಲೆ ಎಂದು ವರ್ಣಿಸಿದ್ದಾರೆ.

"ಕೂಜಂತಂ ರಾಮ ರಾಮೇತಿ ಮಧುರ ಮಧು ರಾಕ್ಷರಮ್
ಅರುಹ್ಯ ಕರವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಂ"

ಕಾವ್ಯ ಎಂಬ ಮರದಲ್ಲಿ ಆಸೀನರಾಗಿ ರಾಮ - ರಾಮ ಎಂದು ಕೀರ್ತಿಸುತ ಹಕ್ಕಿಯ ಇಂಪಾದ ಧ್ವನಿಯಿಂದ ಹಾಡುತ್ತಿರುವ ವಾಲ್ಮೀಕಿ ಎಂಬ ಕೋಗಿಲೆಗೆ ನಮಸ್ಕಾರ! ಸಾಕ್ಷಾತ್ ಸ್ವಯಂಭೂ ಬ್ರಹ್ಮ ದೇವರು ಗ್ರಂಥ ಕರ್ತರಾದ ವಾಲ್ಮೀಕಿ ಅವರಿಗೆ ವರದಾನ ಕೊಟ್ಟರು.ರಾಮನ ಚರಿತ ಸಂಬಂಧಿತ ಎಲ್ಲ ಮಾತುಗಳು ನಿಮಗೆ ತನ್ನಿಂದ-ತಾನೇ ವಿದಿತವಾಗುವುದು. ಈ ವರದಾನದಿಂದ ಮಹರ್ಷಿಗಳು ಚರಿತ್ರ ನಾಯಕರಾದ ಶ್ರೀ ರಾಮಚಂದ್ರ ಪ್ರಭುವಿನ ಅವತಾರ ಕಾಲದಲ್ಲೇ ಶ್ಲೋಕ ಬದ್ಧವಾಗಿ ರಚಿಸಿದರು. ವಿಷ್ಣು ಸಹಸ್ರನಾಮ ಪಾರಾಯಣ ಪರಮಪುಣ್ಯಕರ.ಅಕ್ಷಯ ಪ್ರದಾಯಕ! ಆದರೆ ಸಮಯ ಅಭಾವ ಅಥವಾ ಬೇರೆ ಕಾರಣಗಳಿಂದ ಪಾರಾಯಣ ಆಗದಿದ್ದರೆ ಏನು ಉಪಾಯ? ಈ ಪ್ರಶ್ನೆ ಪಾರ್ವತಿದೇವಿ ಪರಮೇಶ್ವರರನ್ನು ಕೇಳಿದರು.

ಕೇನೋಪಾಯೇನ ಲಘುನಾ ವಿಶ್ಣೋರ್ನಾಮಸಹಸ್ರಕಮ್ ಪಠ್ಯತೆ ಪಂಡಿತೈ ರ್ನಿತ್ಯಂ ಶ್ರೋತುಮಿಚ್ಛಾಮ್ಯಹಮ್ ಪ್ರಭೋ।

ಸಾವಿರ ನಾಮಗಳ ಪಠನೆ ಕಷ್ಟವಾದಲ್ಲಿ ತ್ವರಿತವಾಗಿ ಫಲ ಕೊಡುವ, ಪಂಡಿತರಿಂದ ಉಚ್ಚರಿಸುವ ನಾಮ ಹೇಳಿ ಎಂದು ಪಾರ್ವತಿದೇವಿ ಕೇಳಿದರು.

"ಶ್ರೀ ರಾಮ ರಾಮೇತಿ ರಮೇ ರಾಮೇ ಮನೋರಮೇ,
ಸಹಸ್ರನಾಮ ತತ್ತುಲ್ಯಮ್ ರಾಮ ನಾಮ ವರಾನಮೇ"

"ಶ್ರೀ ರಾಮ ರಾಮ ರಾಮ" ಎಂದು ಒಂದೊಂದು ಸಲ ನುಡಿದಾಗ ಸಾವಿರಸಲ ವಿಷ್ಣು ಸಹಸ್ರನಾಮ ಉಪಾಸನೆಯ ಫಲಸಿಗುವುದು ಎಂದು ಪರಮೇಶ್ವರ ಆಶ್ವಾಸನೆ ನೀಡಿದರು.

ಶಾಂತಂ ಶಾಶ್ವತಮಪ್ರಮೇಯಮನಘಂ ನಿರ್ವಾಣ ಶಾಂತಿಪ್ರದಂ।
ಬ್ರಹ್ಮಾಶಂಭುಫಣೀಂದ್ರ ಸೇವ್ಯಮನಿಶಂ ವೇದಾಂತವೇದ್ಯಂ ವಿಭುಂ।
ರಾಮಾಖ್ಯಂ ಜಗದೀಶ್ವರಂ ಸುರಗುರುಂ ಮಾಯಾ ಮನುಷ್ಯಂ ಹರಿಂ
ವಂದೇಹಂ ಕರುಣಾಕರಂ ರಘುವರಂ ಭೂಪಾಲ ಚೂಡಾಮಣಿಂ॥

ಶಾಂತನೂ, ಸನಾತನನೂ, ಅಪ್ರಮೇಯನೂ, ನಿಷ್ಪಾಪಯುಕ್ತನು, ಮೋಕ್ಷರೂಪಿಯೂ,ಪರಮಶಾಂತಿ ಪ್ರದಾಯಕನು. ಬ್ರಹ್ಮ, ಶಂಭು, ಮತ್ತು ಆದಿಶೇಷರಿಂದ ನಿರಂತರ ಸೇವಿಸಲ್ಪಡುವನೂ, ವೇದಾಂತದ ಮೂಲಕ ತಿಳಿಯಲು ಯೋಗ್ಯನಾದವನೂ, ಎಲ್ಲ ದೇವತೆಗಳಿಗಿಂತಲೂ ದೊಡ್ಡ ದೇವರು, ಮಾಯೆಯಿಂದ ಮನುಷ್ಯ ರೂಪದಲ್ಲಿ ಕಾಣಿಸಿಕೊಳ್ಳುವನು (ಅವತಾರ ಪುರುಷ) ಸಮಸ್ತ ಪಾಪಗಳನ್ನು ಪರಿಹಾರ ಮಾಡುವವನೂ, ಕರುಣೆಯ ಗಣಿಯೂ, ರಘುಕುಲದಲ್ಲಿ ಶ್ರೇಷ್ಠನೂ ಹಾಗೂ ರಾಜರುಗಳ ಶಿರೋಮಣಿಯೂ ಆದ ಶ್ರೀ ರಾಮದೇವರಿಗೆ, ಜಗದೀಶ್ವರನಿಗೆ ನಾನು ನಮಸ್ಕಾರ ಮಾಡುತ್ತೇನೆ!

ಅತುಲಿತ ಬಲಧಾಮಂ ಹೇಮ ಶೈಲಾಭದೇಹಂ
ದನುಜವನಕೃಶಾ ನುಂ ಜ್ಞಾನಿನಾಮ ಗ್ರಗಣ್ಯಮ್।
ಸಕಲ ಗುಣ ನಿಧಾನಂ ವಾನ ರಾಣಾಮಧೀಶಂ
ರಘುಪತಿ ಪ್ರಿಯ ಭಕ್ತಂ ವಾತ ಜಾತಂ ನಮಾಮಿ॥

ಅತುಲನೀಯ ಬಲಧಾಮ, ಬಂಗಾರದ ಪರ್ವತದ ಸಮಾನವಾದ ಕಾಂತಿ ಶರೀರವುಳ್ಳ, ಜ್ಞಾನಿಗಳಲ್ಲಿ ಅಗ್ರಗಣ್ಯರು. ಸಂಪೂರ್ಣವಾದ ಗುಣಗಳ ನಿಧಿಯು, ವಾನರರ ಸ್ವಾಮಿಯು, ಶ್ರೀ ರಘನಾಥನ ಪ್ರಿಯಭಕ್ತನಾದ ಪವನಪುತ್ರ ಶ್ರೀ ಹನುಮಂತನಿಗೆ ನಮಸ್ಕಾರ ಮಾಡುತ್ತೇನೆ।

ಯದಾವರ್ಣಯತ್ಕ ರ್ಣ ಮೂಲೇಂತಕಾಲೇ
ಶಿವ್ರೋ ರಾಮ ರಾಮೇತಿ ರಾಮೇತಿ ಕಾಶ್ಯಾಮ್।
ತದೇಕಂ ಪರಂ ತಾರಕಬ್ರಹ್ಮರೂಪಂ
ಭಜೇಶಂ ಭಜೇಶಂ ಭಜೇಶಂ॥

ಕಾಶಿಕ್ಷೇತ್ರ ಪವಿತ್ರವಾದ ವಿಶ್ವನಾಥ - ಅನ್ನಪೂರ್ಣೇಶ್ವರಿದೇವಿ ನೆಲೆಸಿದ ನಗರ. ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದು. ಅಂತ್ಯಕಾಲ (ಮರಣ) ಕಾಶಿ ಕ್ಷೇತ್ರದಲ್ಲಿ ಸಹಜವಾಗಿ ಬಂದಾಗ, ಪರಮೇಶ್ವರ ಸ್ವಯಂ ಆ ಮನುಜನಿಗೆ ಕಿವಿಯಲ್ಲಿ ತಾರಕ ಮಂತ್ರ ಉಪದೇಶ ಮಾಡಿ ಮೋಕ್ಷ ಕೊಡುವರು. ಇನ್ನು ಆ ಮನುಜನಿಗೆ ಪುನರ್ಜನ್ಮ ಇಲ್ಲ. ಕಾಶಿಯಲ್ಲಿ, ಜೀವಾಂತ್ಯದ ಹೊತ್ತಿನಲ್ಲಿ ಜೀವ ಹೋಗುವಾಗ ಶರೀರದ ಕಿವಿಯಲ್ಲಿ ಶಿವನು ರಾಮ ರಾಮ ಅನ್ನುವ ಯಾವ ತಾರಕನಾಮವನ್ನು ಉಪದೇಶ ಮಾಡುವನೋ ಆ ಅದ್ವಿತೀಯ ಪರಮಶ್ರೇಷ್ಠ ತಾರಕಬ್ರಹ್ಮ ಸ್ವರೂಪನೇ ಆಗಿರುವ ಶ್ರೀರಾಮನನ್ನು ನಾನು ಸದಾ ಭಜಿಸುತ್ತೇನೆ.

ಚರಿತಂ ರಘುನಾಥಸ್ಯ ಶತಕೋಟಿ ಪ್ರವಿಸ್ತರಂ।
ಏಕೈಕ ಮಕ್ಷರಂ ಪುಂಸಾಂ ಮಹಾಪಾತಕ ನಾಶನಂ ॥

ರಘುವಂಶ ಪ್ರಭುವಾದ ಶ್ರೀರಾಮಚಂದ್ರನ ಚರಿತೆ ನೂರು ಕೋಟಿ ಶ್ಲೋಕಗಳಲ್ಲಿದೆ. ಆ ಶ್ಲೋಕಗಳಲ್ಲಿರುವ ಯಾವುದೇ ಒಂದಕ್ಷರ ವಾದರೂ ನಮ್ಮ ಮಹಾಪಾಪಗಳನ್ನು ಸಹ ಪರಿಹರಿಸುತ್ತದೆ.

ಶ್ರೀ ಪುರಂದರದಾಸರು ಹರಿಕೀರ್ತನೆಯಲ್ಲಿ ರಾಮನಾಮದ ಮಹಿಮೆಯನ್ನು ವರ್ಣಿಸಿದ್ದಾರೆ. "ರಾಮ ಮಂತ್ರವ ಜಪಿಸೋ ಹೇ ಮನುಜ। ಆ ಮಂತ್ರ ಈ ಮಂತ್ರ ನೆಚ್ಚಿ ನೀ ಕೆಡಬೇಡ ಸೋಮ ಶೇಖರ ತನ್ನ ಭಾಮೆಗೆ ಪೇಳಿದ ಮಂತ್ರ"

### ಶ್ರೀ ರಾಮ ನವಮಿ

ರಾಮನವಮಿಯನ್ನು ರಾಮದೇವರ ಹುಟ್ಟು ಹಬ್ಬವೆಂದು ಆಚರಿಸುತ್ತಾರೆ. ಚೈತ್ರ ಮಾಸದ ಶುಕ್ಲ ಪಕ್ಷದ ನವಮಿ ದಿನ ಈ ಹಬ್ಬವನ್ನು ಆಚರಿಸುತ್ತಾರೆ. ಶ್ರೀ ಹರಿ ಶ್ರೀ ರಾಮಚಂದ್ರರಾಗಿ ಅವತರಿಸಿದ ಪವಿತ್ರ ದಿನ. ಇಂದಿನ ದಿನ ವೈಷ್ಣವ ಆಲಯಗಳಲ್ಲಿ ಶ್ರೀ ಹರಿಗೆ ತುಳಸಿ ಅರ್ಚನೆ, ಹೂವಿನ ಅಲಂಕಾರ ಮಾಡಿ ವಿಷ್ಣು ಸಹಸ್ರನಾಮ ಪಠನೆ ಮಾಡುವರು. ರಾಮ ಮಂದಿರದಲ್ಲಿ ಶ್ರೀ ಸೀತಾ ರಾಮಚಂದ್ರ ಕಲ್ಯಾಣೋತ್ಸವ ವೈಭವವಾಗಿ ನಡೆಸುವರು. ಭದ್ರಾಚಲಂ ಶ್ರೀ ರಾಮ ಮಂದಿರದಲ್ಲಿ ಪ್ರತಿ ವರ್ಷ ನವಮಿಯ ತಿಥಿಯಂದು ಶ್ರೀ ಸೀತಾರಾಮ ಕಲ್ಯಾಣ ಸಕಲ ಶಾಸ್ತ್ರೋಕ್ತವಾಗಿ ವೇದ ಘೋಷೆಯಿಂದ ಭಕ್ತಿ ಶ್ರದ್ಧೆಯಿಂದ ಆಚರಿಸುವರು. ಕಲ್ಯಾಣದ ನಂತರ ಅಕ್ಷತೆಗಳನ್ನು ಭಕ್ತರಿಗೆ ಕೊಡುವರು. ರಥೋತ್ಸವದಲ್ಲಿ ಶ್ರೀ ರಾಮಚಂದ್ರ ಪ್ರಭು, ಸೀತಾಮಹಾಲಕ್ಷ್ಮಿ, ಲಕ್ಷ್ಮಣ ಸ್ವಾಮಿ, ಹನುಮ ದೇವರು ಅಲಂಕೃತರಾಗಿ, ಬಗೆ ಬಗೆಯ ಹೂಗಳ ಅಲಂಕಾರದಿಂದ ಬೀದಿಯಲ್ಲಿ ಬಂದು ಜನರಿಗೆ ದರುಶನ ಕೊಡುವ ಭಾಗ್ಯ ಸಿಗುವುದು. ರಥೋತ್ಸವ ರಾಮನವಮಿಯ ಒಂದು ಆಕರ್ಷಣೆ ಮತ್ತು ಉತ್ಸಾಹ ಭರಿತ ಸೇವೆ.

ಶ್ರೀ ರಾಮಚಂದ್ರ ಪ್ರಭುವಿನ ರಕ್ಷೆ, ಕರುಣಾ ಕಟಾಕ್ಷ ನಮ್ಮೆಲ್ಲರ ಮೇಲಿರಲಿ. ಸರ್ವೇಜನಾಃ ಸುಖಿನೋಭವಂತು.

ಮಂಗಳಂ ಕೌಸಲೇಂದ್ರಾಯ ಮಹನೀಯ ಗುಣಾತ್ಮನೇ।
ಚಕ್ರವರ್ತಿ ತಾನೂಜಾಯ ಸಾರ್ವ ಭೌಮಾಯ ಮಂಗಳಂ॥

......... ಮೂಲರಾಮೋ ವಿಜಯತೇ ! ಕೋದಂಡರಾಮೋ ವಿಜಯತೇ.................



## ಡಯಲ್ ಯುವರ್ ಇ.ಓ.

### ಯಾತ್ರಿಕ ಭಕ್ತರಲ್ಲಿ..... ವಿನಂತಿ

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು -ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ **ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ** ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.



# ವಿಶಿಷ್ಟ ಮಹಿಮೆಯ ವೈಶಾಖ ಮಾಸ

-ಶ್ರೀಮತಿ. ಕೆ.ವಿ. ಪದ್ಮಾವತಿ
9739369621

ವೈಶಾಖ ಮಾಸವು ಪ್ರಾಚೀನ ಸಂಸ್ಕೃತಿ-ಸಂಪ್ರದಾಯಗಳ ಸ್ಮಾರಕಗಳ ಆಗರ. ವಿಶಾಖ ನಕ್ಷತ್ರದ ಮೂಲಕ ಈ ಮಾಸವು ವೈಶಾಖ ಎಂದು ಹೆಸರನ್ನು ಪಡೆದಿದೆ. ಬೇಸಿಗೆಯ ನೇಸರು ತನ್ನ ಶಾಖವನ್ನು ಹರಡುತ್ತಿದ್ದರೂ ಕಾಡೆಲ್ಲವೂ ತಳಿರು-ಹಸಿರುಗಳಿಂದ ತುಂಬಿರುವುದು ಸೌರಮಾನದ ವೃಷಭ ಮಾಸವು ಈ ತಿಂಗಳಲ್ಲಿಯೇ ಪ್ರಾರಂಭವಾಗುವುದು. ವೈಶಾಖಮಾಸದ ಪ್ರಾಕೃತಿಕ ಸೌಂದರ್ಯಕ್ಕೆ ಮನಸೋತ ಸುಪ್ರಸಿದ್ಧ ಕವಿಗಳೆಲ್ಲರೂ ಇದರ ಮೇಲ್ಮೆಯನ್ನು ಮೆಚ್ಚಿಕೊಂಡಿದ್ದಾರೆ.

ವೈಶಾಖ ಮಾಸದ ಮಹಾತ್ಮವು ಹೇಳುವ ಪೌರಾಣಿಕ ಕಥೆಗಳಲ್ಲಿ ಹುದುಗಿರುವ ರಹಸ್ಯವನ್ನು ವಿಶ್ಲೇಷಿಸಿ ನೋಡುತ್ತಾ ಹೋದರೆ, ಅದರಲ್ಲಿ ಸಾಮಾಜಿಕ ಜೀವನದ ಸುಖ - ಸಮಾಧಾನಕರ ಆದರ್ಶವೇ ನಮಗೆ ಎದ್ದು ಕಾಣುವುದು.

ಕತ್ತಲೆಯ ಆಟ ಸೂರ್ಯ ಬರುವವರೆಗೆ ಮಾತ್ರ. ಪಾಪದಿಂದ ಪರದಾಟ ವೈಶಾಖ ಬರುವವರೆಗೆ ಮಾತ್ರ! ವೈಶಾಖ ಬಂದರೆ ಎಲ್ಲವೂ ಸಿದ್ಧಿಸಿದಂತೆಯೇ ಸರಿ. ಮಾಸಗಳಲ್ಲಿ ಮಿನುಗುವ ಕಾರ್ತೀಕ ಮಾಸಕ್ಕಿಂತಲೂ ಸಾವಿರದಷ್ಟು ಮಿಗಿಲಾದ ಮಾಸ ಮಾಘಮಾಸ. ಮಾಸ ರಾಜನೆನಿಸಿದ ಮಾಘಕ್ಕಿಂತ ನೂರುಪಟ್ಟು ವೈಶಿಷ್ಟ ಪೂರ್ಣವಾದುದು ವೈಶಾಖ ಮಾಸ (ಪದ್ಮಪುರಾಣ).

ಬಿಸಿಲಿನ ಝಳದಿಂದ ಬಳಲಿ ಬೆಂಡಾಗುವ ಮಾನವ ನೀರಿಲ್ಲದೆ ಬದುಕಲು ಸಾಧ್ಯವೇ? ನೀರನ್ನು ಕುಡಿಯುವಾಗ ಸಿಗುವ ನೆಮ್ಮದಿ ನೀರಿನ ಮಹಿಮೆಯಲ್ಲ. ನೀರಿನಲ್ಲಿ ಮಲಗಿದ ನಾರಾಯಣನ ಮಹಿಮೆ. ಆಷಾಢಮಾಸದಲ್ಲಿ ಕೆಸರಿನ ನೆವದಿಂದ, ಮಳೆಯ ತೊಂದರೆಯಿಂದ ಮಾನವ ಮೈಗಳ್ಳನಾದಾಗ, ಮಾಧವ ಕುಪಿತನಾದರೂ ತಾಳಿಯಾನು! ಕಾರ್ತೀಕದಲ್ಲಿ ಕತ್ತಲೆಯ ನೆಪ ಮಾಡಿ, ಕೃಷಿಯ ಕಾರಣ ಒಡ್ಡಿ ತಪ್ಪಿಸಿಕೊಳ್ಳುವವರನ್ನು ದೇವ ಕ್ಷಮಿಸಿಯಾನು ಉದರ ಪೋಷಣೆಗಾಗಿ ಧರ್ಮ ಬಿಟ್ಟ ಶೋಚನೀಯರು ಎಂದು ಖೇದ ವ್ಯಕ್ತಪಡಿಸಿಯಾನು! ಮಾಘದಲ್ಲಿ ಚಳಿಯಿಂದ ನಡುಗುತ್ತಾ ಸ್ನಾನಕ್ಕೆ ಹಿಂದೆ-ಮುಂದೆ ನೋಡುವವರನ್ನು ಸಹ ಕ್ಷಮಿಸಿಯಾನು! ಆದರೆ ವೈಶಾಖ ಮಾಸ ವೈಶಿಷ್ಟಪೂರ್ಣವಾದ ಮಾಸ. ರಾತ್ರಿ ಹೊತ್ತಾದರೂ ಮಲಗಲಾಗದ ಸೆಕೆ, ಉರಿಧಗೆಗೆ ಮಾನವನನ್ನು ಹಾಗೆಯೇ ಹಾಸಿಗೆಯಿಂದೆಬ್ಬಿಸುತ್ತದೆ! ಚಳಿಯಂತೂ ಇಲ್ಲವೇ ಇಲ್ಲ. ತಣ್ಣೀರಂತೂ ತಂಪೆರೆಯುವ ಮಹೋನ್ನತ ಸಾಧನ. ಹೀಗಿರುವಾಗಲೂ ಸ್ನಾನ ಮಾಡಲು ಮುನ್ನುಗ್ಗದ ಸೋಮಾರಿ ಮಾನವರನ್ನು ಮಾಧವ ಶಪಿಸುವುದು ಖಂಡಿತ ಎಂದಿದೆ ಸ್ಕಂದಪುರಾಣ.

ನೀರಿನಲ್ಲಿರುವ ದೇವನ ಅನುಗ್ರಹಕ್ಕಾಗಿ ಸ್ನಾನ ಮಾಡಲು ಅರುಣೋದಯಕ್ಕೆ ಸನ್ನದ್ಧವಾಗಲೇಬೇಕು. ಸನ್‌ಸ್ಟ್ರೋಕ್ ಹೊಡೆದವರಿಗೆ ನೀರಿನ ಮಹಾತ್ಮೆ ಗೊತ್ತು. ಬಾಯಾರಿದವರಿಗೆ ಅದರ ಗುಣ ಗೊತ್ತು. ಬೆವರಿನಲ್ಲಿ ತೊಯ್ದವನಿಗೆ ಅದರ ಆಯಾಸ ಪರಿಹಾರಕ ಗುಣ ಗೊತ್ತು. ಇದಕ್ಕೆ ನೀರಿನಲ್ಲಿ (ಈ ಗುಣ ಈ ಕಾಲದಲ್ಲಿ)ರುವ ದೇವನ ಸನ್ನಿಧಾನವೇ ವಿಶೇಷ ಕಾರಣ. ಈ ಮಾಸದಲ್ಲಿಯೇ ಹರಿಯು ಹಿರಣ್ಯಾಕ್ಷನನ್ನು

ಕೊಂದದ್ದು. ಈ ಮಾಸದಲ್ಲಿಯೇ ಮಧು ಎಂದು ದೈತ್ಯನನ್ನು ಕೊಂದು, ಭೂಮಿಯನ್ನು ಪರಮಾತ್ಮ ಉದ್ಧರಿಸಿದ್ದು.

ಆಗ ಭೂಮಿಯ ದೇವತೆಯು ಭಗವಂತನೊಡನೆ 12 ಮಾಸಗಳಲ್ಲಿ ಸಾಧನೆಗೆ ಯಾವ ಕಾಲ ಶ್ರೇಷ್ಠವೆಂದು ಮೆಲ್ಲನೆ ಕೇಳಿದಳು. ಭಗವಂತ ಉಸುರಿದ ವೈಶಾಖ ಮಾಸದಲ್ಲಿ ನನ್ನನ್ನು ಹೇಗೆ ಪೂಜಿಸಿದರೂ ನಾನು ಪ್ರೀತನಾಗುವೆ ಎಂದು.

ದಾನ ಜ್ಞಾನಗಳ ಪ್ರಮುಖ ಕಾರಣವಾದ ಮಗದೊಂದು ಸಾಧನ ಸ್ನಾನ. ದೇಹಶುದ್ಧಿಗೆ ಕಾರಣವಾದ ಸ್ನಾನದಂಥ ಸಾಮಾನ್ಯ ಪದ್ಧತಿಯೂ ಸಹ ಕಾಲನಿಯಮಕ್ಕೆ ಒಳಪಟ್ಟು ಶಾಸ್ತ್ರೀಯವಾಗಿ ಆಚರಿಸುವಾಗ ಅದು ಪರಮಾತ್ಮನ ಅನುಗ್ರಹಕ್ಕೆ ನೇರ ಸೋಪಾನವಾಗುತ್ತದೆ. ಸದಾ ಬಿಸಿಯಾಗಿರುವ, ದುಡಿಯುವ ದೇಹ ಒಂದು ದೊಡ್ಡ ಜನರೇಟರ್ ಯಂತ್ರದಂತೆಯೇ ಆಗಿದೆ. ಇದಕ್ಕೆ ತಾಪ ತಾಳಿಕೊಳ್ಳಲು ಶಕ್ತಿ ಬರಬೇಕಾದರೆ ವಾತಾವರಣ ತಂಪಾಗಿರುವಾಗಲೇ, ದುಡಿತಕ್ಕೆ ಆರಂಭವಾಗುವ ಮೊದಲೇ ತಣ್ಣೀರನ್ನೆರೆಯಬೇಕು. ತುಂಬಾ ದೂರ ಓಡಿದ ವಾಹನ ತಣ್ಣಗಾಗಲೀ ಎಂದು ಇಂಜಿನ್‌ಗೆ ತಣ್ಣೀರು ಹಾಕುವುದಿಲ್ಲವೆ? ನಮ್ಮ ದೇಹ ಅದಕ್ಕಿಂತಾ ಕಮ್ಮಿಯೇನು? ಹೀಗಾಗಿ ವೈದ್ಯ ಶಾಸ್ತ್ರ ತಣ್ಣೀರನ್ನೇ ಆಯ್ಕೆ ಮಾಡುತ್ತದೆ. ಅದರಲ್ಲೂ ಸಹ ಉರಿ ಧಗೆಯ ಕಾಂಕ್ರೀಟ್ ಮನೆಯ ತೊಟ್ಟಿಗಿಂತ ಹೊರ ವಾತಾವರಣದಲ್ಲಿರುವ ಭೂಮಿ, ಕೆರೆ, ಪುಷ್ಕರಿಣಿ, ನದಿ ಇವುಗಳು ಖಂಡಿತವಾಗಿಯೂ ಶ್ರೇಷ್ಠ.

ಈ ರೀತಿ ನೀರು ಸೂರ್ಯನ ಕಿರಣಗಳಿಂದ ಪರಿಶುದ್ಧವಾಗಿಯೂ, ತಂಪಾಗಿಯೂ ಇರುತ್ತದೆ. ಇಂತಹ ಜಲವು ಜಾಡ್ಯ ಹೋಗಿಸುವಂತೆ ಕ್ರಿಯಾಶೀಲತೆಯನ್ನು ತರುತ್ತದೆ. ಮೂರ್ಛೆ ಹೋಗಿ ಜ್ಞಾನತಪ್ಪಿದವನಿಗೆ ನೀರನ್ನು ಚುಮುಕಿಸಿದರೆ ಸಾಕು, ಆತ ಎಚ್ಚರಗೊಳ್ಳುವ ತಲೆ ತಿರುಗಿ ಬಿದ್ದವನಿಗೆ ನೀರು ಕುಡಿಸಿದರೆ ಆತ ಮೊದಲಿನಂತಾಗುವ, ನಿಶ್ಶಕ್ತನಾದವನು ಚಿಕಿತ್ಸಾಲಯದಲ್ಲಿದ್ದಾಗ ಅವನಿಗೆ ಶಕ್ತಿ ತುಂಬಲು ನೀಡುವುದು (ಗ್ಲೂಕೋಸ್ ವಾಟರ್) ಪ್ರಸಿದ್ಧ ಅಲ್ಲವೇ? ಡೀಹೈಡ್ರೇಷನ್‌ನಿಂದ ಕುಸಿದು ಬಿದ್ದವನಿಗೆ ನೀರಿನ ಮಟ್ಟಕುಸಿದದ್ದೇ ಕಾರಣವಲ್ಲವೆ? ನೀರು ಎಂಥವನನ್ನು ಗೆಟ್ ಅಪ್ ಮಾಡುವುದರಿಂದಲೇ ಅದಕ್ಕೇ ಅಪ್ ಎಂದೇ ಹೇಳಬಹುದು. ಅದಕ್ಕೆ ಆ ಶಕ್ತಿ ಬರಲು ಸಾಗರ ಶಾಯಿಯಾಗಿ ನಾರಾಯಣ ನೀರಲ್ಲೇ ಮಲಗಿದ್ದೇ ಕಾರಣವಾಯಿತು. ನೀರು ನರಗಳನ್ನು ಕ್ರಿಯಾಶೀಲವಾಗಿಸುತ್ತದೆ. ಮೀನಿನ ಚರ್ಮ ಮಿನುಗಲು ಅದು ನೀರಿನಲ್ಲಿರುವುದು ಕಾರಣ. ಪ್ರತಿನಿತ್ಯ ಸ್ನಾನವು ಚರ್ಮಕಾಂತಿಗೆ ಪೂರಕವೂ ಹೌದು. ಮಣ್ಣಿನ ಬಟ್ಟೆ ಶುಚಿಯಾಗಲು ನೀರಿನಲ್ಲಿ ಒಗೆಯಬೇಡವೆ? ಮಣ್ಣಿನ ಈ ದೇಹ ಶುಚಿಯಾಗಿಡಲು ನೀರಿನಿಂದ ತೊಳೆಯದಿದ್ದರೆ ಆದೀತೇ? ತಣ್ಣೀರಿನ ಸ್ನಾನವು ಪಚನಾಂಗಗಳಿಗೆ ಚುರುಕುತನವನ್ನುಂಟು ಮಾಡುವುದು ನಿಜ. ಕೇಶ ಸಂಪತ್ತಿನ ರಾಜಮಾರ್ಗವೂ ಹೌದು. ಎಣ್ಣೆ - ನೀರು ಕಾಣದ ಕೂದಲು ಜಡೆಗಟ್ಟಿ ವಕ್ರವೂ ವಿಕಾರವೂ ಆಗುವುದು ಅನುಭವ ಸಿದ್ಧ.

ನೀರು ದೇಹದ ಹೊರಗೆ ಮಾತ್ರ ಏಕೆ? ಒಳಗೂ ಬೇಕೇಬೇಕು. ಊಟದ ಮಧ್ಯೆ ನೀರು ಕುಡಿಯಿರಿ ಎಂದಿದೆ ಆಯುರ್ವೇದ. ಮಧ್ಯೆ ಮಧ್ಯೆ ಪಾನೀಯಂ ಸಮರ್ಪಯಾಮಿ ಎಂಬ ವಿಧಿಬದ್ಧ ಕ್ರಿಯೆಯೂ ಇದೆ. ಹಾಗೆಯೇ ಕಿಡ್ನಿ ಸ್ಟೋನ್ಸ್ ನಿವಾರಣೆಗೆ ಹೆಚ್ಚು ನೀರು ಕುಡಿಯಿರಿ ಎನ್ನುತ್ತದೆ ವೈದ್ಯಶಾಸ್ತ್ರ.

ಇಂತಹ ಸ್ನಾನವನ್ನು ಅರುಣೋದಯಕ್ಕೆ ಆಚರಿಸಿದರೆ ಅನಂತ ಫಲವೆಂದೂ, ಇಂತಹ ಅದ್ಭುತ ಗುಣವಿರುವುದರಿಂದಲೇ ನೀರು ಉತ್ತಮ ಔಷಧಿ ಎನ್ನುತ್ತಾರೆ. ಎಲ್ಲಕ್ಕೂ ಮಿಗಿಲಾಗಿ ಬಿಸಿನೀರು ಮೈಗೆ ಹಿತ ನೀಡುತ್ತಾ ಮೈ ಮರೆಸಿದರೆ ತಣ್ಣೀರು ಜಾಗೃತ ಮಾಡಿ,ಎಚ್ಚರದಿಂದ ದೇವರ ಸ್ಮರಣೆಗೆ ಕಾರಣವಾಗುತ್ತದೆ.ಕೆಲವರಿಗೆ ಸ್ನಾನವೇ ಗಂಟೆಗಟ್ಟಲೆ ಮೋಜಿನ ಸಾಧನ. ಶಾಸ್ತ್ರೀಯರಿಗೆ ಅದು ದೇವರ ಜೊತೆಗೆ ಮೊದಲು ಆಗ ಬೇಕಾದ ಅನಿವಾರ್ಯವಾದ ಅವಸರದ ಪೀಠಿಕೆ. ಇದರಿಂದ ದೇಹಶುದ್ಧಿಯೊಂದಿಗೆ, ಮನಃಶುದ್ಧಿಯೂ, ಕಾಲ ಸಾರ್ಥಕ್ಯವೂ ಕರ್ತವ್ಯ ತತ್ಪರತೆಯೂ ಜೀವನ ಪರ್ಯಂತವಾಯಿತು.

ನನ್ನನ್ನು ಸೇವಿಸುವವರು ಏನನ್ನೂ ಬಿಡಬೇಕಾಗಿಲ್ಲ. ಯಾವುದಕ್ಕೂ ಒತ್ತಾಯವಿಲ್ಲ. ಆದರೆ ಸೋಮಾರಿತನವನ್ನು

**ಪುಣ್ಯದ ಧಾಟಿಯೇ ಬಲು ವಿಚಿತ್ರ. ಎಂಥ ಸಮರ್ಥರು ಸಹ ಅರಿಯಲಾಗದೇ ಅಚ್ಚರಿಗೊಳ್ಳುವರು. ಅಚಿಂತ್ಯ ಶಕ್ತಿಯಾದ ಹರಿಯ ಮಹಿಮೆ ಮನುಜ ಮತಿಗೆ ಸಿಲುಕೀತೆ? (ಪದ್ಮ ಪುರಾಣ)**

**ಜೀವನದಲ್ಲಿ ಬೇಕಾದದ್ದು ಪರಿಶ್ರಮ, ಅರ್ಹತೆಗಳ ಪಟ್ಟಿಯಲ್ಲ. ಪುಣ್ಯ ಕರ್ಮಗಳ ಶ್ರದ್ಧಾನುಷ್ಠಾನ ಯೋಗ್ಯತೆ ಎಂದಿದೆ ವಿಷ್ಣು ರಹಸ್ಯ. ಪರಮಾತ್ಮನ ಆದೇಶವೆಂದು ಭಾವಿಸಿ ಮಾಡಿದ ಸಣ್ಣ ಸ್ನಾನ ಮುಕ್ತಿಯ ಸೋಪಾನವೂ ಆಗುವುದು.**

ಬಿಡಲೇಬೇಕೆಂಬ ನಿಯಮ ಇದ್ದೇ ಇದೆ ಎಂದಿದ್ದಾನೆ ಪರಮಾತ್ಮ! ಅಲ್ಲಾ, ಒಂದು ಸಣ್ಣ ಸ್ನಾನಕ್ಕೆ ಅಷ್ಟು ದೊಡ್ಡ ಮಹತ್ವವೇ? ಸ್ನಾನ ಮಾಡಿದವನಿಗೆ ಅಕ್ಷಯ ಪುಣ್ಯ. ಅತುಲ ಸಂಪತ್ತು, ಅಮಿತ ಸೌಭಾಗ್ಯ ಸಿಗುವುದೇ? ಎಂದು ಅಂಬರೀಷನೆಂಬ ರಾಜನೇ ನಾರದನನ್ನು ಕೇಳಿದನು. ಅದಕ್ಕೆ ನಾರದರು ಹೀಗೆಂದರು. ಪುಣ್ಯದ ಧಾಟಿಯೇ ಬಲು ವಿಚಿತ್ರ. ಎಂಥ ಸಮರ್ಥರು ಸಹ ಅರಿಯಲಾಗದೇ ಅಚ್ಚರಿಗೊಳ್ಳುವರು. ಅಚಿಂತ್ಯ ಶಕ್ತಿಯಾದ ಹರಿಯ ಮಹಿಮೆ ಮನುಜ ಮತಿಗೆ ಸಿಲುಕೀತೆ? (ಪದ್ಮ ಪುರಾಣ)

ಜೀವನದಲ್ಲಿ ಬೇಕಾದದ್ದು ಪರಿಶ್ರಮ, ಅರ್ಹತೆಗಳ ಪಟ್ಟಿಯಲ್ಲ. ಪುಣ್ಯ ಕರ್ಮಗಳ ಶ್ರದ್ಧಾನುಷ್ಠಾನ ಯೋಗ್ಯತೆ ಎಂದಿದೆ ವಿಷ್ಣು ರಹಸ್ಯ. ಪರಮಾತ್ಮನ ಆದೇಶವೆಂದು ಭಾವಿಸಿ ಮಾಡಿದ ಸಣ್ಣ ಸ್ನಾನ ಮುಕ್ತಿಯ ಸೋಪಾನವೂ ಆಗುವುದು.

ಒಮ್ಮೆ ಬಲಿರಾಜನಿಂದ ಸೋತ ಇಂದ್ರನು ಮೇರು ಪರ್ವತದಲ್ಲಿ ಮರೆಯಾಗಿ ಕುಳಿತಿದ್ದನು. ಆಗ ದೇವತೆಗಳು ಬೃಹಸ್ಪತ್ಯಾಚಾರ್ಯರ ನಿರ್ದೇಶನದಂತೆ ಇಂದ್ರನನ್ನು ಕರೆಸಿ ಅಕ್ಷಯ ತೃತೀಯದಂದು ಸ್ನಾನ - ದಾನ - ಜಪ ಮೊದಲಾದ ಮಂಗಳ ಕಾರ್ಯಗಳನ್ನು ಒಟ್ಟಾಗಿ ಮಾಡಿದರಂತೆ. ಇಂದು ಮಾಡಿದ ಕರ್ಮದ ನಿಮಿತ್ತದಿಂದ ಆತ ಅಕ್ಷಯ ಫಲವನ್ನು ಪಡೆದು ಪದವಿಯನ್ನು ಏರಿ ಪರಮಾತ್ಮನ ಪ್ರೀತಿಗೂ ಪಾತ್ರನಾದನು ಎಂದು ಸ್ಕಂದಪುರಾಣದಲ್ಲಿ ಹೇಳಿದೆ.ಧರ್ಮ ಸಾಧನೆ ಮಾಡಬೇಕೆನ್ನುವವರಿಗೆ ವೈಶಾಖ ಮಾಸದ ಒಂದೊಂದು ದಿನವೂ ಯೋಗ್ಯ ದಿನವೆಂದು ತಿಳಿದು ಬರುತ್ತದೆ. ಉಳ್ಳವರು ಇಲ್ಲದವರಿಗೆ ನೀಡುವುದರಲ್ಲಿಯೇ ಇಹಪರಗಳ ಸಾರ್ಥಕ್ಯವಿದೆ.

### ತೀರ್ಥಸ್ನಾನ

ಪರ್ವ ಸಮಯದಲ್ಲಿ ನೀರಿನಲ್ಲಿ ಪುಣ್ಯವನ್ನುಂಟು ಮಾಡುವ ಶಕ್ತಿಯು ವಿಶೇಷವಾಗಿ ಇರುತ್ತದೆ. ಜ್ಞಾನಿಗಳಿಂದ ಸೇವಿತವಾಗಿ ಅವರ ಅನುಗ್ರಹಕ್ಕೆ ಪಾತ್ರರಾಗಿರುವ ಜಲಕ್ಕೆ ತೀರ್ಥ ಎಂದು ಹೆಸರು. ಶರೀರದಲ್ಲಿರುವ ಇಡೀ ನಾಡಿಯೇ ಗಂಗೆ, ಪಿಂಗಳಾ ನಾಡಿಯೇ ಯಮುನ, ಸುಷಮ್ನೆಯೇ ಸರಸ್ವತಿ. ಇವು ಮೂರು ಸೇರುವ ಭ್ರೂಮಧ್ಯದ ಧ್ಯಾನಾವಗಾಹನ ಸ್ನಾನವೇ ಗಂಗಾ, ಯಮುನಾ, ಸರಸ್ವತಿ ಸಂಗಮವೆನಿಸಿದ ತೀರ್ಥರಾಜ ಪ್ರಯಾಗ.

ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಾಪನೆ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ.


1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ 0877 - 2264543 ದೂರ ವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆ ಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆ ಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk@tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು



# ರಾಮಾನುಜ ನಮನ ಪರಿಪೂರ್ಣ ತತ್ತ್ವಜ್ಞಾನಿ ಯತಿರಾಜ ರಾಮಾನುಜಾಚಾರ್ಯರು

-ಡಾ।। ಗುರುರಾಜಪೋಶೆಟ್ಟಿಹಳ್ಳಿ

ವಿವಿಧತೆಯಲ್ಲಿ ಏಕತೆ ಸಾರಿದ ಭಗದ್ರಾಮಾನುಜರ ಅವತಾರದ ನಿಮಿತ್ತ ಅವರ ದಾರ್ಶನಿಕ ಕ್ರಾಂತಿ, ಸಾಮಾಜಿಕ ಸುಧಾರಣೆಗಳ ಕುರಿತು ಕಿರು ಪರಿಚಯಾತ್ಮಕ ಬರಹ.

ಸೂರ್ಯ ಚಂದ್ರರು ಹೇಗೆ ಎಲ್ಲಾ ಕಾಲದಲ್ಲೂ ಪ್ರಸ್ತುತರೋ ಹಾಗೆ ವೇದಾಂತ ಅಂದರೆ ತತ್ವಜ್ಞಾನ ಪ್ರಸರಣ ಮಾಡಿದ ಅಚಾರ್ಯರು ನೀಡಿದ ಜ್ಞಾನ -ಭಕ್ತಿಗಳ ಪ್ರಕಾಶವೂ ಸರ್ವಕಾಲಕ್ಕೂ ಪ್ರಸ್ತುತ. ಸಾವಿರ ವರ್ಷ ಕಳೆದರು ಅಚ್ಚಳಿಯದ ಪ್ರಭಾವವನ್ನು ಉಳಿಸಿಹೋಗಿರುವ ಮಹಾನುಭಾವರು ರಾಮಾನುಜಾಚಾರ್ಯರು. ಭರತಖಂಡವು ಬಹಳ ಸಂದಿಗ್ದ ಕಾಲದಲ್ಲಿದ್ದಾಗ ನವಗ್ರಂಥ ರಚನೆಯ ಮೂಲಕ ವಿಶಿಷ್ಟಾದ್ವೈತವೆಂಬ ಆಧ್ಯಾತ್ಮಿಕ ಸಿದ್ಧಾಂತವನ್ನು ಪಸರಿಸಿ,ಭಾರತದ ತತ್ವ ಶಾಸ್ತ್ರ ಕ್ಷಿತಿಜದ ಧ್ರುವತಾರಾ ಸದೃಶ ಆಚಾರ್ಯತ್ರಯರಲ್ಲಿ ಮಧ್ಯದವರು ಸಂತ ರಾಮಾನುಜರು.ಮೋಕ್ಷಪ್ರಾಪ್ತಿಯ ಅವಕಾಶವನ್ನು ಸರ್ವರಿಗೂ ಸಮಾನವೆಂದು ಸಾರಿದ ಸಾಮಾಜಿಕ ಕ್ರಾಂತಿ ತೇಜ.

ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಷ್ಠಾಪಿಸಲು ಆದಿಶೇಷ ಅವತಾರಿಗಳಾಗಿ ತ್ರೇತಾಯುಗದಲ್ಲಿ ಶ್ರೀರಾಮನ ತಮ್ಮ ಲಕ್ಷ್ಮಣನಾಗಿ, ದ್ವಾಪರದಲ್ಲಿ ಶ್ರೀ ಕೃಷ್ಣನ ಅಣ್ಣ ಬಲರಾಮನಾಗಿ ಕಲಿಯುಗದಲ್ಲಿ ತಮಿಳುನಾಡಿನ ಶ್ರೀ ಪೆರಂಬದೂರಿನಲ್ಲಿ ಅಸೂರಿ ಕೇಶವ ಪೆರುಮಾಳ್ ಮತ್ತು ಭೂದೇವಿ ದಂಪತಿಯರಲ್ಲಿ ರಾಮಾನುಜರು ಜನಿಸಿದರು. ಮಾಧವ ಪ್ರಕಾಶರೇ ರಾಮಾನುಜರ ಶಿಷ್ಯತ್ತ್ವವನ್ನು ಸ್ವೀಕರಿಸುವಂತಾದುದು ವೈಶಿಷ್ಟ್ಯ.

ಮೊದಲಿನಿಂದಲೂ ವೈಷ್ಣವ ಧರ್ಮದ ಪ್ರಭಾವ ಇವರ ಮೇಲಿತ್ತು, ಭಕ್ತಿ ಮಾರ್ಗ ಇವರನ್ನು ಆಳವಾಗಿ ಆಕರ್ಷಿಸಿತ್ತು. ಶ್ರೀರಂಗದಿಂದ ಮಧುರೈಗೆ ಬೇಸರವಿಲ್ಲದೆ 18 ಬಾರಿ ಹೋಗಿ ಗೋಷ್ಠಿಪೂರ್ಣರನ್ನು ಒಲಿಸಿಕೊಂಡು ಅವರಿಂದ ಬಹಳ ಶ್ರಮಪಟ್ಟು, ಕಲಿತ ಗೋಪ್ಯವಾದ "ಅಷ್ಟಾಕ್ಷರಿ ಮಂತ್ರದ", ರಹಸ್ಯಾರ್ಥವನ್ನು ಸಕಲ ಚೇತನರ ಉದ್ಧಾರ ಮಾಡುವ ಉದ್ದೇಶದಿಂದ ತಿರುಕೋಟ್ಟಿಮಾರಿನ ನರಸಿಂಹ ದೇವಾಲಯದ ಗೋಪುರದ ಮೇಲಿಂದ ಮಂತ್ರವನ್ನು ಘಂಟಾಘೋಷವಾಗಿ ಸಾರಿದರು.

ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ಮಾಧವ ಪ್ರಕಾಶರ ಗೋಷ್ಠಿಯಲ್ಲಿ, ಮಹಾ ಪೂರ್ಣರು ಪಂಚ ಸಂಸ್ಕಾರ ಮಾಡಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರವರ್ತಕರಾಗಿ ದೀಕ್ಷೆಯನ್ನಿತ್ತರು.

ಮೇಲುಕೋಟೆಗೆ ಬಂದು ಚೆಲುವನಾರಾಯಣನನ್ನು ಪ್ರತಿಷ್ಠಾಪಿಸಿ, ಉತ್ಸವ ಮೂರ್ತಿಯಾಗಿ "ರಾಮಪ್ರಿಯ"ನನ್ನೂ ತಂದು ವೈರಮುಡಿ ಉತ್ಸವವನ್ನು ಪ್ರತಿವರ್ಷವೂ ನೆರವೇರಿಸಿದರು. ದ್ವಾರ ಸಮುದ್ರದ ಹೊಯ್ಸಳ ರಾಜನಾದ ವಿಠಲ ದೇವರಾಯ (ಬಿಟ್ಟದೇವನ) ಮಗಳ ಭೂತ ಚೇಷ್ಟೆಯನ್ನು ನಿವಾರಿಸಿ, ಅವನಿಗೆ ವಿಷ್ಣುವರ್ಧನ ಎಂಬ ಶ್ರೀ ವೈಷ್ಣವ ದೀಕ್ಷೆಯನ್ನಿತ್ತು ಅವನಿಂದ ಬೇಲೂರಿನ ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದರು.

ಭಗವಂತನ ಕೃಪೆಯ ತಂಪನ್ನು ಸಮನಾಗಿ ಹಂಚಿದ ಸಂತ - ರಾಮಾನುಚಾರ್ಯರು

ಶೇಷಾವತಾರಿಗಳಾಗಿ ಧರ್ಮೋದ್ಧಾರಕ್ಕಾಗಿ ಇಳೆಯಲ್ಲಿ ಅವತರಿಸಿದ ಆಚಾರ್ಯರದು ಸಂಘರ್ಷಮಯ ಜೀವನ, ಅವರ ಭಕ್ತಿ ಮಾರ್ಗ ಇಡೀ ಭಾರತದಲ್ಲಿ ಹೆಚ್ಚಿನ ಪ್ರಭಾವ ಬೀರಿ ಸನಾತನ ಧರ್ಮವನ್ನು ಕಾಪಾಡಿದ್ದು ಅವಿಸ್ಮರಣೀಯ.

ಇಂದಿದ್ದರೆ ಅದೇ ಹೆಚ್ಚು ನಾಳೆ ಏನೋ ತಿಳಿಯದು ಎಂಬಂಥ ತಾತ್ಕಾಲಿಕ ಪ್ರಜ್ಞೆಯಲ್ಲಿ ಜೀವಿಸುತ್ತಿರುವ ಜನ ಸಹಸ್ರಮಾನೋತ್ಸವವನ್ನು ಆಚರಿಸುವುದೇ?ಆಶ್ಚರ್ಯವೆನಿಸಬಹುದು. ಆದರೂ ಸತ್ಯ. ಏಕೆಂದರೆ ಸಾವಿರ ವರ್ಷ ಕಳೆದರೂ ಅಚ್ಚಳಿಯದ ಪ್ರಭಾವವನ್ನು ಉಳಿಸಿ ಹೋಗಿರುವ ಮಹಾನುಭಾವರು ರಾಮಾನುಜಾಚಾರ್ಯರು ಪೂರ್ಣಯುಸ್ಸನ್ನು 120 ವರ್ಷ ಈ ಭೂಮಿಯ ಮೇಲೆ ಕಳೆದದ್ದು ಅವರ ಭಕ್ತರ, ಶಿಷ್ಯರ, ಸಾಮಾನ್ಯ ಜನರ ಅವರ ಕೃಪೆಗೆ ಪಾತ್ರರಾದ ದೀನದಲಿತರ ಭಾಗ್ಯವೇ ಸರಿ. ಲಕ್ಷ್ಮಣ ಮುನಿ, ಎಂಬೆರುಮಾನಾರ್, ಶ್ರೀ

ಭಾಷ್ಯಕಾರರು, ತಿರುಪ್ಪಾವೈಜೀಯರ್ ರಾಜಹಂಸ, ಒಡೆಯರ್ ಮುಂತಾದ ಹದಿನೇಳು ಸಾರ್ಥಕವಾದ ನಾಮಧೇಯಗಳಿಂದ ಭೂಷಿತರಾದ ರಾಮಾನುಜಾಚಾರ್ಯರು ನಮ್ಮ ಸಮಾಜಕ್ಕೆ ನೀಡಿದ ಕೊಡುಗೆ ಎಂದರೆ ಭಕ್ತಿಯ ನೆಲೆಯಲ್ಲಿ ಸಾಮಾಜಿಕ ಏರುಪೇರುಗಳನ್ನು ಸಮಗೊಳಿಸಿ ವರ್ಣ ಜಾತಿ ವರ್ಗಗಳ ಅನ್ಯೋನ್ಯತೆಯನ್ನು ಬೆಳೆಸಿದ್ದು. ಅವರ ಶ್ರೀ ಭಾಷ್ಯ ಅಂದರೆ ಬ್ರಹ್ಮ ಸೂತ್ರಗಳಿಗೆ ಬರೆದಿರುವ ವ್ಯಾಖ್ಯಾನದ ಮಂಗಳ ಶ್ಲೋಕವೇ ಅವರು ಭಕ್ತಿಗೆ. ನೀಡಿದ ಪಾರಮ್ಯತೆಯನ್ನು ಎತ್ತಿ ತೋರುತ್ತದೆ. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳೆಂಬ ಲೀಲಾ ವಿನೋದದಲ್ಲಿ ನೆಲೆಸಿರುವ ಸಕಲ ಲೋಕನಾಯಕನೂ ಪರಬ್ರಹ್ಮನೂ ಆದ ಶ್ರೀನಿವಾಸನಲ್ಲಿ ನನ್ನ ಬುದ್ಧಿಯೆಲ್ಲವೂ ಭಕ್ತಿಯಾಗಿ ಮಾರ್ಪಡಲಿ, ಎಂದು ಹಾಡಿದ್ದಾರೆ ಆಚಾರ್ಯರು.

ಭಗವದ್ರಾಮಾನುಜರು ಆಧ್ಯಾತ್ಮ ಕ್ಷೇತ್ರದ ದಿಗ್ಗಜರು. ಸ್ವತಃ ಪರಮಾತ್ಮನನ್ನು ಕಂಡು ಆ ದಿವ್ಯವೈಭವವನ್ನು ಅನುಭವಿಸಿ ಪರವಶರಾಗಿ ಹಾಡಿದವರು. ರಾಜಾಶ್ರಯದಲ್ಲಿದ್ದ ಅಂದಿನ ಧರ್ಮ ಮತ್ತು ಸಮಾಜ ವ್ಯವಸ್ಥೆಯನ್ನು ದೇವಸ್ಥಾನದ ತೆಕ್ಕೆಗೆಳೆದು ಅದನ್ನೆ ಸಾಮಾಜಿಕ ಕೇಂದ್ರವಾಗಿ ಪರಿವರ್ತಿಸಿ ಅವರ್ಣಿಯರಿಗೂ ಸಮಾಜದ ಮುಖ್ಯವಾಹಿನಿಯಲ್ಲಿ ಸ್ಥಾನ ಕಲ್ಪಿಸಿದರು.

ರಾಮಾನುಜರು ವಿಶಿಷ್ಟಾದ್ವೈತ ಮತ ಪ್ರಚಾರಕ್ಕಾಗಿ ಭಾರತದಲ್ಲೆಲ್ಲ ಸಂಚಾರ ಮಾಡಿದರು.ತೊಂಡನೂರು ನರಸಿಂಹ ದೇವಾಲಯದಲ್ಲಿ ರಾಮಾನುಜರನ್ನು ವಾದ ಮಾಡಲು ಕರೆದಾಗ, ಆದಿಶೇಷಾಂಶರಾದ ಆಚಾರ್ಯರು ದೇವಾಲಯದ ಹಿಂಬದಿಯಲ್ಲಿ ಒಂದು ಸಾವಿರ ರೂಪದಿಂದ ಅವರಿಗೆ ಉತ್ತರ ಕೊಟ್ಟು ಸಂಪೂರ್ಣವಾಗಿ ಜಯಿಸಿದರು. ಅದರ ನೆನಪಿಗಾಗಿ ಈಗಲೂ ತೊಂಡನೂರು ನರಸಿಂಹ ದೇವಾಲಯದ ಗೋಡೆಯ ಮೇಲೆ ರಾಮಾನುಜರ ಸಹಸ್ರಫಣಿಯುತರಾಗಿ ಗೋಚರಿಸುವುದನ್ನು ಕಾಣಬಹುದು.



**ಮುಸಲ್ಮಾನ ಅರಸನ ಬಳಿ ಹಿಂದೂ ದೇವರ ವಿಗ್ರಹ! ಅದನ್ನು ಬಿಟ್ಟಿರಲಾರೆ ಎಂದು ಅರಸು ಕುವರಿ, ಕನಸಿನಲ್ಲಿ ದೇವರು ತಿಳಿಸಿದಂತೆ ಓರ್ವ ಧರ್ಮಗುರು ವಿಗ್ರಹವನ್ನು ಪಡೆಯುವುದು; ಅದನ್ನೇ ಹಿಂಬಾಲಿಸಿಕೊಂಡು ಬಂದ ಮುಸಲ್ಮಾನ ರಾಜ ಪುತ್ರಿ ಅವರ ಸೇವೆಯಲ್ಲೇ ಕಣ್ಮರೆಯಾಗುವುದು.ಹಿಂದೂಗಳ ಯಾತ್ರಾ ಸ್ಥಳದಲ್ಲಿ ಮುಸಲ್ಮಾನ ಯುವತಿಯ ಮೂರ್ತಿ! ಎಂಥ ಸೋಜಿಗದ ಕಥೆ!**

**ಮೇಲುಕೋಟೆ, ಕರ್ನಾಟಕ ರಾಜ್ಯದ ಪ್ರಸಿದ್ಧ ಯಾತ್ರಾ ಸ್ಥಳ, ಅಲ್ಲಿನ ಚೆಲುವನಾರಾಯಣ ಸ್ವಾಮಿಯನ್ನು ಪ್ರತಿಷ್ಠೆ ಮಾಡಿದವರು ಧರ್ಮಗುರು "ರಾಮಾನುಜಾಚಾರ್ಯರು". ವಿಗ್ರಹ ವನ್ನು ರಾಮಾನುಜಾಚಾರ್ಯರು ದೆಹಲಿಯ ಸುಲ್ತಾನನಿಂದ ಪಡೆದರೆಂದು ನಂಬಿಕೆಯಿದೆ. ಕನಸಿನಲ್ಲಿ ನಾರಾಯಣ ದೇವರು ಹೇಳಿದಂತೆ ತಮಗೆ ಬೇಕಾದ ರಾಮಪ್ರಿಯ ವಿಗ್ರಹವನ್ನು ರಾಮಾನುಜರು ಆರಿಸಿ ಸುಲ್ತಾನನಿಂದ ಪಡೆದರು ಸುಲ್ತಾನನ ಮಗಳು ಬೀಬಿನಾಚ್ಚಿಯಾರ್ ಆ ವಿಗ್ರಹವನ್ನು ಪ್ರೀತಿಸುತ್ತಿದ್ದಳು. ಅದನ್ನು ಬಿಟ್ಟಿರಲಾರದೆ ಮೇಲುಕೋಟೆಗೆ ಬಂದಳು. ಅಲ್ಲಿಯೇ ದೇವನಲ್ಲಿ ಐಕ್ಯಳಾದಳು-ಎಂದು ಹೇಳುತ್ತಾರೆ. ಬೀಬಿನಾಚ್ಚಿಯಾರ್ ಮೂರ್ತಿಯನ್ನು ಮೇಲುಕೋಟೆಯಲ್ಲಿ ಈಗಲೂ ಕಾಣಬಹುದು.**

ರಾಮಾನುಜರು ಬೋಧಿಸಿದ ಧರ್ಮಕ್ಕೆ ವಿಶಿಷ್ಟಾದ್ವೈತವೆಂದು ಹೆಸರು. ಶ್ರೀ ಶಂಕರಾಚಾರ್ಯರು ಬೋಧಿಸಿದ್ದು ಅದ್ವೈತ. ಅದ್ವೈತದಲ್ಲಿ ಯಾವ ಗುಣಗಳು ಎಲ್ಲದ ನಿರ್ಗುಣ ಬ್ರಹ್ಮದ ತತ್ತ್ವವನ್ನು ಹೇಳಲಾಗಿದೆ. ಆದರೆ ವಿಶಿಷ್ಟಾದ್ವೈತದಲ್ಲಿ ಸಗುಣೇಶ್ವರ ಉಪಾಸನೆಯನ್ನು ಹೇಳಿದೆ, ಎಂದರೆ ದೇವರಿಗೆ ಅನಂತ ಕಲ್ಯಾಣ ಗುಣಗಳಿವೆ.ದೇವರಿಗಿರುವ ಕಲ್ಯಾಣ ಗುಣಗಳು (ಒಳ್ಳೆಯ ಗುಣಗಳು) ಅನೇಕವಾದರೂ ಅವುಗಳಲ್ಲಿ ಮುಖ್ಯವಾದುವು ಸತ್ಯ, ಸೌಶೀಲ್ಯ ಮತ್ತು ಸೌಂದರ್ಯ. ಜೀವ ಮತ್ತು ಜಗತ್ತುಗಳಿಂದ ವಿಶಿಷ್ಟನಾದ ಬ್ರಹ್ಮನ ಅದ್ವೈತವನ್ನು ಬೋಧಿಸಿದ ಧರ್ಮ ವಿಶಿಷ್ಟಾದ್ವೈತ . ವೈಷ್ಣವ ಸಂಪ್ರದಾಯವೂ, ವಿಷ್ಣು ದೇವಾಲಯಗಳೂ ಬಹಳ ಹಿಂದಿನಿಂದ ಇದ್ದರೂ ವಿಶಿಷ್ಟಾದ್ವೈತವನ್ನು ವಿಶೇಷವಾಗಿ ಪ್ರಚಾರ ಮಾಡಿದವರು ರಾಮಾನುಜಾಚಾರ್ಯರು.

ರಾಮಾನುಜಾಚಾರ್ಯರು ಜಾತಿ ಭೇದವಿಲ್ಲದೆ ಎಲ್ಲರಿಗೂ ಬೋಧಿಸಿದರು. ಎಲ್ಲರನ್ನು ತಮ್ಮ ಮತಕ್ಕೆ ಸೇರಿಸಿಕೊಂಡರು. ಹಿಂದುಳಿದವರನ್ನು ಬಹಳ ಮಮತೆಯಿಂದ, ಪ್ರೇಮದಿಂದ ಕಂಡು ಅವರಿಗೆ ಭಕ್ತಿ ಮಾರ್ಗ ತೋರಿಸಿದರು.

ಬಿಗಿಯಾಗಿದ್ದ ಅಂದಿನ ಸಾಮಾಜಿಕ ಕಟ್ಟಳೆಗಳನ್ನು ಮೀರಿ ಸಮಾನತೆಯನ್ನು ತಂದ ರಾಮಾನುಜರ ಬೌದ್ಧಿಕ ಸಾಹಸ ಅಸಾಮಾನ್ಯವಾದುದು. ಶ್ರೀ ವೈಷ್ಣವ ದೇವಾಲಯಗಳನ್ನು ನೋಡಿದಾಗ, ಈ ಸರ್ವಸಮಾನತೆಯು ತತ್ವ, ರಾಮಾನುಜರ ಸುಧಾರಣೆಗಳ ಮಹತ್ವ ತಿಳಿಯುತ್ತದೆ. ಭಕ್ತರೇ ಭಗವಂತನಿಗೆ ಅತಿಪ್ರಿಯರೆಂಬುದನ್ನು ಆಳ್ವಾರರಿಗೆ ಇರುವ ಸನ್ನಿಧಿಗಳು ತಿಳಿಸುತ್ತದೆ.

ಮೇಲುಕೋಟೆಯ ಚೆಲುವನಾರಾಯಣನ ಪದತಲದಲ್ಲಿ ಇರುವ ಬೀಬಿನಾಚ್ಚಿಯಾರ್‌ಗೆ ನಿತ್ಯ ನೆರವೇರಿಸುವ ಪೂಜಾ ಕಾರ್ಯಕ್ರಮ ರಾಮಾನುಜ ಮತದ ಉದಾರತೆಯನ್ನು ಭಕ್ತಿಯೆಂಬುದು ಮುಕ್ತಿಗೆ ಏಕೈಕ ಅರ್ಹತೆಯಾಗಿದೆ ಎಂದು ಘೋಷಿಸುತ್ತದೆ.



ಜ್ಞಾನ- ಭಕ್ತಿ ವೈರಾಗ್ಯಗಳ ಸಾಮರಸ್ಯವನ್ನು ಸ್ಥಾಪಿಸಿ ವ್ಯಕ್ತಿಶೀಲದೊಂದಿಗೆ ವಿಶ್ವಕಲ್ಪನೆಯನ್ನು ಬೋಧಿಸಿದ ದಿವ್ಯಾತ್ಮ, ಬುದ್ಧಿ ಹೃದಯ ಆದರ್ಶ ಯಥಾರ್ಥ ಇಹ-ಪರ ಇಲ್ಲದರ ಮಧುರ ಮಿಲನವನ್ನು ಸಾಧಿಸಿ ಇಂದ್ರಿಯ ಹಾಗೂ ಆತ್ಮ ಕಲ್ಯಾಣಗಳಿಗೆ ನೇರವಾಗಿ, ಎಲ್ಲರ ಅನುಭವಕ್ಕೂ ನಿಲುಕುವಂತಹ ಸಿದ್ಧಾಂತವನ್ನು ಸ್ಥಾಪಿಸಿದ ನೇತಾರ.

ಶ್ರೀ ಲಕ್ಷ್ಮೀನಾರಾಯಣನೇ ಪರತತ್ತ್ವ, ಚೇತನ, ಅಚೇತನಗಳೆಲ್ಲವೂ ಅವನಿಗೆ ಅಧೀನವಾದುವು ಮಾನವನು ತನ್ನ ಆತ್ಮೋನ್ನತಿ ಮತ್ತು ಶಾಶ್ವತ ಸುಖವಾದ ಮೋಕ್ಷ ಇವೆರಡನ್ನು ಪಡೆಯಲು ಶ್ರೀಮನ್ನಾರಾಯಣನಲ್ಲಿ ದೃಢವಾದ ವಿಶ್ವಾಸ ಪೂರ್ವಕ ಶರಣಾಗತಿಯಿಲ್ಲದೆ ಬೇರೆ ಗತಿ ಇಲ್ಲ-ಇದು ರಾಮಾನುಜರ ಉಪದೇಶ.

ತಮ್ಮ ನೂತನ ಶರೀರ - ಶರೀರ ಸಂಬಂಧ ಸಿದ್ಧಾಂತದ ಮೂಲಕ ಭೇದ-ಅಭೇದ ಶೃತಿವಾಕ್ಯಗಳಲ್ಲಿ ಸಮನ್ವಯ, ಪಾಂಚರಾತ್ರ ಆಗಮದ ಪ್ರಮಾಣ ಸ್ಥಾಪನೆ ದೇವಾಲಯಗಳ ನಿರ್ಮಾಣ ಆಗ ಮೋಕ್ಷ ಪೂಜಾ ವ್ಯವಸ್ಥೆ ಪ್ರಪತ್ತಿಯ ಮೂಲಕ ಎಲ್ಲರಿಗೂ ಮೋಕ್ಷ ಇವು ರಾಮಾನುಜರು ಸಾಧಿಸಿದ ಐದು ಮಹತ್ಕಾರ್ಯಗಳು.

ಹಿಂದೆ ನಮ್ಮಲ್ಲಿ ಹುಟ್ಟಿದ ಸಾಂಖ್ಯವೇ ಮೊದಲಾದ ದರ್ಶನಗಳು ಇಂದಿನ ವೈಜ್ಞಾನಿಕ ಬೌದ್ಧಿಕ ಅನ್ವೇಷಣೆಗಳಾಗಿ, ಬೌದ್ಧಿಕ ಸಿದ್ಧಿಗಳಾಗಿ ಅಸ್ತಿತ್ವವನ್ನು ಹೊಂದಿದ್ದವು ಅವುಗಳು ಧಾರ್ಮಿಕ ಮತಗಳಾಗಲಿಲ್ಲ ಪಂಥಗಳೂ ಆಗಲಿಲ್ಲ.ಆದರೆ ತ್ರಿಮತಗಳು ಧಾರ್ಮಿಕ ಪಂಥಗಳಿಗೂ ದಾರಿ ಮಾಡಿಕೊಟ್ಟು ಅನುಯಾಯಿಗಳನ್ನು ಹೊಂದಿ ಆಚಾರ ವಿಚಾರಗಳ ಎರಡೂ ಘಟ್ಟದಲ್ಲಿಯೂ ಅಸ್ತಿತ್ವವನ್ನು ಪ್ರಚಾರವನ್ನು ಪಡೆದವು. ರಾಮಾನುಜ ಮತವು ಶ್ರೀವೈಷ್ಣವ ಮತವಾಗಿ ಪ್ರಖ್ಯಾತವಾಗಿ ಎಲ್ಲ ವರ್ಗಗಳನ್ನು ಆಕರ್ಷಿಸಿ ಏಕ ಸೂತ್ರದಲ್ಲಿ ಬಂಧಿಸುವುದರಲ್ಲಿ ಯಶಸ್ವಿಯಾಯಿತು. ಅದರ ಸೈದ್ಧಾಂತಿಕ ಉದಾರತೆಯಿಂದ ಒಂದು ಕ್ರಾಂತಿಕಾರಕ ವಾತಾವರಣವನ್ನು ಅದು ಉಂಟು ಮಾಡಿತು. ಅಂತೆಯೇ ಅವರು ತಂದ ಸುಧಾರಣಾ ಕ್ರಮಗಳಿಗೆ ಇಟ್ಟ ಸಮಾನತೆಯ ಹೆಜ್ಜೆಗಳಿಗೆ,ಕೊಟ್ಟು ಪಾರಮಾರ್ಥಿಕ ಚಿಂತನೆಗಳಿಗೆ ಹೊಸ ಕ್ರಾಂತಿಕಾರೀ ಆಯಾಮವನ್ನು ಕೊಟ್ಟ ರಾಮಾನುಜ ದರ್ಶನ,“ಇಹ”ವನ್ನು ಬದಲಾಯಿಸುತ್ತ, ಪರದ ದರ್ಶನವನ್ನು ಕೊಟ್ಟಿತು ಎಂಬುದನ್ನು ನಾವು ವಿಶೇಷವಾಗಿ ಗಮನಿಸಬೇಕು.

**ರಾಮಾನುಜ ನಮನ**

1. ಭಗವದ್ ಭಕ್ತಿಯ ನೆಲೆಯಲ್ಲಿ ವರ್ಣ-ಜಾತಿ-ವರ್ಗಗಳ ಅನ್ಯೋನ್ಯತೆಯನ್ನು ಸಮಾಜದಲ್ಲಿ ಬೆಳೆಸಿದುದು. ಕೇವಲ ಸಂಸ್ಕೃತ ವೇದಗಳು ಮಾತ್ರವಲ್ಲದೆ ಜಾನಪದ ದ್ರಾವಿಡ ವೇದಗಳಿಗೂ ದೇವರ ಪೂಜೆಯಲ್ಲಿ ದೇವಾಲಯಗಳಲ್ಲಿ ಸ್ಥಾನಮಾನವನ್ನು ದೃಢಪಡಿಸಿದುದು.

2. ಭಗವದ್ ಭಕ್ತಿಯಿರುವಂತಹ ಚಂಡಾಲ ಜಾತಿಯವರಿಗೆ ಮೇಲುಕೋಟೆ ಚೆಲುವನಾರಾಯಣನ ಸೇವೆ ಮಾಡಲು ಶಾಸ್ತ್ರ ವಿರೋಧವಿಲ್ಲದಂತೆ ವ್ಯವಸ್ಥೆ ಮಾಡಿದುದು.

3. ಶ್ರೀ ರಂಗದಲ್ಲಿ ಆರೋಗ್ಯ ಶಾಲೆಯನ್ನು ಏರ್ಪಡಿಸಿ ಸಾರ್ವಜನಿಕರಿಗೆ ಉಚಿತ ಚಿಕಿತ್ಸೆ ಔಷಧಗಳಿಗೆ ವ್ಯವಸ್ಥೇ ಮಾಡಿದುದು.

4. ಎಪ್ಪತ್ನಾಲ್ಕು ಗೃಹಸ್ಥಪೀಠಗಳನ್ನು ಏರ್ಪಡಿಸಿ ನಾನಾ ರಾಜ್ಯದ ಜನಸಾಮಾನ್ಯರಿಗೆ ಭಕ್ತಿ

ಪ್ರಪತ್ತಿ ವಿಚಾರಗಳನ್ನು ಪ್ರಚುರಪಡಿಸುವಂತೆ ಸಂಚಾರಿ ಗುರುಗಳನ್ನು ಏರ್ಪಡಿಸಿದುದು.

5. ಜಾನಪದ ನಾನಾ ಜಾತಿಗಳಲ್ಲೂ ದಾಸಯ್ಯನೆಂಬುವರಿಗೆ ದೀಕ್ಷೆ ಕೊಟ್ಟು ಆಯಾ ಜಾತಿಯವರನ್ನು ಜಾತಿಕೆಡಿಸದೇ ಸ್ವಧರ್ಮದಲ್ಲಿ ಪರಿಶುದ್ಧವಾಗಿರುವಂತೆ ನೋಡಿಕೊಳ್ಳುವ ವ್ಯವಸ್ಥೆ ಮಾಡಿದುದು.

6. ತೊಣ್ಣೂರು ಮುಂತಾದ ಕಡೆ ದೊಡ್ಡ ಕೆರೆಗಳನ್ನು ಕಟ್ಟಿಸಿ ಕೃಷಿಕರಿಗೂ ಸ್ನಾನಾನುಷ್ಠಾನ ಪರರಿಗೂ ತೀರ್ಥ ಶುದ್ಧಿಯ ಜೊತೆ ಧಾನ್ಯ ಸಮೃದ್ಧಿಯೂ ಆಗುವಂತೆ ಮಾಡಿದುದು.


7. ತಿರುಪತಿಯ ಬಳಿ ಮಂಡಯಂ ಎಂಬ ಐದು ಅಗ್ರ ಹಾರಗಳನ್ನು ಏರ್ಪಡಿಸಿ ಕಾಡುಗಳನ್ನು ನಾಡನ್ನಾಗಿ ಮಾಡಿದುದು. ಇದನ್ನು ರಾಮಾನುಜರು ತಮ್ಮ ಪಾದಕಾಣಿಕೆಯಾಗಿ ಬಂದ ಹಣದಿಂದ ಭೂಮಿಯನ್ನು ಖರೀದಿಸಿ ಮಾಡಿದರು.

8. ಬಿಳಿಗಿರಿರಂಗನಬೆಟ್ಟದ ಸೋಲಿಗರಿಗೆ ಅನುಗ್ರಹಿಸಿ ಅವರ ಮೂಲದೇವರಾದ ಕಂಕಣ ಲಕ್ಷ್ಮಿಗೆ ರಂಗನೊಡನೆ ಮದುವೆ ಮಾಡಿಸಿ ಉಚ್ಚನೀಚ ಕುಲಗಳಲ್ಲಿ ಭಗವದ್ ಭಕ್ತಿಯಿಂದ ಅನ್ಯೋನ್ಯತೆ ಏರ್ಪಡಿಸಿದುದು.

9. ಅಷ್ಟಾಕ್ಷರವೆಂಬ ಮಂತ್ರಕ್ಕೆ ವೈದಿಕ ಅವೈದಿಕ ಭೇದವಿಲ್ಲದಂತೆ ಪ್ರಯೋಗವಿರುವುದನ್ನು ಆಗಮ ಕಲ್ಪಗಳಿಂದ ನಿರ್ಣಯಿಸಿ, ಅರ್ಹರಾದ ಎಲ್ಲರಿಗೂ ಮಂತ್ರೋಪದೇಶ ಮಾಡಿ, ಮಂತ್ರದ ವಿವರಣೆಯ ಮೂಲಕ ವೇದಂತಾರ್ಥಗಳನ್ನು ತಿಳಿಸಿದುದು.

10. ತಮ್ಮ ಜೀವಿತಾವಧಿಯ ಮೂರನೆಯ ಒಂದು ಭಾಗ ಸಮಯವನ್ನು ಸುಮಾರು 36 ವರ್ಷಗಳನ್ನು ಕನ್ನಡನಾಡಿನ ಜನತೆಯ ಏಳಿಗೆಗಾಗಿ ಮೀಸಲಿರಿಸಿ ಸಂಚರಿಸಿದುದು. (ಕೋಣನ ಕಲ್ ಬೆಟ್ಟದ ಶಾಸನ)

11. ಮೇಲುಕೋಟೆಯ ಚೆಲುವನಾರಾಯಣದ ಸೇವೆಗಾಗಿ 18 ಜಾತಿಯ ಜನರಿಗೂ ನಿವಾಸ ಶ್ರೇಣಿಗಳನ್ನು ಏರ್ಪಡಿಸಿ ಹಳೆಯ ಕೋಟೆಯ ಒಳಗೂ ಹೊರಗೂ 'ತಿರುನಾರಾಯಣ ಪುರ' ನಗರವನ್ನು ಏರ್ಪಡಿಸಿದುದು.



12. ದೆಹಲಿಯ ಧಿಲು ಎಂಬ ದೇಶದಲ್ಲಿದ್ದ ರಾಮಪ್ರಿಯ ದೇವ ಮೂರ್ತಿಯನ್ನು ಯಾದಗಿರಿಗೆ ಹಿಂತಿರುಗಿಸಿ ಕರೆತಂದು ಧಿಲುವಿನ ಮ್ಲೇಚ್ಛ ರಾಜನ ಮಗಳ ಭಗವದ್ ಭಕ್ತಿಗೆ ಮೆಚ್ಚಿ ದೇವರ ಪಾದದಲ್ಲಿ ಲಕ್ಷ್ಮೀ ರೂಪದಲ್ಲಿ ಅವಳ ವಿಗ್ರಹ ಸ್ಥಾಪಿಸಿದುದು ಮತ್ತು ಮ್ಲೇಚ್ಛರಿಗೂ ದೇವರ ಸೇವೆಗಳಿಗೆ ಅವಕಾಶ ಮಾಡಿದುದು.

13. ಏಳುನೂರು ( 700) ಸನ್ಯಾಸಿಗಳನ್ನು 12,000 ನಾನಾ ವರ್ಣಜಾತಿಗಳ ಏಕಾಂಗಿ ಸ್ವಯಂ ಸೇವಕರನ್ನು ಭಕ್ತಿ ಮಾರ್ಗದ ವಿಸ್ತರಣೆಗೆ ಜೊತೆಗಿಟ್ಟುಕೊಂಡು ಮೂರು ಸಲ ಭಾರತದಾದ್ಯಂತ ಸಂಚರಿಸಿದುದು.

14. ಕನ್ನಡ ನಾಡಿನಲ್ಲಿ ರಾಮಾನುಜರ ಪ್ರಭಾವದಿಂದ ಸುಮಾರು ಇನ್ನೂರು (200) ವರ್ಷಗಳಲ್ಲಿ ಇಪ್ಪತ್ತಾರು ಸಾವಿರ (26,000) ದೇವಾಲಯಗಳೂ ಸಾರ್ವಜನಿಕರ ಭಕ್ತಿ ಸೇವೆಗೆ ರಾಜ-ಮಹಾರಾಜ ರಾಣಿ ಮಂತ್ರಿ ಸೇನಾಪತಿ ಧನಿಕ ವೈಶ್ಯರಿಂದಲೂ ಶೂದ್ರ ಭಕ್ತರಿಂದಲೂ ಸ್ಥಾಪಿತವಾಗಿರುವುದು ಗಮನಾರ್ಹ.



# ಹರಿದಾಸ ವಾಙ್ಮಯದಲ್ಲಿ ಶ್ರೀ ವೇಂಕಟಾಚಲಧೀಶನು

- ಸುಸ್ವರಂ ನಾಗರಾಜಾಚಾರ್ಯ



ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ।
ಶಕ್ಯ ಏವಂ ವಿಧೋ ದಷ್ಟ್ರುಂ ದೃಷ್ಟವಾನಸಿ ಹಂ ಯಥಾ ॥
ಭಕ್ತ್ಯಾತ್ವ ನನ್ಯಯಾ ಶಕ್ಯಃ ಅಹಾಮೇವಂ ವಿಧೋರ್ಜನ।
ಜ್ಞಾತುಂ ದುಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥
(ಗೀತಾ - 11-53, 54)

ಭಗವದನುಗ್ರಹಕ್ಕೆ ಮೋಕ್ಷ ಸಾಧನೆಗೆ ಕೇವಲ ವೇದಾಧ್ಯಯನ ತಪಸ್ಸು, ದಾನ, ಯಜ್ಞಗಳೊಂದೇ ಸಾಲದು. ಅನನ್ಯವಾದ ಭಕ್ತಿ ಸಹಾ ಇವೆಲ್ಲರ ಜೊತೆಗಿದ್ದರೆ ಮಾತ್ರವೇ ಮೋಕ್ಷ ಸಿದ್ಧಿಸಬಲ್ಲದೆಂದು ಶ್ರೀ ಕೃಷ್ಣನ ಅಭಿಪ್ರಾಯವಾಗಿದೆ.ಇದೇ ಭಾವವನ್ನು ಪ್ರಹ್ಲಾದನು ಸಹಾ ಭಾಗವತದಲ್ಲಿ ಪ್ರಾಸಂಗಿಕವಾಗಿ ತಿಳಿಸುವಂಥವನಾಗಿದ್ದಾನೆ.


ಮನ್ಯೇ ಧನಾಭಿ ಜನರೂಪ ತಪಃ ಶೃತೌಜ।
ಸ್ಯೆಜ ಪ್ರಭಾವ ಬಲ ಪೌರುಷ ಬುದ್ಧಿಯೋಗಾಃ॥
ನಾರಾಧನಾ ಯಾಹಿ ಭವಂತಿ ಪರಸ್ಯಪುಂಸೋ।
ಭಕ್ತ್ಯಾತುತೋಷ ಭಗವಾನ್ ನನು (ಗಜ) ಯಥಾ ಪಾಯ
(ಶ್ರೀ ಮದ್ಭಾಗವತಂ)

ತಪಮುನ್ ವಂಶಮುದೇಜಮುನ್
ಶ್ರುತಮು ಸೌಂದರ್ಯಂಬು ನಂದ್ಯೋಗಮುನ್
ನಿಪುಣತ್ವಂಬು ಬ್ರತಾಪ ಪೌರುಷ
ಮುಲುನ್ ನಿಷ್ಠಾಬಲ ಪ್ರಜ್ಞಲನ್
ಜಪಹುಮಂಬುಲು ಜಾಲವೀಶ್ವರ
ಭವತ್ಸಂತುಷ್ಠಿರ್ಯೆದಂತಿ ಯೂ -
ಥವುಜಂದುಬುನ ಭಕ್ತಿ ಚೇಯವಲಯು
ದಾತ್ಪರ್ಯ ಸಂಯುಕ್ತ ದ್ಯೆ॥
(ಪೋತನ - ಆಂಧ್ರ ಭಾಗವತಂ)

ಈ ಭಾವವನ್ನು ಹರಿದಾಸ ಶ್ರೇಷ್ಠರಾದ ಶ್ರೀ ವಿಜಯ ದಾಸರು ಹೀಗೆ ಸ್ಪಷ್ಟೀಕರಿಸುತ್ತಾರೆ -

ದಾರ್ಮಕೆ ಸಿಲುಕ। ಸ್ನಾನಮೌನಕೆ ಸಿಲುಕ।
ಗಾನ ಯೋಗಕೆ ಸಿಲುಕ। ಕಾಣಿಕೆ ಕೊಟ್ಟರೆ ಸಿಲುಕ।
ಎಣಿಸಿ ಜಪಿಸಲು ಸಿಲುಕ।ನಾನಾವ್ರತ ಮಾಡಲು ಸಿಲುಕ।
ಏನೇನು ಕರ್ಮಕೆ ಸಿಲುಕ।ಮಾಣದೆ ಧೃಡ ಭಕುತಿ ಮಾಡುತಲಿದ್ದರೆ
ತಾನಾಗಿ ಕರೆಯದೇ ಬಳಿಯಲ್ಲಿ ಬಂದೀಗ
ಕಾಣಿಸಿಕೊಂಬನು ಭಕ್ತನಿಗನುದಿನ

ಮೇಲಿನ ವ್ಯಾಸ - ದಾಸ ಸಾಹಿತ್ಯವನ್ನನುರಿಸಿ ಕಂಡ ಭಗವತ್ಸಾಕ್ಷಾತ್ಕಾರವು, ಭಗವಂತನ ಅನುಗ್ರಹವು ದಾನ - ಧರ್ಮಗಳಾಗಿದ್ದರೂ ಸ್ನಾನ ಮೌನಗಳಿಂದಲೇ ಆಗಲೀ, ಗಾನ, ಯಾಗ ಯಜ್ಞಗಳಿಂದಲೇ ಆಗಲೀ, ಕಾಣಿಕೆಗಳನ್ನು ಕೊಡುವುದರಿಂದಲೇ ಆಗಲೀ, ಜಪ - ತಪ ಹೋಮ ವ್ರತಗಳನ್ನಾಚರಿಸುವುದರಿಂದಲೇ ಆಗಲೀ, ಅಷ್ಟೇ ಅಲ್ಲದೇ ಪರಿಪೂರ್ಣವಾದ ಭಕ್ತಿಯಿಂದ ಕೂಡಿದ್ದರಿಂದ ಮಾತ್ರವೇ ಸಾಧ್ಯವಾಗುವುದೆಂದು ತಿಳಿಯಪಡಿಸುತ್ತದೆ.



"ಸಕಲ ಸಾಧನಕೆಲ್ಲ ಸಿದ್ಧಿಗೊಳಿಸುವುದು ಭಕ್ತಿ ಸಾಧನವಲ್ಲದೇ ಅನ್ಯ ಸಾಧನವುಂಟೇ" ಸಕಲ ಸಾಧನೆಗಳನ್ನು ಒಂದು ಗೂಡಿಸುವುದು ಭಕ್ತಿ ಸಾಧನೆಯೊಂದೇ ಅಲ್ಲದೇ ಬೇರೊಂದಿಲ್ಲ ಎನ್ನುತ್ತಾರೆ ಪುರಂದರದಾಸರು.

## ಭಕ್ತಿ - ನಿರ್ವಾಚ್ಯ :

ಆದರೆ ಈ ಭಕ್ತಿಯನ್ನು ಕುರಿತು ಜಗದ್ಗುರುಗಳಾದ ಶ್ರೀ ಮಾನ್ ಮಧ್ವಾಚಾರ್ಯರು ಹೀಗೆ ಹೇಳಿದ್ದಾರೆ.

"ಮಹಾತ್ಮ್ಯ ಜ್ಞಾನಪೂರ್ವಸ್ತು ಸುದೃಢಃ ಸರ್ವತೋಧಿಕಃ।
ಸ್ನೇಹಾ ಭಕ್ತಿರಿತಿ ಪ್ರೋಕ್ತ ಸ್ತಯಾ ಮುಕ್ತಿರ್ನ ಚಾನ್ಯಥಾ ॥

ಮಹೋನ್ನತ ಜ್ಞಾನ ಪೂರ್ವಕನಾಗಿ ಅಚಲನಾಗಿ ಸಕಲ ಐಹಿಕ ವಿಷಯಗಳನ್ನು ಮೆಟ್ಟಿ ನಿಂತು ಪ್ರೇಮಾನುರಾಗವನ್ನು ಹೊಂದಿರುವ ಭಗವಂತನನ್ನು ಉಪಾಸನೆಗೈಯುವುದೇ ಭಕ್ತಿ. ಈ ಭಕ್ತಿಯಿಂದಲೇ ಮೋಕ್ಷವು. ಮುಖ್ಯವಾಗಿ ಪ್ರಾಣ ವಾಯು ನಮ್ಮಲ್ಲಿ ಬೆರೆತಿರುವಂತೆ ಈ ಭಕ್ತಿ ಭಾವವು ಸ್ಥಿರವಾಗಿರಬೇಕು. ಅದೇ ಸದೃಢವಾಗಿರಬೇಕು. ಪರಿವಾರ ಪರಿಸರ, ಭೋಗ ಭಾಗ್ಯಗಳೆಲ್ಲಕ್ಕೂ ಶ್ರೇಷ್ಠನು ನನ್ನ ಸ್ವಾಮಿ ಎಂಬ ಭಾವನೆಯನ್ನು ಹೊಂದಿರುವವನೇ ಸರ್ವತೋಮುಖನು. ಈ ಭಕ್ತಿಯನ್ನು ಕುರಿತು ಮತ್ತಷ್ಟೂ ಸವಿಸ್ತಾರವಾಗಿ ಶ್ರೀ ಮದ್ವಾಚಾರ್ಯರ ಅಭಿಪ್ರಾಯವನ್ನೇ ದೃಷ್ಟಿಯಿಲ್ಲಿಟ್ಟುಕೊಂಡು ಶ್ರೀಮದಜ್ಞಯ ತೀರ್ಥರು - "ಪರಮೇಶ್ವರ ಭಕ್ತಿರ್ನಾಮ ನಿರವಧಿಕಾನಂತಾನವದ್ಯ ಕಲ್ಯಾಣಗುಣತ್ವ ಜ್ಞಾನ ಪೂರ್ವಕ ಸ್ವಾತ್ಮಾತ್ಮೀಯ ಸಮಸ್ತ ವಸ್ತುಭ್ಯೋನೇಕ ಗುಣಾದಿಕೋ ಅಂತರಾಯ ಸಹಸ್ರೇಣಾಪ್ಯ ಪ್ರತಿ ಬದ್ಧ ನಿರಂತರ ಪ್ರೇಮ ಪ್ರವಾಹಾಃ" - ಎಂದು

ಹೇಳಿದ್ದಾರೆ.ಒಟ್ಟಿನಲ್ಲಿ ಶ್ರೀ ಹರಿಯ ಅನುಗ್ರಹವು ಕೇವಲ ಭಕ್ತಿಯಿಂದ ಮಾತ್ರವೇ ಸಾಧ್ಯ.

"ಭಕ್ತ್ಯರ್ಥಾನ್ಯಖಿಲಾನ್ಯೇವ ಭಕ್ತಿರ್ಮೋಕ್ಷಾಯ ಕೇವಲಾ।
ಮುಕ್ತಾ ನಾಮಪಿ ಭಕ್ತಿರ್ವಿ ನಿತ್ಯಾನಂದ ಸ್ವರೂಪಿಣೆ ॥"

ಸಕಲವೂ ಭಕ್ತಿಯಿಂದಲೇ. ಭಕ್ತಿಯಿಂದಲೇ ಮೋಕ್ಷವು. ಮುಕ್ತರಿಗೂ ಸಹಾ ಭಕ್ತಿ ನಿತ್ಯಾನಂದ ಸ್ವರೂಪವಾದುದು. ಕಾರಣ "ಜ್ಞಾನ ಪೂರ್ವಃ ಪರಃ ಸ್ನೇಹೋ ನಿತ್ಯೋ ಭಕ್ತಿ ರಿತೀರ್ಯತೇ" ಜ್ಞಾನ ಪೂರಕವಾದುದೂ, ಎಲ್ಲಕ್ಕಿಂತಲೂ ಶ್ರೇಷ್ಠವಾದ ಸದೃಢವಾದ ಸ್ನೇಹವೇ ಭಕ್ತಿ ಎಂದು ಜಗದ್ಗುರುಗಳ ಅಭಿಪ್ರಾಯ. ಅಷ್ಟೇ ಅಲ್ಲದೇ ಶ್ರೀ ಮಹಾ ವಿಷ್ಣುವು ನೀಡುವ ಪ್ರಸನ್ನತೆ ಭಕ್ತಿಯಿಂದಲೇ ಹೊರತು ಮತ್ತಾವುದರಿಂದಲೂ ಅಲ್ಲ. ಆತನಲ್ಲಿ ನಾವು ಮಾಡುವ ಭಕ್ತಿ ಮುಕ್ತಿಗೆ ಮುಖ್ಯ ಮಾರ್ಗವಾಗಬಲ್ಲದು.

"ಭಕ್ತ್ಯೆವತುಷ್ಟಿ ಮಭ್ಯೇತಿ ವಿಷ್ಣುರ್ನಾನ್ಯನೇನ ಕೇನಚಿತ್।
ಸ ಏವ ಮುಕ್ತಿ ದಾತಾ ಚ ಭಕ್ತಿಸ್ತ ತ್ರೈತ ವ ಕಾರಣಮ್॥"

ಆದರೆ ಆ ಭಕ್ತಿ ನಿಶ್ಚಲವಾಗಿರಬೇಕು. "ಮುಕ್ತಿರ್ನಜ ಸುಖಾನು ಭೂತಿ ರಮಲಾ ಭಕ್ತಿಶ್ಚ ತತ್ಸಾಧನಂ" ತ್ರಿಕರಣಗಳು ಪರಿಶುದ್ಧವಾಗಿರಬೇಕು. ಆಚಾರ್ಯರ ಭಕ್ತಿ ನಿರ್ವಾಚ್ಯ ನಿರ್ವಚನ ಭಾವದಿಂದ ಕೂಡಿದುದು ಎಂದು ಹರಿದಾಸರು ವರ್ಣಿಸುತ್ತಾ ನಿಶ್ಚಲವಾದ ಭಕ್ತಿಯನ್ನು ಕುರಿತು ಎಷ್ಟೋ ಸವಿಸ್ತಾರವಾಗಿ ಮೂರು ಚರಣಗಳಲ್ಲಿ ಭಕ್ತನು ಪಾಲಿಸ ಬೇಕಾದ ವಿಧಿವಿಧಾನಗಳನ್ನು ಹೀಗೆ ತಿಳಿಸಿಕೊಡುತ್ತಾರೆ.

"ಭಕ್ತಿಗೆ ಮೂರು ಗುಣಗಳು ಬೇಕು ಯುಕ್ತಿವಂತರು ಕೇಳಿ
ಮುಕ್ತಿ ಶೀಲವ ತಿಳಿದು ನಿಜ ವಿರಕ್ತತನದಲಿ ಬಾಳಿ ॥

"ಪ್ರೇಮ ಪ್ರೀತಿರತಿನೇಮದಲ್ಲಿ ಶ್ರೀ ಸ್ವಾಮಿ ಚರಣದಲ್ಲಿರಬೇಕು।
ಸೌಮ್ಯ ಸಮಾಧಾನದಲಿ ತಾನಾಮೃತವನ್ನು ಉಣಬೇಕು।
ರೋಮ ರೋಮವನು ಕೋಮಲವಾಗಿ ನಿರ್ಮಲದಲ್ಲಿಡಬೇಕು।
ಶಮ ದಮೆಯಲಿ ತಾಕ್ಷವೇಯನು ಪಡೆದು ಸಮದೃಷ್ಟಿ ಗೂಡಬೇಕು॥"

ಭಕ್ತಿಗೆ ಮೂರು ಗುಣಗಳು ಅವಶ್ಯವೆಂದು ಯುಕ್ತಿವಂತರು ಗ್ರಹಿಸಬೇಕು. ಮುಕ್ತಿ ಶೀಲವನರಿತು ನಿಜ ವಿರಕ್ತರಾಗಿ ಜೀವಿಸಬೇಕು. ಅದ್ಹೇಗೆಂದರೆ ಪ್ರೇಮ, ಪ್ರೀತಿ, ರತಿ - ಈ ಮೂರನ್ನು ಕ್ರಮವಾಗಿ ಶ್ರದ್ಧೆಯಿಂದ ನಿರ್ದುಷ್ಟನಾಗಿ ಶ್ರೀ ಹರಿ ಪಾದ ಪದ್ಮಗಳಲಿಡಬೇಕು. "ಜಿಹ್ವಮೇ ಮಧುಮುತ್ತಮಾ!" ವಾಙ್ಮಯಂ ತಪ ಉಚ್ಯತೇ" "ಪ್ರಿಯಂಬ್ರೂಯಾತ್" ಎಂಬ ಪ್ರಮಾಣ ವಚನದಿಂದ ಸೌಮ್ಯ ಸಮಾಧಾನ ಮಾತುಗಳಿಂದ ಎದುರಿರುವವರಿಗೆ ಸಂತೃಪ್ತಿಯೆಂಬ ಅಮೃತವನ್ನು ಹಂಚಬೇಕು. ಅಷ್ಟೇ ಅಲ್ಲದೇ ಈ ಶರೀರವೊಂದನ್ನೆಂದೇ ಅಲ್ಲದೇ ಅದರ ಮೇಲಿರುವ ರೋಮ ರೋಮಗಳನ್ನು ಪರಿಶುದ್ಧವಾಗಿರಿಸಿಕೊಂಡು ಶಮನ -ದಮನ-ಗಳನ್ನು ಪಾಲಿಸುತ್ತಾ ಕ್ಷಮಾಗುಣವನ್ನು ರೂಡಿಸಿಕೊಂಡು, ಶತ್ರು ಮಿತ್ರರನ್ನು, ಮಾನವ ಮಾನವರನ್ನು ಶೀತೋಷ್ಣವನ್ನು ಸುಖ-ದುಃಖಗಳನ್ನು, ನಿಂದಾ- ಸ್ತುತಿಗಳನ್ನು, ಕಾಷ್ಠಲೋಹಗಳನ್ನು ಸಮ ದೃಷ್ಟಿಯಿಂದ ನೋಡಬೇಕು.

"ನಿತ್ಯಾ ನಿತ್ಯ ವಿವೇಕವತಿಳಿದು ಪಥ್ಯದಲಿ ನಡೆಯಬೇಕು ।
ಚಿತ್ತವೃತ್ತಿ ಸುವೃತ್ತಿಯ ಮಾಡಿ ಸತ್ಯವನು ನುಡಿಯಬೇಕು।
ಉತ್ತಮೋತ್ತಮ ವಸ್ತುವ ನಿಜಸುಖ ಹೃತ್ಕಮಲದಲ್ಲಿಡಬೇಕು।
ಭಕ್ತಿಯ ಭಾವನೆ ಬಲಗೊಂಡು ವೈರಾಗ್ಯದ ಸುಖತೊಡಬೇಕು।

ನಿತ್ಯ ಅನಿತ್ಯಗಳಾವುವೆಂದು ವಿವೇಕದಿಂದ ತಿಳಿದುಕೊಂಡು ಜಾಗ್ರತೆಯಿಂದ ಮುನ್ನಡೆಯಬೇಕು.ಅಲ್ಲದೇ, ನಿತ್ಯವೂ ಇಹ - ಪರಗತಿ ಇಂದಿರಾನಾಥನೇ ಎಂಬ ಮೂಲ ಸೂತ್ರವನ್ನು ಗ್ರಹಿಸಿ ಇದೇ ಭಕ್ತಿ ಪಥವೆಂದು ಮನಗಂಡು ಸಾಗಬೇಕು. 'ಸತ್ಯ ಬ್ರೂಯಾತ್! ಸತ್ಯಂ ಪ್ರಿಯ ಹಿತಂ ಚಯತ್' ಎಂಬಂತೆ ಮನಸ್ಸು -ಬುದ್ಧಿಗಳೆರಡನ್ನು ಸಕ್ರಮವಾಗಿ ಸದ್ವಸ್ತುಗಳ ಮೇಲೆ ಕೇಂದ್ರೀಕರಿಸಿ ಸತ್ಯ ಮಾರ್ಗವನ್ನೇ ಅನುಸರಿಸಬೇಕು. ಉತ್ತಮೋತ್ತಮವಾದ ವಸ್ತುಗಳೆಲ್ಲವೂ ಹರಿಯೇ ಎಂದು ಭಾವಿಸಿ ಸುಖಿಸುತ್ತಾ ಹೃದಯ ಕಮಲದಲ್ಲಿರಿಸಿಕೊಳ್ಳಬೇಕು.ಈ ಭಕ್ತಿ ಭಾವವನ್ನು ಅನುಕ್ಷಣ ಹೊಂದಿ, ವೈರಾಗ್ಯ ಭಾವದಲಿ ಮಿಂದು ಅದರಲ್ಲೇ ಸುಖ ಪಡಬೇಕು.

ಸೋಹ್ಯಾಸನ್ನಿಯ ಸೂತ್ರವ ತಿಳಿದು ಸ್ಥಾಯಿಕನಾಗಿರಬೇಕು।
ಧ್ಯೇಯ ಧ್ಯಾತ ಧ್ಯಾನವ ತಿಳಿದು ಮಾಯದ ಮೇನೆ ಮುರಿಯಬೇಕು
ನ್ಯಾಯ ನೀತಿಯ ನೆಲೆ ನಿಭವನು ಉಪಾಯದಲಿ ಅರಿಯಬೇಕು
ಪಾಯಕನಾಗಿ ಅನುದಿನ ಮಹಿಪತಿಗುರುಪಾದದಿ ಸ್ಥಿರವಿರಬೇಕು।

ದ್ವೈತ ಭಾವವನ್ನು ಚೆನ್ನಾಗಿ ಅರಿತುಕೊಂಡು ಹೃತ್ಕಮಲ ಮಧ್ಯವರ್ತಿ ಶ್ರೀ ಹರಿಯನ್ನು ಧ್ಯಾನಿಸುವ ಪರಿಯನ್ನರಿತುಕೊಂಡು ಮಾಯ ಪರವಶನಾಗದೇ ನ್ಯಾಯ - ನೀತಿ ಮಾರ್ಗವನ್ನು ತೊರೆಯದೇ ಸದಾಕಾಲ ಹರಿ-ವಾಯು-ಗುರಗಳೆಂಬ ತಾರತಮ್ಯ ಪ್ರಕಾರದಿಂದ ಭಕ್ತಿಯನ್ನು ಮಾಡುವುದೇ ಶ್ರೇಯಸ್ಕರವು.

**ನವವಿಧ ಭಕ್ತಿ - ದಾಸ್ಯ ಭಕ್ತಿ :** ಈ ಭಕ್ತಿಯು ಒಂಬತ್ತು ಸ್ವರೂಪಿಯಾದುದೆಂದು ಶ್ರೀ ಮದ್ಭಾಗವತವು ಹೇಳುತ್ತದೆ.

"ಶ್ರವಣಂ ಕೀತನಂ ವಿಷ್ಣೋ ಸ್ಮರಣಂ ಪಾದಸೇವನಂ
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಂ॥
- (ಶ್ರೀ ಮದ್ಭಾಗವತಂ)

ನಮ್ಮ ಹೃದಯ ಭಾಷೆಯಲ್ಲಿ ಸಖ್ಯವೆಂಬ, ಶ್ರವಣವೆಂಬ, ದಾಸತ್ವವೆಂಬ ವಂದನಾರ್ಚಾನೆಗಳಿಂದ ಆತ್ಮವನ್ನು ತುಂಬಿಸಿಕೊಂಡು ನಿರಂತರವಾಗಿ ಸಂಕೀರ್ತನೆ ಚಿಂತನೆಗಳಿಂದ ಒಂಭತ್ತು ಭಕ್ತಿ ಮಾರ್ಗಗಳಿಂದ ಸರ್ವಾತ್ಮನಾದ ಹರಿಯನ್ನೇ ನಂಬಿ ಸಜ್ಜನನಾಗಿರುವುದೇ ಸತ್ಯವನ್ನೇನೆಂಬು ಓ ದೈವೋತ್ತಮಾ.

ಈ ನವವಿಧ ಭಕ್ತಿಗಳು ನವ ಭಕ್ತರು ಆರ್ಯ ಸಂಪ್ರದಾಯದಲ್ಲಿ ಹೇಳಲ್ಪಟ್ಟಿರುವುವು. ಅವೇ

"ಶ್ರೀ ವಿಷ್ಣು ಶ್ರವಣೇ ಪರೀಕ್ಷಿತ ಭವದ ವೈಯಾಸಿ ಸಂಕೀರ್ತನೇ
ಪ್ರಹ್ಲಾದ ಸ್ಮರಣೇ ತದಂಘ್ರಿ ಭಜನೇ ಲಕ್ಷ್ಮೀ ಪೃಥು ಪೂಜನೇ
ಅಕ್ರೂರಸ್ತ್ವಭಿ ವಂದನೇ ಕಪಿಪತಿರ್ದಾಸೇದ ಸ ಖ್ಯೆರ್ಜನೇ
ಸರ್ವಸ್ವಾತ್ಮ ನಿವೇದನೆ ಬಲಿರ ಭೂತೇ ಕೃಷ್ಣಾಪ್ತಿರೇತಾ ಫಲಂ॥

ನವವಿಧ ಭಕ್ತಿಗಳಲ್ಲಿ ಶ್ರವಣ ಭಕ್ತಿಗೆ ಪರೀಕ್ಷಿತನು, ಕೀರ್ತನೆಗೆ ಶುಕಮಹರ್ಷಿಯೂ, ಸ್ಮರಣೆಗೆ ಪ್ರಹ್ಲಾದನೂ, ಪಾದ ಸೇವೆನೆಗೆ ಮಹಾಲಕ್ಷ್ಮಿ, ಅರ್ಚನೆಗೆ ಪೃಥು ಮಹಾರಾಜನೂ, ವಂದನೆಗೆ ಅಕ್ರೂರನೂ, ಧ್ಯಾನಕ್ಕೆ ಹನುಮಂತನೂ, ಸಖ್ಯಕ್ಕೆ ಅರ್ಜುನನೂ, ಆತ್ಮ ನಿವೇದನೆಗೆ ಬಲಿಯೂ ಉದಾಹರಣೆಯಾಗಿ ಇದ್ದಾರೆ. ಈ ನವವಿಧ ಭಕ್ತಿಯಲ್ಲಿ ದಾಸ್ಯ ಭಕ್ತಿ ಅತ್ಯಂತ ಶ್ರೇಷ್ಠವಾದುದು.ಈಶದಾಸ್ಯದ ಭಾವನೆಯನ್ನು ಮನಗೊಳ್ಳುವುದೇ ಇಹಪರ ಸಾಧನೆಗಳಿಗೆ, ಐಹಿಕಾಮಾಷ್ಮಿಕ ಫಲಗಳಿಗೆ ಉಚಿತವಾದ ವಸ್ತುವು.

"ಸ್ವತಂತ್ರ ಮಸ್ವತಂತ್ರಂ ಚ ದ್ವಿವಿಧಂ ಸಮ್ಮತಂ" ಶ್ರೀ ಮಾನ್ ಮಧ್ವಾಚಾರ್ಯರ ಮುಖ್ಯ ಬೋಧನೆ ಇದೇ ಆಗಿದೆ. ಅಷ್ಟೇ ಅಲ್ಲದೇ ದಾಸ್ಯ ಭಕ್ತಿಗೆ ಉದಾಹರಣೆಯು ಸಹಾ ಮೇಲಿನ ಶ್ಲೋಕದಲ್ಲಿ ಕವಿ ಸ್ತುತಿಸಿದ್ದಾನೆ"

(ಭಾಗವತಾಕಥಾಸಾಗರ)

# ಚಿತ್ರ ಕೇತುವಿನ ವೃತ್ತಾಂತ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್

ಶುಕಮಹರ್ಷಿ ವೃತ್ತಾಸುರನಿಗೆ ವಿಷ್ಣುಭಕ್ತಿಯುಂಟು ಮಾಡಲು ಆತನ ಪೂರ್ವ ಚರಿತ್ರೆಯನ್ನು ಪರೀಕ್ಷಿತ ಮಹಾ ರಾಜನಿಗೆ ವಿವರಿಸಿದ್ದಾರೆ. ಅದೇ ಚಿತ್ರಕೇತುವಿನ ವೃತ್ತಾಂತವು. ಈ ಕಥಾಸಾರವು ಶ್ರೀ ಮದ್ಭಾಗವತದ ಷಷ್ಠ ಸ್ಕಂದದಲ್ಲಿ ಬರುತ್ತದೆ. ಶೂರಸೇನವೆಂಬ ರಾಜ್ಯಕ್ಕೆ ಚಕ್ರವರ್ತಿ ಚಿತ್ರಕೇತು. ಆತನಿಗೆ ಕೋಟಿಮಂದಿ ಪತ್ನಿಯರು. ಅದರಲ್ಲಿ ಅವರಾರಿಗೂ ಸಂತಾನವುಂಟಾಗಲಿಲ್ಲ. ದೈವವಶಾತ್ ಎಲ್ಲರೂ ಸಂತಾನ ಹೀನರಾಗೇ ಉಳಿದಿದ್ದಾರೆ. ಪುತ್ರರಿಲ್ಲದ ನೋವು ಆತನನ್ನು ಒಳಗೇ ಕೊರಗನ್ನುಂಟುಮಾಡಿದೆ.

ಒಂದು ಬಾರಿ ಅಂಗೀರಸ ಮಹರ್ಷಿಗಳು ಸಾಕಷ್ಟು ಭೂಸಂಚಾರ ಮಾಡಿ ಕಡೆಗೆ ಚಿತ್ರಕೇತುವಿನ ಮಂದಿರಕ್ಕೆ ಬಂದಿದ್ದಾರೆ. ಚಿತ್ರಾಕೇತುವಿನ ವಿನಮ್ರತೆಯು ಋಷಿಗಳಿಗೆ ಬಹಳವಾಗಿ ಮೆಚ್ಚುಗೆಯಾಗಿದೆ. ಆಗವರು ಚಿತ್ರಾಕೇತುವನ್ನು ಅಪ್ಯಾಯಮಾನವಾಗಿ ಹೀಗೆ ಕೇಳಿದ್ದಾರೆ. "ರಾಜಾ! ನಿನ್ನ ದೇಹ, ಮನಸ್ಸು, ರಾಜ್ಯಪರಿವಾರ, ಸಂಪತ್ತುಗಳೆಲ್ಲಾ ಕ್ಷೇಮವಾಗಿ ರುವವೇ?" ನಿನ್ನ ಮುಖ ನೋಡಿದರೆ ನೀನು ಪ್ರಸನ್ನನಾಗಿರದೆ ಯಾವುದೋ ತೀವ್ರವಾದ ವೇದನೆಗೆ ಗುರಿಯಾಗಿರುವಂತೆ ಗೋಚರಿಸುತ್ತಿದೆ. ಇದಕ್ಕೆಲ್ಲಾ ನೀನೇ ಕಾರಣನೇ? ಅಥವಾ



ಮತ್ಯಾರಿಂದಲಾದರೂ ಉಂಟಾಗಿರುವುದಾ? ಈ ವಿಷಯ ವನ್ನು ನನಗೆ ಹೇಳುವಂಥವನಾಗು. ನಿಜದಲ್ಲಿ ಅಂಗೀರಸ ಋಷಿಗೆ ಎಲ್ಲವೂ ತಿಳಿದುದೇ. ಆದರೂ ಸಹ ಅವರು ಈ ರೀತಿ ಪ್ರಶ್ನೆ ಮಾಡಲಾಗಿ ಪುತ್ರಾರ್ಥಿಯಾದ ಚಿತ್ರಕೇತುವು ದುಗುಡ ಮನದಿಂದ "ಮಹಾನುಭಾವ! ಸಂತಾನವಿಲ್ಲದುದರಿಂದ ನರಕದಲ್ಲಿ ಬೀಳುತ್ತಿರುವ ನನ್ನನ್ನು ಮತ್ತು ನನ್ನ ಪಿತೃಗಳನ್ನು ಅದರಿಂದ ಕಾಪಾಡಿ ನರಕದಿಂದ ನಮ್ಮನ್ನು ಎತ್ತುವಂಥಹ ಒಬ್ಬ ಪುತ್ರನನ್ನು ಪ್ರಸಾದಿಸಿ.

ಚಿತ್ರಕೇತುವಿನ ವಿನಂತಿಯನ್ನು ಪರಾಂಬರಿಸಿದ ಅಂಗೀಕರಸ ಋಷಿಗಳು ಒಂದು ಯಜ್ಞವನ್ನು ಮಾಡಿ, ಯಜ್ಞ ಪ್ರಸಾದವಾಗಿ ಪರಮಾನ್ನವನ್ನು ರಾಜನ ಪತ್ನಿಯಾದ ಕೃತ ದ್ಯುತಿಗೆ ನೀಡಿದ್ದಾರೆ. ಆ ಯಜ್ಞ ಪ್ರಸಾದದ ಪ್ರಭಾವದಿಂದಾಗಿ ಹರ್ಷವೇದನೆಯನ್ನುಂಟು ಮಾಡುವ ಮಗನು ಜನಿಸುತ್ತಾ ನೆಂದು ಸಹಾ ಋಷಿಗಳು ತಾವು ಬಂದ ದಾರಿಯಲ್ಲೇ ಹಿಂದಿ ರುಗಿ ನಡೆದಿದ್ದಾರೆ. ಯಜ್ಞ ಪ್ರಸಾದ ಫಲವಾಗಿ ಕೃತದ್ಯುತಿ ಹೂವಿನಂಥ ಮಗನಿಗೆ ಜನ್ಮವಿತ್ತಿದ್ದಾಳೆ. ಈ ವಿಷಯವು ರಾಜನ ಕಿವಿಯಲ್ಲಿ ಅಮೃತವನ್ನು ಸುರಿದಂತೆ ಭಾಸವಾಗಿದೆ. ಕೂಡಲೇ ಆತನು ಸ್ನಾನಮಾಡಿ, ಶುಚಿಯಾಗಿ, ವಸ್ತ್ರಾಭರಣ ಭೂಷಿತ ನಾಗಿ ವಿಪ್ರರ ಕೈಯಿಂದ ಬಾಲಕನಿಗೆ ಆಶೀರ್ವಚನ, ಜಾತ ಕರ್ಮಗಳನ್ನು ನೆರವೇರಿಸಿದ್ದಾನೆ. ದರಿದ್ರನಿಗೆ ಧನಲಭ್ಯವಾದರೆ ಅದರ ಮೇಲೆ ಆತನಿಗೆ ದಿನೇ ದಿನೇ ಮೋಹ ಪ್ರವೃದ್ಧವಾಗು ತ್ತದೆ. ಹಾಗೆಯೇ ಆಗದೇ ಆಗದೇ ಉಂಟಾದ ಸಂತಾನದ ಚಿತ್ರಾಕೇತುವಿಗೆ ಇನ್ನಿಲ್ಲದೆ ಪ್ರೇಮವುಂಟಾಗಿದೆ. ಅದು ದಿನ ದಿನಕ್ಕು ವೃದ್ಧಿಯಾಗಿದೆ. ಚಿತ್ರಾಕೇತುವಿನ ಮಡದಿಗೂ ಸಹ ಪುತ್ರ ಪ್ರೇಮ ಇಮ್ಮಡಿಸಿದೆ. ಪುತ್ರಪ್ರೇಮದಿಂದ ತನ್ಮಯಳಾಗಿ ತನ್ನ ಮಗನ ಲಾಲನೆ-ಪಾಲನೆ ಮಾಡುತ್ತಿರುವ ಪತ್ನಿಯ ಮೇಲೆ ರಾಜನಿಗೆ ಆಕೆಯ ಮೇಲೆ ಎಲ್ಲಿಲ್ಲದ ಅನುರಾಗವುಂಟಾಗಿದೆ. ಇದನ್ನು ಕಂಡು ಸವತಿಯರಿಗೆ ಅಸೂಯೆವುಂಟಾಗಿದೆ. ರಾಜ ತಮ್ಮ ಮೇಲೆ ತೋರುತ್ತಿರುವ ನಿರ್ಲಕ್ಷ್ಯ ಅವರನ್ನು ತೀವ್ರವಾದ ದುಃಖಕ್ಕೀಡು ಮಾಡಿದೆ. ಹಾಗೆಯೇ ಕೃತದ್ಯುತಿಯ ಮೇಲೆ ರಾಜ ತೋರುತ್ತಿರುವ ಪ್ರೇಮವು ಅವರಲ್ಲಿ ಈರ್ಷ್ಯೆಯನ್ನು ಪ್ರಚೋ ದಿಸಿದೆ. ದಿನದಿನಕ್ಕು ಅವರ ಮನದಲ್ಲಿನ ಅಸೂಯ ಜ್ವಾಲೆ ಧಗಿಸುತ್ತಾ ಕಡೆಗೆ ವಿಲಕ್ಷಣ ರೂಪ ಹೊಂದಿ ಅವರೆಲ್ಲರೂ ಆ ಬಾಲಕನಿಗೆ ವಿಷವುಣಿಸಿ ಸಾಯಿಸಿದ್ದಾರೆ.

ವಿಷಪ್ರಭಾವದಿಂದ ಮರಣಿಸಿದ ಮಗನನ್ನು ಎಷ್ಟು ಕಾಲವಾದರೂ ಕಾಣದ ಕೃತದ್ಯುತಿ ಸೇವಕಿಯನ್ನು ಕಳಿಸಿದ್ದಾಳೆ. ಸೇವಕಿಯ ರೋದನವನ್ನು ಕೇಳಿಸಿಕೊಂಡ ಕೃತದ್ಯುತಿ ಅಲ್ಲಿಗೆ ತೆರಳಿ ತನ್ನ ಪುತ್ರನು ಮರಣಿಸಿದುದನ್ನು ಕಂಡು ಕಾಲಲ್ಲಿ ಹೊಸೆದ ಗಿಡದಂತೆ ಸ್ತಬ್ಧಳಾಗಿ ಕೆಳಗುರುಳಿ

ದ್ದಾಳೆ. ಅಷ್ಟರಲ್ಲಿ ರಾಜಪುತ್ರನ ಮರಣವಾರ್ತೆಯು ಅರಮನೆ ಯನ್ನೆಲ್ಲಾ ವ್ಯಾಪಿಸಿದೆ. ಎಲ್ಲರೂ ಎದೆ ಬಡಿದುಕೊಂಡು ಅಳ ತೊಡಗಿದ್ದಾರೆ. ಉಳಿದ ರಾಣಿಯರೂ ಸಹಾ ಕಪಟ ದುಃಖ ವನ್ನು ಪ್ರಕಟಿಸಿದ್ದಾರೆ. ಪುತ್ರನ ಮರಣ ವಾರ್ತೆ ಚಿತ್ರಕೇತುವನ್ನು ಪೆಂಭೂತದಂತೆ ಬಾಧಿಸಿದೆ. ಕೈಕಾಲುಗಳು ನಡುಗಲು ಆತನು ಏಳುತ್ತಾ-ಬೀಳುತ್ತಾ ಬಂದು ಮೃತ ಬಾಲಕನ ಹತ್ತಿರಕ್ಕೆ ಬಂದಿ ದ್ದಾನೆ. ಮೃತ ಬಾಲಕನನ್ನು ನೋಡುತ್ತಲೇ ಸ್ಮೃತಿ ತಪ್ಪಿ ಕೆಳ ಕ್ಕುರುಳಿದ್ದಾನೆ.ಎಚ್ಚರವಾಗುತ್ತಲೇ ರಾಜನ ಕಣ್ಣಿನಿಂದ ಅಶ್ರು ಧಾರೆ ಧಾರಕಾರವಾಗಿ ಸುರಿದಿದೆ.ಮಾತುಗಳು ಹೊರಡ ಲಾಗದೇ ನಿಂತುಬಿಟ್ಟಿವೆ. ರಾಜ ದಂಪತಿಗಳ ದುಃಖ ನೋಡು ಗರಿಗೆ ಹೃದಯವಿದ್ರಾವಕವಾಗಿ ಕಂಡು ಬಂದಿದೆ.

ಚಿತ್ರಕೇತುವು ಈ ರೀತಿಯಾಗಿ ದುಃಖಸಾಗರದಲ್ಲಿ ಬಿದ್ದು ಸುಮಾರು ಮರಣಿಸಿದಂತವನಾಗಿದ್ದಾನೆಂದು ತಿಳಿದ ಅಂಗೀರಸ ಮಹರ್ಷಿ ನಾರದರೊಂದಿಗೆ ಆತನ ಅಂತಃಪುರಕ್ಕೆ ನಡೆದಿದ್ದಾರೆ. ದುಃಖಕ್ರಾಂತರಾದ ಬುದ್ಧಿ ಜೀವಿಗಳಿಗೆ ಜ್ಞಾನ ಬೋಧನೆ ಮಾಡುವವರೇ ಋಷಿಪುಂಗವರು. ದುಃಖ ದಿಗ್ಮೂಢ ನಾದ ಚಿತ್ರಕೇತನನ್ನು ಕಾಣುತ್ತಲೇ ಅವರು ಆತನಿಗೆ ತತ್ತ್ವ ಬೋಧನೆ ಮಾಡಿದ್ದಾರೆ.ಅನೇಕ ರೀತಿಯಲ್ಲಿ ಅಂಗೀರಸ ನಾರ ದರು ಉಪದೇಶ ಮಾಡಲು ಚಿತ್ರಕೇತುವಿನ ಹೃದಯ ಸ್ವಲ್ಪ ಮಟ್ಟಿಗೆ ಉಪಶಮನಗೊಂಡಿದೆ. ದುಃಖ ಸಾಗರದಲ್ಲಿ ಮುಳುಗಿ ಹೋದ ಚಿತ್ರಕೇತು ಅಂಗೀರಸ ಋಷಿಗಳನ್ನು ಗುರುತಿಸಲಿಲ್ಲ. ಆದ್ದರಿಂದಲೇ ತನಗೆ ತತ್ತ್ವಬೋಧನೆಯನ್ನು ಮಾಡಿ ಸ್ವಲ್ಪ ಮಟ್ಟಿಗೆ ಸಾಂತ್ವನವನ್ನು ತಂದ ತಾವ್ಯಾರಂ ಎಂದು ವಿನಯ ದಿಂದ ಪ್ರಶ್ನಿಸಿದ್ದಾನೆ. ಸಾಕು ಪ್ರಾಣಿಯಂತೆ ಆತನು ತನ್ನನ್ನು ಜ್ಞಾನ ಜ್ಯೋತಿಯೊಂದಿಗೆ ರಕ್ಷಿಸಬೇಕೆಂದು ಪ್ರಾರ್ಥಿಸಿದ್ದಾನೆ.

ಆಗ ಅಂಗೀರಸ ಮಹರ್ಷಿ ಆತನೊಂದಿಗೆ "ರಾಜಾ! ನೀನು ಪುತ್ರನನ್ನು ಕೋರಿದಾಗ ನಾನು ನಿನ್ನ ಅಂತಃಪುರಕ್ಕೆ ಬಂದೆ ನಿನಗೆ ಪುತ್ರನನ್ನು ದಯಪಾಲಿಸಿದ ಅಂಗೀರಸ ಋಷಿ ನಾನೇ ನನ್ನ ಹಿಂದೆ ಬಂದಿರುವ ಈ ಮಹನೀಯ ಸಾಕ್ಷಾತ್ ಬ್ರಹ್ಮತನುಜನಾದ ನಾದಮುನಿ. ನಿನ್ನನ್ನು ವಿಥ್ಯಾಶ್ಲೋಕದಿಂದ ಹೊರಬರುವಂತೆ ಮಾಡಲು ನಾವಿಬ್ಬರೂ ಬಂದಿದ್ದೇವೆ. ಚಿತ್ರ ಕೇತು! ಆತ್ಮಸ್ಥಿತಿಯನ್ನು ಚೆನ್ನಾಗಿ ಅರಿತುಕೋ. ನೀನ್ಯಾರೆಂದು ತಿಳಿದುಕೊಳ್ಳಲು ಪ್ರಯತ್ನಿಸು. ನಿಜವಾದ ಸ್ಥಿತಿಯನ್ನು ತಿಳಿದು ಕೊಂಡರೆ ಆಸಕ್ತಿ ತೊಲಗಿ ಶಾಂತಿಯು ನೆಲೆಗೊಳ್ಳುತ್ತದೆ" ಎಂದು ಹೇಳಿದ್ದಾರೆ. ಆಗ ನಾರದಮುನಿ ಎಷ್ಟೋ ಕರುಣೆ ಯಿಂದ ಚಿತ್ರಕೇತುವಿಗೆ ಮಂತ್ರದೀಕ್ಷೆಯನ್ನಿತ್ತು ಆ ಮಂತ್ರ ಜಪ ದಿಂದ ಏಳು ರಾತ್ರಿಗಳಲ್ಲಿ ಸಂಕರ್ಷಣನ ದರ್ಶನವಾಗುವು ದೆಂದು ಆಶ್ವಾಸನೆಯನ್ನಿತ್ತು ಮರಳಿದ್ದಾರೆ.ಸಂಕರ್ಷವು ಪಾದ ಪದ್ಮಾಶ್ರಯದಿಂದ ಶಿವ ಮುಂತಾದವರೇ ದ್ವೈತ ಭಾವವನ್ನು ತೊಲಗಿಸಿಕೊಂಡಿದ್ದಾರೆಂದು ಆತನು ತಿಳಿಸಿ ಕೊಟ್ಟಿದ್ದಾರೆ.

ನಂತರ ನಾರದಮುನಿ ತನ್ನ ಯೋಗಬಲದಿಂದ ಮೃತ ಪುತ್ರನನ್ನು ಮರಳಿ ತಂದಿದ್ದಾರೆ. ಮೃತ ಬಾಲಕನು ತಿರುಗಿ ಮಾತನಾಡಲು ಆರಂಭಿಸಿದ್ದನ್ನು ಕಂಡು ಬಂಧುಗಳೆಲ್ಲರೂ ಆಶ್ಚರ್ಯಚಕಿತರಾಗಿದ್ದಾರೆ. ನಾರದಮುನಿ ಪ್ರಭಾವದಿಂದಲೇ ಮರಳಿ ಬಂದ ಆತ್ಮ ಈ ವಿಧವಾಗಿ ಜ್ಞಾನವನ್ನು ಉಪದೇಶಿಸಿ ಹಿಂದಿರುಗಿ ಹೊರಟುಹೋಗಿದೆ. ಅದನ್ನು ಕೇಳಿ ರಾಜ, ರಾಣಿ, ಬಂಧುಗಳೆಲ್ಲರೂ ವಿಸ್ಮಯಗೊಂಡಿದ್ದಾರೆ.ಆ ಬಾಲಕನೊಂದಿಗೆ ಅಲ್ಲಿಯವರೆಗೆ ಹೊಂದಿದ್ದ ಪ್ರೇಮ ಪಾಶವನ್ನು ಅನಾಯಸವಾಗಿ ತುಂಡರಿಸಿಕೊಂಡು ಶೋಕಮುಕ್ತರಾಗಿದ್ದಾರೆ. ನಂತರ ಬಾಲ ಕರು ಮೃತದೇಹಕ್ಕೆ ದಹನ ಕ್ರಿಯೆಗಳನ್ನು ಮಾಡಿ, ಶೋಕ ಮಹಾಭಯಗಳಿಂದ ವಿಮುಕ್ತರಾಗಿದ್ದಾರೆ. ಆಗ ಚಿತ್ರಕೇತು ಪ್ರಸನ್ನನಾದುದನ್ನು ಕಂಡು ನಾರದಮುನಿ ಆತನಿಗೆ ದಿವ್ಯೋ ಪದೇಶವನ್ನು ಮಾಡಿದ್ದಾರೆ. ಈ ವಿಧವಾಗಿ ಚಿತ್ರಕೇತುವಿಗೆ ಮಂತ್ರವನ್ನು ಉಪದೇಶಿಸಿ ಅಂಗೀರಸರೊಂದಿಗೆ ಬ್ರಹ್ಮ ಲೋಕಕ್ಕೆ ಹೊರಟು ಹೋಗಿದ್ದಾರೆ.

ಆಗ ಚಿತ್ರಕೇತು ಕೇವಲ ಜಲವನ್ನು ಸೇವಿಸುತ್ತಾ ತನ್ನಗೆ ಉಪದೇಶಿಸಲ್ಪಟ್ಟ ಮಂತ್ರವನ್ನು ವಾರಕಾಲ ಸತತವಾಗಿ ಜಪಿಸಿ ದ್ದಾನೆ. ಗುರುಕರಣೆಯಿಂದಾಗಿ ಲಭಿಸಿದ ಮಂತ್ರವನ್ನು ಭಕ್ತಿ - ಶ್ರದ್ಧೆಗಳಿಂದ ಜಪಿಸಿದ ಚಿತ್ರಕೇತುವಿಗೆ ವಿದ್ಯಾಧರಲೋಕ ಪ್ರಾಪ್ತಿ ಸಲೀಲವಾಗಿ ಲಭಿಸಿದೆ.ಸನತ್ಕುಮಾರಾದಿ ಭಕ್ತರೊಂದಿಗೆ ಸುತ್ತುವರಿದವನಾದ ಸಂಕರ್ಷಣ ಭಗವಂತನ ದರ್ಶನ ದಿಂದಾಗಿ ಚಿತ್ರಕೇತು ಪುಳಕಿತಗೊಂಡಿದ್ದಾನೆ. ಮನಸಾರೆ ಸ್ತುತಿ ಸಿದ್ದಾನೆ.

ತರುವಾಯ ಚಿತ್ರಕೇತುವು ಅನಂತದೇವನು ಯಾವ ದಿಕ್ಕಿನಲ್ಲಿ ಅಂತರ್ಧಾನನಾದನೋ ಆ ದಿಕ್ಕಿಗೆ ನಮಸ್ಕರಿಸಿ ವಿದ್ಯಾಧರಪತಿಯಾಗಿ ಗಗನಮಂಡಲದಲ್ಲಿ ಪಯಣಿಸಿದ್ದಾನೆ. ಒಂದು ಬಾರಿ ಈ ರೀತಿಯಾಗಿ ಆತನು ವಿಮಾನದಲ್ಲಿ ವಿಹರಿಸು ತ್ತಿರಲು ಸಿದ್ಧಚರಣರುಗಳಿಂದ ಪರಿವೃತ್ತನಾದ ಶಿವನು ಕಾಣ ಸಿಕ್ಕಿದ್ದಾನೆ. ಶಿವನ ತೊಡೆಯ ಮೇಲೆ ಪಾರ್ವತಿ ಕುಳಿತುಕೊಂಡಿ ದ್ದಾಳೆ. ಆಕೆಯನ್ನು ಆತನು ಆಲಂಗಿಸಿಕೊಂಡು ಕುಳಿತಿದ್ದಾನೆ. ಅದನ್ನು ಕಂಡು ಚಿತ್ರಕೇತುವು ಬಹಳ ಅಪಹಾಸ್ಯದೊಂದಿಗೆ ಮಾತನಾಡಿದ್ದಾನೆ.ಶಿವನನ್ನೇ ಆಕ್ಷೇಪಿಸಿದ್ದಾನೆ.ಆದರೂ ಶಿವನು ವಿಚಲಿತಗೊಳ್ಳದೇ ಮೌನವಾಗಿಯೇ ಕುಳಿತಿದ್ದಾನೆ. ಆದರೆ ಪಾರ್ವತಿದೇವಿ ಈ ಮಾತುಗಳನ್ನು ಸಹಿಸಲಾರದೇ ಶಿವನನ್ನು ಅವಮಾನಿಸಿದ ಚಿತ್ರಕೇತುವು ವಿಷ್ಣುಪಾದ ಪದ್ಮಾಶ್ರಯಕ್ಕೆ ಅನ ರ್ಹನಾದವನೆಂದು ಗಟ್ಟಿಯಾಗಿ ಕೂಗಿ ರಾಕ್ಷಸನಾಗೆಂದು ತೀವ್ರ ಕೋಪದಿಂದ ಶಪಿಸಿದ್ದಾಳೆ.

ಪಾರ್ವತಿ ದೇವಿಯ ಈ ಶಾಪದ ಕಾರಣದಿಂದ ಚಿತ್ರ ಕೇತು ತ್ವಷ್ಟ ನಿರ್ವಹಿಸುತ್ತಿದ್ದ ಯಜ್ಞದ ಬೆಂಕಿಯಿಂದ ವೃತ್ತಾ ಸುರನಾಗಿ ಜನ್ಮವೆತ್ತಿದ್ದಾನೆ. ನಂತರ ಆತನು ಇಂದ್ರನ ಕೈ ಯಿಂದ ಹತಗೊಂಡು ನೇರ ಭಗವದ್ಧಾಮಕ್ಕೆ ಸೇರಿಕೊಂಡಿ ದ್ದಾನೆ. ಚಿತ್ರಕೇತುವು ಮಹಾಭಕ್ತನು. ಆತನ ಈ ಚರಿತ್ರೆಯನ್ನು ಪರಿಶುದ್ಧವಾದ ಭಕ್ತಿಯಿಂದ ಕೇಳಿದರೆ ಶ್ರೋತೃವಿನ ಸಂಸಾರ ಬಂಧನಗಳು ತಿಳಿಯದೇ ತೊಲಗಿ ಹೋಗುತ್ತವೆ.ಪ್ರಾತಃ ಕಾಲದಲ್ಲಿ ನಿದ್ರಾದೇವಿಯ ಪರವಶವನ್ನು ನಿಗ್ರಹಿಸಿ ಶ್ರೀ ಹರಿ ಯನ್ನು ಸ್ಮರಿಸುತ್ತಾ ಈ ವೃತ್ತಾಂತವನ್ನು ಪಠಿಸುವ ಮಾನವನು ಯಾವುದೇ ಕಷ್ಟಗಳಿಲ್ಲದೇ ಭಗವದ್ಧಾಮಕ್ಕೆ ಸೇರುತ್ತಾನೆ.

# ಯುಗ ಯುಗಗಳಿಂದ ಇರುವ ಏಕಶಿಲಾನಗರ



–ತೆಲುಗು ಮೂಲ : ಕೆ. ನರಸಿಂಹುಲು

– ಅನುವಾದ : ಶ್ರೀಮತಿ. ಪಾರ್ವತಿ

ಈಗ ಕಲಿಯುಗ ನಡೆಯುತ್ತಿದೆ. ಇದಕ್ಕೂ ಮುಂಚೆ ದ್ವಾಪರಯುಗ, ಅದಕ್ಕೂ ಹಿಂದೆ ತ್ರೇತಾಯುಗ ಮತ್ತು ಅದಕ್ಕಿಂತಲೂ ಹಿಂದೆ ಕೃತಯುಗವಿತ್ತು, ಇವು ನಾಲ್ಕು ಯುಗಗಳು. ಈ ನಾಲ್ಕು ಯುಗಗಳನ್ನು ಮಹಾಯುಗಗಳೆನ್ನುತ್ತಾರೆ. ಸೃಷ್ಟಿ ಆದಾಗಿನಿಂದ ಇಲ್ಲಿಯವರೆಗೂ ಇಂತಹ 27 ಯುಗಗಳು ಸಂದಿವೆ. ಈಗ ನಡೆಯುತ್ತಿರುವುದು 28 ನೇ ಯುಗ. ಈ ಮಹಾಯುಗಗಳಲ್ಲಿ ಒಂದಾದ ಕಲಿಯುಗದಲ್ಲಿ ಇದ್ದೇವೆ. ಕಲಿಯುಗದಲ್ಲಿ ಈಗ ಐದು ಸಾವಿರದ ನೂರಇಪ್ಪತ್ತನೇ ಸಂವತ್ಸರದಲ್ಲಿ ಇದ್ದೇವೆ. ಪ್ರತಿ ಮಹಾಯುಗದಲ್ಲೂ ಪ್ರಧಾನ ಪಾತ್ರರಾದ ರಾಮಕೃಷ್ಣರು ಪುನಾರಾವೃತ್ತ ಆಗುತ್ತಿರುತ್ತಾರೆ. ಕೆಲವು ಭೇದಗಳಿರಬಹುದು. ಅಂದರೆ ತ್ರೇತಾಯುಗದಲ್ಲಿನ ಶ್ರೀ ರಾಮಚಂದ್ರನು ಇಲ್ಲಿಯವರೆಗಿನ 28 ಸಂವತ್ಸರಗಳಲ್ಲೂ ಜನ್ಮಿಸಿದ್ದಾನೆ ಎಂದು ದೊಡ್ಡವರು ಹೇಳುವ ಮಾತು.

## ಕೃತಯುಗದಲ್ಲಿ ಜಾಂಬವಂತನ ತಪಸ್ಸು

ಜಾಂಬವಂತನು ಕೃತಯುಗದಿಂದ ಮೂರು ಯುಗಗಳಲ್ಲೂ ದರ್ಶನ ನೀಡುತ್ತಿದ್ದಾರೆ. ಅಂದು ಕೃತಯುಗದಲ್ಲಿ ಶ್ರೀ ರಾಮಚಂದ್ರನನ್ನು ಕುರಿತು 1000 ವರ್ಷ ತಪಸ್ಸು ಮಾಡಿದನು. ಹಿಮಾಲಯದಲ್ಲಿ ಇರುತ್ತಿದ್ದ ಆತನು ದಕ್ಷಿಣ ದೇಶದಲ್ಲಿರುವ ಶೇಷಾಚಲ ಪರ್ವತ ಶ್ರೇಣಿಯಲ್ಲಿರುವ ಪಾಲಬೆಟ್ಟ ಸಮೀಪದಲ್ಲಿರುವ ಒಂಟಿಮಿಟ್ಟ ಪ್ರಾಂತದಲ್ಲಿ ಏಕಶೃಂಗ ಶೈಲವನ್ನು ತಪಸ್ಸಿಗೆ ಆಯ್ಕೆ ಮಾಡಿಕೊಂಡನು. ಆ ಏಕಶೃಂಗಶೈಲವನ್ನು ಋಕ್ಷಪರ್ವತ ಎಂದೂ ಕರೆಯುತ್ತಿದ್ದರು. ಈ ಬೆಟ್ಟದಲ್ಲಿ ಕರಡಿಗಳು ಹೆಚ್ಚು ಇದ್ದುದರಿಂದ ಆ ಹೆಸರು ಬಂದಿದೆ. ಈ ಬೆಟ್ಟದ ಮೇಲೆ ಬಿಲ್ವ ಪತ್ರೆ ಮರಗಳು ವಿಸ್ತಾರವಾಗಿ ಹರಡಿದ್ದವು. ಸ್ಕಂದ ಪುರಾಣದಲ್ಲಿನ ಶ್ರೀಶೈಲ ಖಂಡದಲ್ಲಿರುವ ಸಿದ್ಧವಟ ಮಹಾತ್ಮ್ಯದಲ್ಲಿನ ಕೆಲವು ಶ್ಲೋಕಗಳು ಈ ಸಂಗತಿಯನ್ನು ವಿವರಿಸುತ್ತವೆ. ಕಾಶೀರಾಮೇಶ್ವರ ಮಾರ್ಗದಲ್ಲಿ ಈ ಏಕಶೃಂಗ ಶೈಲವಿದೆ. ಶಿವ ಕೇಶವರಿಗೆ ಅಭೇದವಾಗಿರುವ ಸ್ಥಳ. ಏಕಶೃಂಗ ಶೈಲದ ಮೇಲೆ ಉತ್ತರ ದಿಕ್ಕಿನಲ್ಲಿ ಕುಳಿತು ತಪಸ್ಸು ಮಾಡಿದನು. ಆ ಬೆಟ್ಟದ ಎದುರಿಗೆ ಇದ್ದ ಇನ್ನೊಂದು ಸಣ್ಣ ಬೆಟ್ಟದ ಮೇಲಿಂದ ಶ್ರೀ ರಾಮಚಂದ್ರನು ದರ್ಶನ ನೀಡಿದನು. ಚಿರಂಜೀವಿಯಾಗು ಎಂದು ಆಶೀರ್ವದಿಸಿದನು. ಅಂದೇ ಆ ಬೆಟ್ಟದ ಮೇಲೆ ಶ್ರೀ ಸೀತಾ ಲಕ್ಷ್ಮಣ ಸಮೇತ ಕೋದಂಡರಾಮ ದೇವಾಲಯ ಸ್ಥಾಪಿತವಾಯಿತು.

## ಶ್ರೀರಾಮ ವನವಾಸ

ಈ ಆಲಯದಲ್ಲಿ ಸೀತಾರಾಮಲಕ್ಷ್ಮಣ ಮೂವರೇ ಇದ್ದಾರೆ. ಆಂಜನೇಯ ಏಕಿಲ್ಲವೆಂಬ ಪ್ರಶ್ನೆ ಉದ್ಭವಿಸುತ್ತದೆ. ತ್ರೇತಾಯುಗದಲ್ಲಿ ವನವಾಸ ಸಮಯದಲ್ಲಿ ಸೀತಾರಾಮ ಲಕ್ಷ್ಮಣರು ಸ್ವಲ್ಪ ಸಮಯ ಈ ಬೆಟ್ಟದ ಮೇಲೆ ತಂಗಿದ್ದರು. ಇಲ್ಲಿಂದ ಪಶ್ಚಿಮಕ್ಕೆ ತುಸು ದೂರದಲ್ಲಿ ಮೃಕಂಡ ಮಹಾಮುನಿ ಆಶ್ರಮ ಇದೆ. ಈ ಆಶ್ರಮಕ್ಕೆ ಇದ್ದ ರಾಕ್ಷಸರ ಕಾಟವನ್ನು ರಾಮಲಕ್ಷ್ಮಣರು ದೂರ ಮಾಡಿದರು. ಸ್ವಲ್ಪ ಕಾಲದ ನಂತರ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದನು ರಾಮ ಲಕ್ಷ್ಮಣರು ಸೀತೆಯನ್ನು ಹುಡುಕುತ್ತಾ ಇರುವಾಗ ಆಂಜನೇಯನ ಪರಿಚಯವಾಯಿತು. ಹನುಮನು ರಾಮ ಲಕ್ಷ್ಮಣರನ್ನು ಮಾತ್ರವೇ ಮೊದಲು ನೋಡಿದ್ದು. ಬಿಲ್ಲು ಧರಿಸಿದ ಶ್ರೀ ರಾಮನನ್ನು



ಸೀತೆಯೊಂದಿಗೆ ಹಾಗೂ ಲಕ್ಷ್ಮಣನೊಂದಿಗೆ ಹನುಮನು ನೋಡಲಿಲ್ಲ. ಆದ್ದರಿಂದ ಒಂಟಿಮಿಟ್ಟ ಗುಡಿಯಲ್ಲಿ ಆಂಜನೇಯನು ಇಲ್ಲ ಎಂದು ಹೇಳುತ್ತಾರೆ. ರಾಮಾಲಯದ ಎದುರಿಗೆ ಆಂಜನೇಯಸ್ವಾಮಿ ಗುಡಿ ಇದೆ. ಸಂಜೀವರಾಯನಾಗಿ ನೆಲೆಸಿದ್ದಾನೆ. ರಾಮರಾವಣ ಯುದ್ಧ ಸಮಯದಲ್ಲಿ ಹಿಮಾಲಯಕ್ಕೆ ಹೋಗಿ ಸಂಜೀವಿನಿಯನ್ನು ತರುತ್ತಿದ್ದಾಗ ಒಂದು ಕ್ಷಣ ಈ ಪವಿತ್ರ ಸ್ಥಳದಲ್ಲಿ ತಂಗಿ ಲಂಕೆಗೆ ಹೋದನು.ಅದರ ಕುರುಹಾಗಿ ಸಂಜೀವರಾಯನಾಗಿ ನೆಲೆಸಿದ್ದಾನೆ. ಸಂಜೀವರಾಯನ ಕೈಯಲ್ಲಿ ಸಂಜೀವಿನಿ ಮೂಲಿಕೆಯನ್ನು ಕಾಣಬಹುದು. ಪ್ರಾಣ ಭೀತಿ ಉಳ್ಳವರು, ಯಾವುದೇ ಪ್ರಮಾದಗಳು ನಡೆಯದಂತೆ ಈ ಸ್ವಾಮಿಯನ್ನು ಪೂಜಿಸುತ್ತಾರೆ.

ವಿದ್ಯಾರಣ್ಯ ಮಹರ್ಷಿ - ವಿದ್ಯಾನಗರದ ಸಾಮ್ರಾಜ್ಯ ಸ್ಥಾಪಕ, ಬುಕ್ಕರಾಯ ಚಕ್ರವರ್ತಿಯ ಗುರುವೂ, ದೈವನೂ ಸರ್ವಸ್ವನೂ ಕೂಡಾ! ಇವರಿಬ್ಬರ ಸಮಕ್ಷಮದಲ್ಲಿ ಏಕಶಿಲೆಯಲ್ಲಿ ಉದ್ಭವಗೊಂಡ ಸೀತಾರಾಮಲಕ್ಷ್ಮಣರ ವಿಗ್ರಹ ಪ್ರತಿಷ್ಠಾಪನೆ ಆಗಿದೆ. ಮತ್ತೊಂದು ವೈಕುಂಠನಗರವಾಗಿ ಏಕಶಿಲಾ ನಗರವೆನಿಸಿಕೊಂಡು ಭಕ್ತರ ಪೂಜೆಯನ್ನು ಸ್ವೀಕರಿಸುತ್ತದೆ.

### ಇದು ಜಾಂಬವತ್ ಪ್ರತಿಷ್ಠೆ

ಸೀತೆಯನ್ನು ಅರಸುತ್ತಾ ರಾಮಲಕ್ಷ್ಮಣರ ಕಿಷ್ಕಿಂಧ ಪ್ರಾಂತಕ್ಕೆ ಬಂದಾಗ ರಾಮಸುಗ್ರೀವರ ಸ್ನೇಹ ಏರ್ಪಟ್ಟಿತು. ಸೀತೆಯನ್ನು ಅರಸಲು ಹನುಮಂತ, ಜಾಂಬವಂತ ಮೊದಲಾದ ಸುಗ್ರೀವನ ಮಂತ್ರಿಗಳು ಅನುಯಾಯಿಗಳು ಸಿದ್ಧರಾದರು. ಜಾಂಬವಂತನಿಗೆ ಶ್ರೀರಾಮಚಂದ್ರನು ಯಾರೆಂದು ಮೊದಲೇ ತಿಳಿದಿತ್ತು.ಈ ಪ್ರಯತ್ನದಲ್ಲಿ ಜಾಂಬವಂತನು ಮೊದಲು ತಾನು ತಪಸ್ಸು ಮಾಡಿದ ಏಕಶಿಲಾ ಬೆಟ್ಟಕ್ಕೆ ಬಂದನು. ರಾಮನು ದಿವ್ಯ ದರ್ಶನ ನೀಡಿದ ಸ್ಥಳದಲ್ಲಿ ಅಂದು ನಿದ್ರಿಸಿದನು. ಬೆಳಿಗ್ಗೆ ಅಲ್ಲಿನ ಒಂದು ಶಿಲೆಯಲ್ಲಿ ಸೀತಾರಾಮ ಲಕ್ಷ್ಮಣರನ್ನು ಆಹ್ವಾನ ಮಾಡಿ ಪೂಜಿಸಿದನು. ಸೀತಮ್ಮನನ್ನು ಅರಸಲು ಹೊರಟನು.ಸೀತಮ್ಮನನ್ನು ಅರಸಲು ಹೊರಟನು. ಜಾಂಬವಂತನು ಶಿಲೆಯನ್ನು ಇಟ್ಟ ಸ್ಥಳದಲ್ಲಿ ಕಲಿಯುಗದಲ್ಲಿ ದೇವಾಲಯ ನಿರ್ಮಾಣವಾಗಿದೆ. ಅದು ಜಾಂಬವತ್ ಪ್ರತಿಷ್ಠೆಯಾಗಿದೆ.

### ದೇವಾಲಯದ ಪ್ರಾರಂಭ

ಕಲಿಯುಗದಲ್ಲಿ ಒಂಟಿ ಮತ್ತು ಮಿಟ್ಟ ಎಂಬ ಬೇಟೆಗಾರ ಸೋದರರು ಈ ಪ್ರಾಂತ್ಯದ ಅಡವಿಯ ಅಧಿಪತ್ಯ ಮಾಡುತ್ತಿದ್ದರು. ಈ ಪ್ರಾಂತವನ್ನು ದರ್ಶಿಸಲು ಬಂದ ಉದಯಗಿರಿ ರಾಜು ಕಂಪರಾಯಲಿಗೆ ಉಪಚಾರ ಮಾಡಿದರು. ಸೀತಮ್ಮನಿಗಾಗಿ ರಾಮನು ಸೃಷ್ಟಿಸಿದ್ದ ನೀರಿನ ಬುಗ್ಗೆಯನ್ನು ಜಾಂಬವಂತನು ತಪಸ್ಸು ಮಾಡಿದ ಏಕಶೃಂಗಬೆಟ್ಟವನ್ನು, ರಾಮನು ವನವಾಸದಲ್ಲಿ ನೆಲೆಸಿದ್ದ ಬೆಟ್ಟವನ್ನು ತೋರಿಸಿ,ಇಲ್ಲಿ ಒಂದು ದೇವಸ್ಥಾನವನ್ನು ನಿರ್ಮಿಸಲು ಕೋರಿದರು. ಕಂಪರಾಯನು ಅವರ ಕೋರಿಕೆಯನ್ನು ಮನ್ನಿಸಿದನು.ದೇವಸ್ಥಾನದ ನಿರ್ಮಾಣಕ್ಕಾಗಿ ಒಂದು ಕೆರೆಯನ್ನೂ ನಿರ್ಮಿಸಲು ಕಂಪರಾಯನು ನಿರ್ಣಯಿಸಿದನು.ಆ ಜವಾಬ್ದಾರಿಯನ್ನು ಆ ಸೋದರರಿಗೆ ಒಪ್ಪಿಸಿದನು.ಹೀಗೆ ಒಂಟಿಮಿಟ್ಟದಲ್ಲಿ ಕೋದಂಡರಾಮ ದೇವಾಲಯ ನಿರ್ಮಾಣವಾಯಿತು. ಕ್ರಿ.ಶ. 1356ರಲ್ಲಿ ಕಾಶಿಯಿಂದ ರಾಮೇಶ್ವರಕ್ಕೆ ಹೋಗುವಾಗ ವಿದ್ಯಾರಣ್ಯರ ಉಪಸ್ಥಿತಿಯಲ್ಲಿ ಬುಕ್ಕರಾಯ ಚಕ್ರವರ್ತಿಯು ವಿಗ್ರಹವನ್ನು ಪ್ರತಿಷ್ಠಾಪಿಸಿ, ದೇವಾಲಯವನ್ನು ಮತ್ತು ಕರೆಯನ್ನು ಪ್ರಜೆಗಳಿಗೆ ಅರ್ಪಿಸಿದನು. ಒಂಟಿಮಿಟ್ಟ ನಿರ್ಮಿಸಿದ ದೇವಾಲಯ ಇದ್ದ ಕಡೆ ಊರು ನಿರ್ಮಾಣವಾಯಿತು. ಅದನ್ನು ಒಂಟಿಮಿಟ್ಟ ಎಂದು ಕರೆದರು.



### ದೇವಾಲಯದ ವಿಸ್ತರಣೆ

ಬುಕ್ಕರಾಯನು ಪ್ರತಿಷ್ಟಾಪಿಸಿದ ಕಾಲದಲ್ಲಿ ದೇವಾಲಯವು ಇಂದು ಇರುವಷ್ಟು ವಿಶಾಲವಾಗಿರಲಿಲ್ಲ. ಗರ್ಭಗುಡಿ, ಮುಖಮಂಡಪ ಮತ್ತು ಗರ್ಭಗುಡಿಯ ಮೇಲೆ ಚಿಕ್ಕ ಗೋಪುರ ಮಾತ್ರ ಇದ್ದವು. ಸುಮಾರು ಎರಡೂವರೆ ಶತಮಾನಗಳ ನಂತರ ಸಿದ್ಧವಾದ ಕೇಂದ್ರವಾದ ವಿಜಯನಗರ ಸಾಮ್ರಾಜ್ಯದಲ್ಲಿ ಸಾಮಂತರಾಜರು ರಾಜ್ಯಭಾರ ಮಾಡುತ್ತಿದ್ದರು. ಸಾಮಂತ ಎಲ್ಲಮರಾಜು ಪುತ್ರನಾದ ಅನಂತರಾಜು, ಅನಂತ ರಾಜನ ಪುತ್ರನಾದ ತಿರುವೆಂಗಳನಾಥರಾಜು,ಈ ತಿರುವೇಂಗಳನಾಥರಾಜನ ಪುತ್ರನಾದ ಕುಮಾರ ಅನಂತರಾಜು- ಈ ಮೂವರು ಈ ದೇವಾಲಯನನ್ನು ವಿಸ್ತರಿಸಿದರು. ಇವರ ಕಾಲದಲ್ಲಿ ರಂಗಮಂಟಪ, ಕಲ್ಯಾಣ ಮಂಟಪ, ಮಹಾ ಪ್ರಕಾರ, ಮೂರು ಗಾಳಿಗೋಪುರಗಳು, ಸಂಜೀವರಾಯ ಸ್ವಾಮಿ ದೇವಸ್ಥಾನ, ರಾಮತೀರ್ಥ, ರಾಮನ ತೇರುಗಳನ್ನು ನಿರ್ಮಿಸಲಾಯಿತು.

### ತಿ.ತಿ.ದೇ. ಅಧೀನಕ್ಕೆ ದೇವಾಲಯ

ಮಹಮ್ಮದೀಯರು ಈ ದೇಶವನ್ನು ಆಕ್ರಮಣ ಮಾಡಿದ ಮೇಲೆ ದೇವಾಲಯದ ನಿರ್ವಹಣೆಗೆ ಆರ್ಥಿಕ ಸಂಕಷ್ಟ ಎದುರಾಯಿತು. ಇಂಗ್ಲೀಷರು ಬಂದಾಗಲೂ ಇದೇ ಪರಿಸ್ಥಿತಿ ಮುಂದುವರೆದಿತ್ತು. ಇಪ್ಪತ್ತನೇ ಶತಾಬ್ಧಿ ಪ್ರಾರಂಭದಲ್ಲಿ ನಾವೀಕೊಲದ ಸುಬ್ಬಾರಾವು ಅವರು ತೆಂಗಿನ ಚಿಪ್ಪು ಹಿಡಿದು ದೇಶವೆಲ್ಲಾ ತಿರುಗಿ ಚಂದಾಶೇಖರಿನ ದೇವಾಲಯಕ್ಕೆ ಹಿಂದಿನ ವೈಭವವನ್ನು ಮರುಕಳಿಸಿದನು. ಆಂಧ್ರಪ್ರದೇಶದಿಂದ ತೆಲಂಗಾಣ ಬೇರೆಯಾದ ಮೇಲೆ ಒಂಟಿಮಿಟ್ಟ ದೇವಾಲಯಕ್ಕೆ ರಾಷ್ಟ್ರ ಮಟ್ಟದಲ್ಲಿ ಪ್ರಚಾರ ಸಿಕ್ಕಿತು. ದೇವಾಲಯದ ನಿರ್ವಹಣೆಯ ಜವಾಬ್ದಾರಿಯನ್ನು ತಿರುಮಲೆ ತಿರುಪತಿ ದೇವಸ್ಥಾನದವರು ವಹಿಸಿಕೊಂಡು. ದೇವಾಲಯದ ಒಳಗೆ ಕೆಲವು ಮಾರ್ಪಾಟುಗಳು ನಡೆಯುತ್ತಿವೆ. ದೇವಾಲಯದ ಸುತ್ತಲೂ ಕಾಂಪೌಂಡ್ ನಿರ್ಮಾಣವಾಯಿತು. ಒಳಗಡೆ ಪ್ರಾಂಗಣದಲ್ಲಿ ಕಲ್ಯಾಣವೇದಿಕೆಯನ್ನು ನಿರ್ಮಿಸಿ ಅಲ್ಲಿ ಕಲ್ಯಾಣೋತ್ಸವವನ್ನು ನಿರ್ವಹಿಸುತ್ತಿದ್ದಾರೆ. ವರ್ಷವಿಡೀ ಜರುಗುವ ವಿವಿಧ ಉತ್ಸವಗಳನ್ನು ಜನರಿಗೆ ಆಕರ್ಷವಾಗುವ ರೀತಿಯಲ್ಲಿ ನಿರ್ವಹಿಸುತ್ತಾರೆ. ಪ್ರತಿದಿನ ವೇದಪಾರಾಯಣ ನಡೆಯುತ್ತದೆ. ಪ್ರತಿ ಹುಣ್ಣಿಮೆಯಂದು ಸೀತಾರಾಮ ಕಲ್ಯಾಣವನ್ನು ನಡೆಸುತ್ತಾರೆ.

### ದೇವಾಲಯವನ್ನು ಅನ್ನಮಯ್ಯನು ದರ್ಶಿಸಿದ್ದಾನೆ

ದೇವಾಲಯವು ತಿರುಪತಿ-ಕಡಪ ಮಾರ್ಗದಲ್ಲಿ ಚೆನ್ನೈ-ಮುಂಬೈ ರೈಲ್ವೆ ಮಾರ್ಗದಲ್ಲಿ ಇರುವುದರಿಂದ ಯಾತ್ರಿಕರು ದರ್ಶಿಸಲು ಅನುಕೂಲಕರವಾಗಿದೆ. ದಿನದಿನಕ್ಕೂ ಆಲಯದ ವೈಭವ ವೃದ್ಧಿಸುತ್ತಿದೆ. ತಿರುಮಲೆ ವೇಂಕಟೇಶ್ವರನ ಕುರಿತು 32 ಸಾವಿರ ಕೀರ್ತನೆಗಳನ್ನು ರಚಿಸಿರುವ ಅನ್ನಮಾಚಾರ್ಯರು ಸಾವಿರ ಈ ಸಮೀಪದಲ್ಲಿರುವ ತಾಳ್ಲಪಾಕ ಊರಿನವರೇ!ಅನ್ನಮಯ್ಯ ಒಂಟಿಮಿಟ್ಟ ಸ್ವಾಮಿಯನ್ನು ದರ್ಶಿಸಿದ್ದಾರೆ. ಸ್ವಾಮಿಯ ಕುರಿತು ಗೀತೆಯನ್ನು ಹಾಡಿದ್ದಾನೆ. ಗೀತೆಯಲ್ಲಿನ ಭಾವವನ್ನು ಆಸ್ವಾದಿಸುತ್ತಾ ಶ್ರೀ ರಾಮಚಂದ್ರನನ್ನು ಸ್ಮರಿಸೋಣ. ಈ ಆಲಯವನ್ನು ದರ್ಶಿಸೋಣ. ನಮಸ್ಕರಿಸಿ ಜೀವನವನ್ನು ಪಾವನಗೊಳಿಸಿಕೊಳ್ಳೋಣ.


ಹೆಲ್ಮೆಟ್ ತಪ್ಪದೇ ಧರಿಸಬೇಕು



ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.

ಹೆಲ್ಮೆಟ್ ಧರಿಸಿ ವಾಹನ ನಡೆಸಿ

# ಪದಬಂಧ -5

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 | | | | | | | 10 |
| 2 | 2 | | | | | 11 | | |
| 3 | 12 | 13 | | 5 | | | | |
| 4 | | | 6 | | | | | |
| 5 | | | | | 14 | | 7 15 | |
| 6 | | 3 | | | | | | 8 |
| 7 | | | | | | | | 9 |
| 8 | 4 | | | | | | | |

**ಎಡದಿಂದ ಬಲಕ್ಕೆ**

01.ತಿರುಮಳಿಶೈ ಆಳ್ವಾರರ ನಾಲಾಯಿರ ಪ್ರಬಂಧ ...(7)

02.ಪೆರಿಯಾಳ್ವಾರ್ ತಿರುಮೊಳಿ 1-5 ರ ಪ್ರತಿಪಾಶುರವನ್ನು ಆಳ್ವಾರರು ಹೀಗೆ ಅಂತ್ಯಗೊಳಿಸುತ್ತಾರೆ 'ಆಡು' ಯಿಂದ ಆರಂಭ ...(4)

03.ನಾಚ್ಚಿಯಾರ್ ತಿರುವೊಮೊಷಿಯ 'ವಾರಣ ಮಾಯಿರಂ' ನಲ್ಲಿ (ಆಂಡಾಳ್ ತಾಯಾರ್ ವಿರಚಿತ) ಒಬ್ಬ ಸಖಿ ತನ್ನ ಸ್ನೇಹಿತೆಯನ್ನು ಹೀಗೆ ನೆನೆಯುತ್ತಾಳೆ ಪ್ರತಿ ಪಾಶುರದಲ್ಲಿ ಎರಡು ಅಕ್ಷರ 'ತೋ' ಯಿಂದಾರಂಭ ...(2)

04.ತಿರುಮಂಗೈ ಆಳ್ವಾರರ್ 51 ಪಂಕ್ತಿಗಳ (ಪದಗಳ) ಒಂದೇ ಪಾಶುರದ ಪ್ರಬಂಧ 'ತಿರುವೆಷು' ಯಿಂದಾರಂಭ ...(8)

**ಬಲದಿಂದ ಎಡಕ್ಕೆ**

05.ಸ್ವಾಮಿಯ ಮೊದಲ ಅವತಾರ ...(2)

06.ಉತ್ತರದ ಪವಿತ್ರಸ್ಥಳ 'ಕಾ' ಯಿಂದಾರಂಭ ...(2)

07.ಪರಕಾಲನ್ ತಮ್ಮ ಪೆರಿಯ ತಿರುಮೊಷಿ 2-3 ರಲ್ಲಿ ಪ್ರತಿಪಾಶುರದಲ್ಲಿ ...(6) ಈ ದಿವ್ಯ ದೇಶವನ್ನು ಸ್ಮರಿಸುತ್ತಾರೆ (ಚನ್ನೈನಲ್ಲಿದೆ) 'ತಿರು' ಯಿಂದ ಆರಂಭ

08. ಮಣವಾಳ ಮಾಮುನಿಗಳ ತತ್ವಗಳ ಬಗೆಗಿನ ವ್ಯಾಖ್ಯಾನ ...(4)

09. ನಮ್ಮಾಳ್ವಾರರು ತಿರುವಾಯ್ಮೊಷಿ 10-10 ರ ಮೊದಲ ಪಾಶುರದಲ್ಲಿ ಮೊದಲ ಪದದ ನಂತರ ಬ್ರಹ್ಮನನ್ನು ಹೀಗೆ ಸ್ಮರಿಸುತ್ತಾರೆ. ...(8)

**ಮೇಲಿಂದ ಕೆಳಕ್ಕೆ**

10.ಪೆರಿಯ ತಿರುಮೊಷಿಯ 10-2 ರಲ್ಲಿ ಹಲವಾರು ಪಾಶುರಗಳಲ್ಲಿ 'ಅಂಜಿ' ನಿಂದಾರಂಭ ...(5)

11. ಆರನೇ ಅವತಾರದಲ್ಲಿ ಸ್ವಾಮಿಯ ಆಯುಧ 'ಪ' ಯಿಂದಾರಂಭ ...(3)

**- ಪಿ.ಜಿ. ಶ್ರೀನಿವಾಸನ್**

**- 44 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.**

12.ತಿರುಪ್ಪಾವೈ 24 ನೇ ಪಾಶುರದ ಮೊದಲ ಸಾಲಿನ ಕೊನೆ ಪದ (ತ್ರಿವಿಕ್ರಮಾವತಾರದ ವರ್ಣನೆ) ...(4)

**ಕೆಳಗಿನಿಂದ ಮೇಲಕ್ಕೆ**

13.ಭಗವದ್ವಿಷಯ ವ್ಯಾಖ್ಯಾನವನ್ನು ಮಣವಾಳ ಮಾಮುನಿಗಳು ಈ ಗ್ರಂಥದಲ್ಲಿ ರಚಿಸಿದ್ದಾರೆ. ಗ್ರಂಥದ ಆರಂಭದ 2 ಅಕ್ಷರಗಳಲ್ಲಿ ಮೊದಲನೆ ಅಕ್ಷರ 'ಈ' ...(2)

14.ತಿರುಮಂಗೈ ಆಳ್ವಾರರು ತಮ್ಮ ಪೆರಿಯತಿರುಮೊಷಿ ಪ್ರಬಂಧ 1-3 ರ ಪ್ರತಿ ಪಾಶುರದಲ್ಲಿ ಕೊನೆಯಲ್ಲಿ ಹೀಗೆ ಹೇಳಿಕೊಳ್ಳುತ್ತಾರೆ. 'ವ' ಯಿಂದಾ ಆರಂಭ ...(3)

15) ನಮ್ಮಾಳ್ವಾರರ ಋಗ್ವೇದ (ಕ್ಕೆ ಸಮನಾದ) ಪ್ರಬಂಧ ...(5)

ತಿರುಮಲ ತಿರುಪತಿ ದೇವಸ್ಥಾನಗಳು

# ಕಾರ್ವೇಟಿ ನಗರಂ

## ಶ್ರೀ ವೇಣುಗೋಪಾಲ ಸ್ವಾಮಿಯವರ ಬ್ರಹ್ಮೋತ್ಸವಗಳು

15-05-2020 ರಿಂದ 23-05-2020 ರ ವರೆಗೆ



**15-05-2020**
ಶುಕ್ರವಾರ
ಹಗಲು: ಧ್ವಜಾರೋಹಣ,
ರಾತ್ರಿ: ದೊಡ್ಡಶೇಷವಾಹನ.

**16-05-2020**
ಶನಿವಾರ
ಹಗಲು: ಚಿಕ್ಕಶೇಷವಾಹನ,
ರಾತ್ರಿ: ಹಂಸವಾಹನ.

**17-05-2020**
ಭಾನುವಾರ
ಹಗಲು: ಸಿಂಹವಾಹನ,
ರಾತ್ರಿ: ಮುತ್ತಿನಚಪ್ಪರವಾಹನ.

**18-05-2020**
ಸೋಮವಾರ
ಹಗಲು: ಕಲ್ಪವೃಕ್ಷವಾಹನ,
ರಾತ್ರಿ: ಸರ್ವಭೂಪಾಲವಾಹನ.

**19-05-2020**
ಮಂಗಳವಾರ
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ,
ರಾತ್ರಿ: ಗರುಡವಾಹನ.

**20-05-2020**
ಬುಧವಾರ
ಹಗಲು: ಹನುಮದ್ವಾಹನ,
ಸಂಜೆ : ವಸಂತೋತ್ಸವ
ರಾತ್ರಿ: ಗಜವಾಹನ.

**21-05-2020**
ಗುರುವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ.

**22-05-2020**
ಶುಕ್ರವಾರ
ಹಗಲು: ರಥೋತ್ಸವ,
ರಾತ್ರಿ: ಅಶ್ವವಾಹನ.

**23-05-2020**
ಶನಿವಾರ
ಹಗಲು: ಚಕ್ರಸ್ನಾನ,
ರಾತ್ರಿ: ಧ್ವಜಾವರೋಹಣ.

**24-05-2020**
ಭಾನುವಾರ
ಹಗಲು: ಪುಷ್ಪಯಾಗ ಮಹೋತ್ಸವ

# 14-02-2020 ರಿಂದ 23-02-2020 ರ ವರೆಗೆ ನಡೆದ ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವದ ದೃಶ್ಯಮಾಲಿಕೆ ಮತ್ತು ಕಲಾಬೃಂದಗಳು













ತಿರುಮಲ ತಿರುಪತಿ ದೇವಸ್ಥಾನಗಳು

## 14-02-2020 ರಿಂದ 22-02-2020 ರ ವರೆಗೆ ನಡೆದ
## ಶ್ರೀನಿವಾಸಮಂಗಾಪುರಂ ಶ್ರೀ ಕಲ್ಯಾಣವೇಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವದ
## ದೃಶ್ಯಮಾಲಿಕೆ ಮತ್ತು ಕಲಾಬೃಂದಗಳು










ತಿರುಮಲೆ ತಿರುಪತಿ ದೇವಸ್ಥಾನಗಳು

## 05-03-2020 ರಿಂದ 09-03-2020 ರ ವರೆಗೆ ನಡೆದ ತಿರುಮಲೆ ಶ್ರೀ ವೇಂಕಟೇಶ್ವರ ಸ್ವಾಮಿಯವರ ತೆಪ್ಪೋತ್ಸವದ ದೃಶ್ಯಮಾಲಿಕೆ









# ಅನ್ನಮಯ್ಯ ಜೀವನ ಚರಿತ್ರೆ


– ಡಾ|| ಮನ್ನೂರು ಶಿವಪ್ರವೀಣ್

–ಅನುವಾದ : ಶ್ರೀಮತಿ. ಸೂರ್ಯವಂಶಿ


'ಅರಲೇಕ ಯೀಯನ್ನಮಾಚಾರ್ಯ ಚರಿತ
ವೆರವಕ ನೀಕು ನೇವಿನ್ನವಿಂಚೆದನು
ಮನ್ನಿಂಚು ಯಲಮೇಲು ಮಂಗತೋ ನೀವು
ನಿನುಂಬಾಯನಿ ಭಕ್ತ ನಿಕರಂಬು ತೋಡ
ನವಧಾರು ಶ್ರೀ ವೆಂಕಟಾಚಲಾಧೀಶ
ಅವಧರಿಂಪುಡು ಗುರುಹರಿ ಭಕ್ತುಲಾರ।'

---ಅನ್ನಮಾಚಾರ್ಯ ಚರಿತ್ರೆ ದ್ವಿಪದ, ಪುಟ - 57 - 59

(ಕೊರತೆಯಿಲ್ಲದೇ ಈ ಅನ್ನಮಾಚಾರ್ಯ ಚರಿತ್ರೆಯನ್ನು ಭಯ ಪಡದೇ ನಾನು ನಿಮಗೆ ಬಿನ್ನೈಸುತ್ತಿದ್ದೇನೆ. ನನ್ನನ್ನು ಮನ್ನಿಸಿ ಅಲುಮೇಲುಮಂಗಳೊಂದಿಗೊಡಗೂಡಿ, ನಿನ್ನನ್ನು ಎಂದೂ ಬಿಟ್ಟಿರದ ನಿನ್ನ ಭಕ್ತಸಮುದಾಯದೊಂದಿಗೆ ಸೇರಿ ಶ್ರೀವೇಂಕಟಾಧೀಶ। ಕೇಳು, ಶ್ರೀಹರಿಯ ಭಕ್ತರುಗಳೇ ಕೇಳಿ!)

ಭೂಲೋಕ ವೈಕುಂಠವೆಂದೇ ಹೆಸರುವಾಸಿಯಾಗಿರುವ ಪವಿತ್ರವಾದ ಗಿರಿಶಿಖರ ಈ ತಿರುಮಲ. ಆ ಪರಮ ಪಾವನವಾದ ಬೆಟ್ಟದಲ್ಲಿ ಅಣುರೇಣು ಪರಿಪೂರ್ಣವಾಗಿ ವ್ಯಾಪಿಸಿರುವ ಶ್ರೀವೇಂಕಟಾಧೀಶನನ್ನು ತನ್ನ ಪದಕವಿತೆಗಳೊಂದಿಗೆ ಅರ್ಚಿಸಿದ ಅನ್ನಮಯ್ಯ ನಿಜವಾಗಿಯೂ ಪುಣ್ಯಜೀವಿ. ಗಾನ ಲೋಲನಾದ ಶ್ರೀ ಹರಿಗೆ 32 ಸಾವಿರ ಸಂಕೀರ್ತನೆಗಳನ್ನು ಸಮರ್ಪಿಸಿ, ತನನ್ನು ತಾನೇ ಧನ್ಯನಾಗಿಸಿ ಕೊಂಡಿದ್ದೇ ಅಲ್ಲದೇ, ತೆಲುಗು ಕುಲವನ್ನೇ ಧನ್ಯನಾಗಿಸಿದ. ಸಭೆಯ ಪ್ರಶಂಸೆಗಳಿಗಾಗಿಯೋ. ಸಾಹಿತ್ಯ ಗೋಷ್ಠಿಗಳಿಗಾಗಿಯೋ, ಸನ್ಮಾನಗಳಿ ಗಾಗಿಯೋ ಅಲ್ಲದೇ ಕೇವಲ ಭಗವಂತನಾದ ಶ್ರೀ ಹರಿಯನ್ನು ಸೇರುವುದಕ್ಕಾಗಿಯೇ ಆತನ ಸಂಕೀರ್ತನಾ ರಚನೆಗಳು ನಡೆದುವು. ಅದಕ್ಕೆ ಅನ್ನಮಯ್ಯ ಚಿರಸ್ಮರಣೀಯನಾದನು. ಚಿರಂಜೀವತ್ವವನ್ನು ಪಡೆದುಕೊಂಡ.

32 ಸಾವಿರ ಕೀರ್ತನೆಗಳೊಂದಿಗೆ ಭಗವಂತನ ಲೀಲೆಗಳನ್ನು ಗಾನ ಮಾಡಿ ಅನ್ನಮಯ್ಯ ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಪದಕವಿತಾಪಿತಾಮಹನೆಂದು ಹೆಸರುವಾಸಿಯಾದ. ತಿರುಮಲೆಯ ವೇಂಕಟೇಶ್ವರನ ಮೇಲೆ ಆಶುಕವಿತೆಗಳನ್ನು ಅನೇಕ ರೀತಿಯಲ್ಲಿ ಹಾಡಿ ಹೊಗಳಿದ. ಸ್ವಾಮಿಯ ಲೀಲೆಗಳನ್ನು, ದಶಾವತಾರದ





ಘಟ್ಟಗಳನ್ನು, ರಾಮಾಯಣ ಮಹಾಭಾರತ, ಭಾಗವತ ಪುರಾಣಗಳನ್ನು ತನ್ನ ಪದಕವಿತೆಯಲ್ಲಿ ಪ್ರಸ್ತಾವಿಸಿದ್ದಾನೆ. ಶ್ರೀ ವೇಂಕಟೇಶ್ವರ ಸ್ವಾಮಿಯ ಭಕ್ತಿಯನ್ನು ಪ್ರಚಾರ ಮಾಡುತ್ತಾ ಅಂದಿನ ಆಂಧ್ರ ಪ್ರದೇಶವನ್ನೆಲ್ಲಾ ತಿರುಗಾಡಿದ. ಅನೇಕ ಕ್ಷೇತ್ರಗಳನ್ನು ಸಂದರ್ಶಿಸಿದ. ತೀರ್ಥಗಳನ್ನು ಸೇವಿಸಿದ. ತಿರುಪತಿಯ ಗೋವಿಂದ ರಾಜಸ್ವಾಮಿ, ಕಡಪದ ಶ್ರೀ ವೇಂಕಟೇಶ್ವರಸ್ವಾಮಿ, ಒಂಟಿಮಿಟ್ಟ ಕೋದಂಡ ರಾಮಸ್ವಾಮಿ, ಪ್ರೊದ್ದುಟೂರ ಚೆನ್ನ ಕೇಶವಸ್ವಾಮಿ, ಅಹೋಬಿಲ ನಾರಸಿಂಹ ಸ್ವಾಮಿ, ಮಾರ್ಕಾಪುರಂ ಚೆನ್ನಕೇಶವ ಸ್ವಾಮಿ, ಕೋಯಿಲ ಕುಂಟ್ಲಪಾಂಡು ರಂಗ ಸ್ವಾಮಿ, ಶ್ರೀ ರಂಗನಾಥಸ್ವಾಮಿ, ವಾಯಲ್ಪಾಡು ಪಟ್ಟಾಭಿರಾಮಸ್ವಾಮಿ, ಕಸಾಪುರಂ ಅಂಜನೇಯಸ್ವಾಮಿ... ಹೀಗೇ ಅನೇಕ ಕ್ಷೇತ್ರಗಳಲ್ಲಿ ನೆಲೆಸಿರುವ ವಿವಿಧ ಅರ್ಚಾವತಾರ ಮೂರ್ತಿಗಳನ್ನು ದರ್ಶಿಸಿ, ತಾನು ಸಂದರ್ಶಿಸಿದ ಅರ್ಚಾವತಾರ ಗಳಲ್ಲಿ ತಾನು ಸದಾ ಸೇವಿಸುವ ಶ್ರೀ ವೇಂಕಟೇಶ್ವರನನ್ನೇ ನೋಡುತ್ತಾ ಅವರೆಲ್ಲರೂ ಶ್ರೀನಿವಾಸನ ಪ್ರತಿರೂಪ ವೆಂದೇ ಭಾವಿಸಿ ಸಂಕೀರ್ತನೆಗಳನ್ನು ಹಾಡಿದ.

ನಿತ್ಯಕಲ್ಯಾಣೋತ್ಸವ, ಸುಪ್ರಭಾತ, ಏಕಾಂತಸೇವೆ, ವಸಂತೋತ್ಸವ ಹೀಗೆ ಶ್ರೀನಿವಾಸನಿಗೆ ನಡೆಯುವ ಪ್ರತಿಯೊಂದು ಸೇವೆಗಳಲ್ಲಿ ಆಯಾ ಸಂದರ್ಭಗಳಿಗೆ ತಕ್ಕಂತೆ ಹಾಡುಗಳನ್ನು ರಚಿಸಿ ಕೃತಾರ್ಥನಾದ.

ಕಡಪಜಿಲ್ಲೆ, ರಾಜಂಪೇಟೆ ಮಂಡಲದಲ್ಲಿನ ಒಂದು ಸಣ್ಣ ಗ್ರಾಮವಾದ ತಾಳ್ಳ ಪಾಕದಲ್ಲಿ ಲಕ್ಕಮಾಂಬ, ನಾರಾಯಣ ಸೂರಿ ಎಂಬ ಪುಣ್ಯದಂಪತಿಗಳಿಗೆ ಕ್ರಿ.ಶ. 1408 ರಲ್ಲಿ ವೈಶಾಖ ಮಾಸದ ಹುಣ್ಣಿಮೆಯ ದಿನದಂದು ಶ್ರೀಹರಿಯ ನಂದಕ ಖಡ್ಗದ ಅಂಶದಿಂದ ಅನ್ನಮಯ್ಯ ಜನಿಸಿದ. ಆತನಿಗೆ ಐದನೆಯ ವಯಸ್ಸಿನಲ್ಲಿ ಉಪನಯನ, ವಿದ್ಯಾಭ್ಯಾಸಗಳು ಪ್ರಾರಂಭವಾಯಿತು. ಒಂದು ದಿನ ದರ್ಬೆಗಾಗಿ ಕಾಡಿಗೆ ಹೋಗಿ ಅಲ್ಲಿಂದ ಹಾಗೆಯೇ ವೇಂಕಟೇಶನ ಭಕ್ತರೊಂದಿಗೆ ಸೇರಿಕೊಂಡು ತಿರುಮಲೆಗೆ ಹೋಗಿ ಸ್ವಾಮಿಯನ್ನು ದರ್ಶಿಸಿ, ತನ್ನ ಹದಿನಾರನೆಯ ವರ್ಷದಲ್ಲಿ ಸಂಕೀರ್ತನಾ ಯಜ್ಞವನ್ನು ಆರಂಭಿಸಿದ.

ಸಾಳುವ ನರಸಿಂಹರಾಯನ ಆಹ್ವಾನದ ಮೇರೆಗೆ ಪೆನುಗೊಂಡ ತಲುಪಿ ಅಲ್ಲಿ ರಾಜನ ಆಶ್ರಯದಲ್ಲಿ ಇದ್ದು ಪದಕವಿಯೆಂದು ಜಗತ್ಪ್ರಸಿದ್ಧನಾದ. ರಾಯನನ್ನು ಹೊಗಳಿ ಕೀರ್ತಿಸಲಿಲ್ಲವೆಂಬ ಕಾರಣದಿಂದ ಅನ್ನಮಯ್ಯನನ್ನು ಸಂಕೋಲೆಗಳಿಂದ ಬಂಧಿಸಲ್ಪಟ್ಟ ನಂತರ ವಿಮುಕ್ತನಾಗಿ, ವಿರಕ್ತನಾಗಿ ತಿರುಮಲೇಶನ ಸೇವೆಯಲ್ಲಿ ತನ್ನ ಶೇಷಜೀವನವನ್ನು ಕಳೆದು ನಂತರದ ಪದಕವಿಗಳಿಗೆ ಮಾರ್ಗದರ್ಶಕನಾದ. ಇದು ಅನ್ನಮಯ್ಯನ ಸಂಕ್ಷಿಪ್ತ ಚರಿತ್ರೆ.

ಅನ್ನಮಯ್ಯ ಪದಾರ್ಚನೆ ಆತನೊಂದಿಗೇ ಮುಗಿಯಲಿಲ್ಲ. ಅವರ ವಂಶವೇ ಒಂದು ಸಾಹಿತ್ಯದ ವನವಾಯಿತು. ಆ ವನದಲ್ಲಿ ಅರಳಿದ ಪ್ರತಿಯೊಂದು ಹೂವೂ ಆ ವೇಂಕಟೇಶ್ವರನ ದಿವ್ಯಪಾದ ಪದ್ಮಗಳನ್ನು ಆಶ್ರಯಿಸುವಂತದೇ, ಅನ್ನಮಯ್ಯ ಪದಕವಿತಾ ಪಿತಾಮಹನಾದರೆ, ಆತನ ಹೆಂಡತಿ ತಾಳ್ಳಪಾಕ ತಿಮ್ಮಕ್ಕ ತೆಲುಗಿನಲ್ಲಿ ಪ್ರಥಮ ಕವಯಿತ್ರಿ ಅದೊಂದು ವಿಶೇಷವಾದ ಕುಟುಂಬ. ಆತನ ವಂಶದಲ್ಲಿ ಆತನ ನಂತರ, ಐದು ತಲೆಮಾರಿನವರು ತಮ್ಮ ಸಾಹಿತ್ಯದಿಂದ ಆ ಅಲುಮೇಲು ಮಂಗಪತಿಯನ್ನು ಅರ್ಚಿಸಿದ್ದನ್ನು ನಾವು ಇನ್ನೆಲ್ಲೂ ನೋಡಿಲ್ಲ. ತಾವು ನಂಬಿದ ತಿರುಮಲ ನಾಥನ ಗುಣಗಾನ ಸಂಕೀರ್ತನೆಯನ್ನೇ ತಮ್ಮ ಉಸಿರನ್ನಾಗಿಸಿಕೊಂಡು ಜೀವಿಸಿದ ತಾಳ್ಳಪಾಕದವರ ವಂಶದ ಬಗೆಗೆ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ.

## ಅನ್ನಮಯ್ಯ ವಂಶ

ಅನ್ನಮಯ್ಯನ ನಂದವರಾನ್ವಯನೆಂದು ತಾಳ್ಳಪಾಕ ಚಿನ್ನನ್ನ ಬರೆದ ಅನ್ನಮಾಚಾರ್ಯ ಚರಿತ್ರೆ ದ್ವಿಪದ ಕಾವ್ಯದಲ್ಲಿ ತಿಳಿಸಿದ್ದಾನೆ. ನಂದವರೀಕ ಬ್ರಾಹ್ಮಣ ಕುಟುಂಬಕ್ಕೆ ಸೇರಿದವರು ಅನ್ನಮಯ್ಯ. ಅನ್ನಮಯ್ಯ ವಂಶ ನಂದವರೀಕ ವಂಶ. ನಂದವರ ಅಗ್ರಹಾರಕ್ಕೆ ಸೇರಿದವರು ನಂದವರೀಕರು. ಈ ವಂಶದ ಹಿಂದೆ ಒಂದು ಇತಿಹಾಸವಿದೆ. ಕ್ರಿ.ಶ. 10 ನೆಯ ಶತಮಾನದಲ್ಲಿಂದಿನ ಕರ್ನೂಲು ಜಿಲ್ಲೆಯಲ್ಲಿನ "ನಂದವರಂ" ಎಂಬ ಗ್ರಾಮವನ್ನು ನಂದನೆಂಬ ರಾಜ ಪರಿಪಾಲಿಸುತ್ತಿದ್ದ. ಈತ ಪಾಂಡವ ವಂಶಕ್ಕೆ ಸೇರಿದವನೆಂದು ಪ್ರತೀತಿ ಇದೆ. ಈತನಿಗೆ ಪ್ರತೀದಿನ ಕಾಶಿಗೆ ಹೋಗಿ ಉಷಾಕಾಲದಲ್ಲಿ ಗಂಗಾ ಸ್ನಾನ ಮಾಡಿ ಬರಬೇಕೆಂಬ ಕೋರಿಕೆ ಇತ್ತು. ದತ್ತಾತ್ರೇಯನೆಂಬ ಸಿದ್ಧನ ಮಂತ್ರಶಕ್ತಿಯ ಮೂಲಕ ಪ್ರತೀದಿನ ಕಾಶಿಗೆ ಹೋಗಿ, ಗಂಗಾಸ್ನಾನ ಮಾಡಿ, ಸೂರ್ಯೋದಯಕ್ಕೆ ಮುನ್ನವೇ ಅರಮನೆಯನ್ನು ಸೇರುತ್ತಿದ್ದ. ಒಂದು ದಿನ ಆತನ ಹೆಂಡತಿ ಈ ವಿಧಾನವನ್ನೆಲ್ಲಾ ಗಮನಿಸಿ, ತಾನು ಕಾಶಿಗೆ ಬರುತ್ತೇನೆಂದು ಪಟ್ಟು ಹಿಡಿದು, ಆತನೊಂದಿಗೆ ಕಾಶಿಗೆ ಹೋಗಿ, ಗಂಗಾಸ್ನಾನ ಮಾಡಿ, ಹಿಂದಿರುಗುವ ವೇಳೆಯಲ್ಲಿ ಋತುಸ್ನಾನವಾದ್ದರಿಂದ, ಅವರ ಮಂತ್ರ ಶಕ್ತಿ ಕೆಲಸ ಮಾಡಲಿಲ್ಲ. ಆ ಸಮಯದಲ್ಲಿ ನಂದನು ಕಾಶಿಯಲ್ಲಿ ಇರುವ ಮಹಿಮಾನ್ವಿತರಾದ ವೇದ ಪಂಡಿತರನ್ನು ಆಶ್ರಯಿಸಿದ. ಆ ಕಾಶಿ ಬ್ರಾಹ್ಮಣರು ತಮ್ಮ ತಪಃ ಶಕ್ತಿಯನ್ನೆಲ್ಲಾ

ಧಾರೆಯೆರೆದು ಅವರು ಮನೆಯನ್ನು ತಲುಪುವಂತೆ ಮಾಡಿದರು. ಅದಕ್ಕೆ ಪ್ರತಿಯಾಗಿ ಅವರಿಗೆ ಎಂತಹಾ ಸಹಾಯ ಬೇಕೆಂದರೂ ತಾನು ಮಾಡುತ್ತೇನೆಂದು ಗಂಗಾದೇವಿಗೆ ಪ್ರತಿರೂಪದಂತೆ ಭಾಸವಾಗುವ ಚಾಮುಂಡೇಶ್ವರಿಯ ಸಾಕ್ಷಿಯಾಗಿ ನಂದನು ಪ್ರತಿಜ್ಞೆ ಮಾಡಿದ. ಕೆಲವು ಕಾಲದ ನಂತರ ಕಾಶಿಯಲ್ಲಿ ಈ ಕ್ಷಾಮ ಏರ್ಪಟ್ಟಿದ್ದರಿಂದ ರಾಜನ ಪ್ರತಿಜ್ಞೆಯನ್ನು ನೆನೆಪಿಸಿ ಕೊಂಡು ಕಾಶಿಯ ಪಂಡಿತರು ನಂದವರಕ್ಕೆ ಬಂದು ಸಹಾಯ ವನ್ನು ಬೇಡಿದರು. ಆದರೆ ಆ ಮಾತನ್ನು ಮರೆತಿದ್ದ ರಾಜನು ತಾನು ಸಹಾಯ ಮಾಡುತ್ತೇನೆಂದು ಯಾವಾಗ ಹೇಳಿದ್ದೆ ಎಂದು ಪ್ರಶ್ನಿಸಿದ? ಅದಕ್ಕೆ ಸಾಕ್ಷಿಯನ್ನು ತೋರಿಸಬೇಕೆಂದು ಕೇಳಿದ. ಅದಕ್ಕೆ ಕಾಶೀ ಪಂಡಿತರು ಏನೂ ತೋಚದೇ ರಾಜನು ಪ್ರಮಾಣ ಮಾಡಿದ ಚಾಮುಂಡೇಶ್ವರಿದೇವಿ ನಡೆದಿದ್ದ ವಿಷಯ ವನ್ನೆಲ್ಲಾ ವಿವರಿಸಿದಳು. ತನ್ನ ತಪ್ಪನ್ನು ತಿಳಿದುಕೊಂಡು ನಂದನು ತನ್ನ ನಂದ ವರನ್ನು ಅವರಿಗೆ ಅಗ್ರಹಾರದಂತೆ ಧಾರೆ ಯೆರೆದ. ಸಾಕ್ಷಿಯಾಗಿ ಬಂದ ಮಾತೆಯನ್ನು ಅಲ್ಲೇ ನೆಲೆಸ ಬೇಕೆಂದು ಬೇಡಿಕೊಂಡ. ಆ ಮಾತೆಯೇ ಇಂದು ಸಾಕ್ಷಿಮಾತೆ ಚೌಡೇ ಶ್ವರೀಯಾಗಿ ನಂದವರದಲ್ಲಿ ನೆಲೆಸಿದಳು. ಈ ವಿವರಣೆ ಯೆಲ್ಲಾ ಗೌನಿಪಲ್ಲಿ ರಾಮಪ್ಪಕವಿಯಿಂದ ರಚಿತವಾದ ಚೌಡೇ ಶ್ವರೀ ಮಹಾತ್ಮ್ಯದಲ್ಲಿ ತಿಳಿಸಲಾಗಿದೆ. ಈ ನಂದವರ ಅಗ್ರಹಾರ ದಲ್ಲಿ ಸೇರಿದ ಬ್ರಾಹ್ಮಣರು ನಂದವರೀಕರಾದರು. ಆ ನಂದವ ರೀಕ ವಂಶಕ್ಕೆ ಸೇರಿದವರೇ ತಾಳ್ಳಪಾಕದವರು. ನಂದವ ರಾಗ್ರಹಾರದಿಂದ ಕಡಪ ಜಿಲ್ಲೆ, ರಾಜಂಪೇಟೆ ಮಂಡಲದಲ್ಲಿ ತಾಳ್ಳಪಾಕಕ್ಕೆ ಬಂದಿದ್ದರಿಂದ ತಾಳ್ಳಪಾಕದಲ್ಲಿ ಅನ್ನಮಾ ಚಾರ್ಯರ ವಂಶದವರು ಸ್ಥಿರ ನಿವಾಸವನ್ನು ಏರ್ಪಾಟು ಮಾಡಿಕೊಂಡಿದ್ದರಿಂದ ಇವರ ಹೆಸರು ತಾಳ್ಳಪಾಕದವರೆಂದು ಪ್ರಸಿದ್ಧಿ ಪಡೆಯಿತು. ಇವರ ಗೋತ್ರ ಭಾರದ್ವಾಜಸ ಗೋತ್ರ. ಅಶ್ವಲಾಯನ ಸೂತ್ರ.

ಇನ್ನು ಅನ್ನಮಯ್ಯರ ಪೂರ್ವಿಕರ ವಿಷಯಕ್ಕೆ ಬಂದರೆ

ನಂದವರಾನ್ವಯಾರ್ಣವ ಸುಧಾಕರುಡು
ಗುರು ಭಾರದ್ವಾಜಸ ಗೋತ್ರುಡು ಪಾಪ
ಹರಬುದ್ಧಿ ಯಾಶ್ವಲಾಯನ ಸೂತ್ರಶಾಲಿ
ನಾರಾಯಣುಂಡನು ನಯವೇದಿ ವೇದ
ಪಾರಾಯಣುಂಡು ವಿಷ್ಣುಪದ ಭಕ್ತಿರತುಂಡು
ಅನಘುನಿ ವಿಟ್ಠಲಹ್ವಯುಂಗಾಂಚೆ; ನತಂಡು
ಕನಿಯೆ ನಾರಾಯಣು ಘನ ಯಶೋನಿಧಿನಿ
ನತಂಡು ವಿಟ್ಠಲುಂಗಾಂಚೆ; ನತಂಡು ಲೋಕೈಕ
ಸುತುಂಡೈನ ನಾರಾಯಣುನಿ ತಂಡ್ರಿಯಯ್ಯ;
(ಅನ್ನಮಾಚಾರ್ಯ ಚರಿತ್ರೆ ದ್ವಿಪದ, ಪುಟ - 72, 73)

ನಂದವರಾನ್ವಯದಲ್ಲಿ ಜನಿಸಿದ ನಾರಾಯಣನು ವೇದಪಾರಾಯಣನು, ವಿಷ್ಣುಭಕ್ತ, ಈತನಿಗೆ ವಿಟ್ಠಲನೆಂಬ ಕುಮಾರನಿದ್ದ. ಆ ವಿಠ್ಠಲನಿಗೆ ನಾರಾಯಣನೆಂಬ ಕುಮಾರ, ಆ ನಾರಾಯಣನಿಗೆ ವಿಠ್ಠಲನೆಂಬ ಕುಮಾರನು, ಆತನಿಗೆ ಲೋಕಕ್ಕೆ ಸುತನಾದ ನಾರಾಯಣನೆಂಬ ಕುಮಾರನು, ಆ ನಾರಾಯಣನಿಗೆ ನಾರಾಯಣಸೂರಿ ಎಂಬ ಕುಮಾರನು ಜನಿ ಸಿದ. ಆ ನಾರಾಯಣಸೂರಿಯ ಕುಮಾರನೇ ಅನ್ನಮಯ್ಯ.

ಸಿರಿವರು ಮೆಪ್ಪಿಂಚಿ ಚೆಲಂಗಿ ಯಾದೇವು
ವರಮುನಂಗ ದನಯಂತ ವಾರಿಂ ಬುತ್ರಕುಲ
ನರಸಯಾಚಾರ್ಯು ನುನ್ನತ ಯಶೋಧನುನಿಂ
ದಿರುಮಲ ಚಾರ್ಯುನಿ ಧೀ ವಿಶಾರದನಿಂ
ಗಾಂಚಿ, ವಾರಸು ದನ ಕರುಣಿ ವಿದ್ಯಲನು
ಗಾಂಚನಾಂಬರು ಭಕ್ತಿ ಕಲಿಮಿಂಬೆಂಪೊಂದ
ಶೌರಿ ಕಥಾ ಸುಧಾ ಸಲ್ಲಾಪ ಗರಿಮ
ಧಾರುಣಿ ನೆಂತಯುಂದನರಾರು ಚುಂಡೆ;
-(ಅನ್ನಮಾಚಾರ್ಯ ಚರಿತ್ರೆ ದ್ವಿಪದ, ಪುಟ 422)

ಅನ್ನಮಯ್ಯ ಶ್ರೀನಿವಾಸನ ವರಪ್ರಸಾದದಿಂದ ಉತ್ತಮ ವಾದ ಮಕ್ಕಳನ್ನು ಪಡೆದ ಅವರಲ್ಲಿ ನರಸಯಾಚಾರ್ಯ ಹಿರಿಯ ಪುತ್ರ, ಎರಡನೆಯ ಮಗ ತಿರುಮಲಾಚಾರ್ಯ. ನರಸಯಾಚಾರ್ಯ ಅನ್ನಮಯ್ಯನ ಮೊದಲ ಪತ್ನಿತಿರುಮಲಮ್ಮ (ತಿಮ್ಮಕ್ಕ)ಳ ಕುಮಾರ. ಎರಡನೆಯ ಹೆಂಡತಿಯಾದ ಅಕ್ಕಲಮ್ಮನ ಮಗ ತಿರುಮಲಾಚಾರ್ಯ.

-(ಮುಂದುವರೆಯುವುದು...)


## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನು ಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ



# ಅಮ್ಮನಂತೆ ಆರೋಗ್ಯದಾಶೀರ್ವಾದ ನೀಡುವ ನಿಂಬೆ

- ಮೂಲ : ಡಾ || ಸಿ. ಮಧುಸೂದನ ಶರ್ಮ
9000761390
ಅನುವಾದ - ಶ್ರೀಮತಿ

ವರ್ಷವಿಡೀ ಲಭಿಸುತ್ತಾ ಎಲ್ಲಾ ವರ್ಗದ ಜನರಿಗೂ ಕೈಗೆಟುಕುವಂಥಹ ಹಣ್ಣೇ ನಿಂಬೆಹಣ್ಣು. ಆಹಾರ ಪದಾರ್ಥಗಳ ಹಾಗೂ ಅಡುಗೆ ಮನೆ ಪಾಕಗಳ ತಯಾರಿಕೆಗಳಲ್ಲಿ ಉಪಯೋಗವಾಗುವಂಥದೆಂಬ ವಿಷಯವು ನಮ್ಮೆಲ್ಲರಿಗೂ ತಿಳಿದಿದ್ದೇ.

ಅಷ್ಟೇ ಅಲ್ಲದೇ, ಈ ನಿಂಬೆ ಆಹಾರ ಪೋಷಕಾಂಶಗಳ ಹಾಗೂ ಔಷಧೀಯ ಗುಣಗಳನ್ನು ಪುಷ್ಕಳವಾಗಿ ಹೊಂದಿ, ಸೌಂದರ್ಯ ಸಾಧನವಾಗಿಯೂ ಸಹಾ ಉಪಯೋಗಿಸ ಲಾಗುವ ಮಹಾದ್ಭುತ ದಿವ್ಯೌಷಧಿಎಂದರೆ ಅತಿಶಯೋಕ್ತಿ ಯಾಗಲಾರದು .

ಸಂಸ್ಕೃತದಲ್ಲಿ ಜಂಜೀರ, ನಿಂಬು, ನಿಂಬುಕಾ ಎಂಬ ಹೆಸರುಗಳಿಂದ ವ್ಯವಹರಿಸಲ್ಪಡುವ ಈ ನಿಂಬೆಯನ್ನು ಆಂಗ್ಲದಲ್ಲಿ 'ಲೆಮನ್' ಎನ್ನುತ್ತಾರೆ.

ರೂಟೇಸಿ ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ಇದರ ಶಾಸ್ತ್ರೀಯ ನಾಮಧೇಯ 'ಸಿಟ್ರಿಸ್' ಎಸಿಡ್.

ಭಗವಂತನು ಕೊಟ್ಟಿರುವ ಈ ನಿಂಬೆಯನ್ನು ವಿವಿಧ ಅನಾರೋಗ್ಯ ಸಮಸ್ಯೆಗಳಲ್ಲಿ ಯಾವ ರೀತಿಯಲ್ಲಿ ಸದ್ವಿನಿಯೋಗ ಮಾಡಿಕೊಂಡು ಉತ್ತಮ ಫಲಿತಾಂಶವನ್ನು ಹೊಂದಬಹುದೆಂದು ಪ್ರಸ್ತುತ ತಿಳಿದುಕೊಳ್ಳೋಣ.

### ಮುಖದ ಮೇಲೆ ಕಪ್ಪು ಮಚ್ಚೆ - ಕಪ್ಪು ಮೈಬಣ್ಣ ತಗ್ಗಲು

ದಿನಕ್ಕೊಂದು ಬಾರಿ ಬೇಕಾದಷ್ಟು ನಿಂಬೆರಸದಲ್ಲಿ ಕಾಯಿಸಿದ ಹಾಲು ಹಾಕಿ ಕಲಿಸಿ ಮುಖದ ಮೇಲೆ ಹಚ್ಚಿ ಸ್ವಲ್ಪ ಹೊತ್ತು ಮೆಲ್ಲನೆ ಮಸಾಜು ಮಾಡಿ ಅರ್ಧಗಂಟೆ ಬಿಟ್ಟು ಉಗುರುಬೆಚ್ಚಗಿನ ನೀರಿನಿಂದ ಶುಭ್ರಮಾಡಿಕೊಂಡರೆ ಈ ಸಮಸ್ಯೆ ಶೀಘ್ರ ಬಗೆಹರಿಯುತ್ತದೆ.

### ಚೆನ್ನಾಗಿ ಹಸಿವುಂಟಾಗಲು

ದಿನವೂ ಒಂದು ಬಾರಿ ಆಹಾರಸೇವನೆಗೆ ಅರ್ಧಗಂಟೆ ಮುಂಚೆ 100. ಮಿ.ಲೀ ನೀರಿನಲ್ಲಿ ಅರ್ಧ ಟೀ ಸ್ಪೂನ್ ಬೆಲ್ಲದ ಪುಡಿಯನ್ನು ಕರಗಿಸಿ ಅದರಲ್ಲಿ ಅರ್ಧ ಅಳತೆ ನಿಂಬೆರಸ, ಒಂದು ಗ್ರಾಂ ಉಪ್ಪು, ಒಂದು ಗ್ರಾಂ ಜೀರಿಗೆ ಪುಡಿ ಕಲಿಸಿ ಸೇವಿಸುತ್ತಿದ್ದರೆ ಜೀರ್ಣರಸಗಳ ಉತ್ಪತ್ತಿ ಚೆನ್ನಾಗಿ ಆಗಿ ಜಠರಾಗ್ನಿ ಪ್ರಚೋದನೆಗೊಂಡು ಹಸಿವು ಚೆನ್ನಾಗಿ ಆಗುತ್ತದೆ.

### ಮೈ ನವೆಗೆ

ದಿನವೂ ಒಂದು ಬಾರಿ ಬೇಕಾದಷ್ಟು ನಿಂಬೆರಸದಲ್ಲಿ ತಕ್ಕಷ್ಟು ಕೊಬ್ಬರಿಎಣ್ಣೆ ಕಲಿಸಿ ಮೈಗೆ ಹಚ್ಚಿಕೊಳ್ಳುತ್ತಿರಬೇಕು.

### ಕೂದಲು ಸೀಳದಿರುವುದಕ್ಕೆ

100ಮಿ.ಲೀ. ನಿಂಬೆರಸವನ್ನು ಅರ್ಧ ಕಿಲೋ ಕೊಬ್ಬ ರೆಣ್ಣೆಯಲ್ಲಿ ಬೆರಸಿ ಸಣ್ಣ ಉರಿಯಲ್ಲಿ ಎಣ್ಣೆ ಮಾತ್ರ ಉಳಿವಂತೆ ಮರಳಿಸಿ, ಕೆಳಗಿಳಿಸಿ, ಬಿಸಿಯಾರಿದ ನಂತರ ಶೋಧಿಸಿ ಶೇಖರಿಸಿಟ್ಟು ಕೊಂಡು ದಿನವೂ ಕೇಶ ತೈಲವಾಗಿ ಬಳಸುತ್ತಿದ್ದರೆ ಕೂದಲುಗಳು ದೃಢತ್ವವನ್ನು ಮೈಗೂಡಿಸಿಕೊಂಡು ಸೀಳ ದಂತೆ ಉಳಿಯುತ್ತವೆ. ಹೊಟ್ಟುಬಾರದು. ಕೇಶಗಳು ಮೃದುವಾಗಿ ಕೋಮಲವಾಗಿ ಬಹಳಷ್ಟು ಕಾಂತಿಯನ್ನು ಪಡೆದುಕೊಳ್ಳುತ್ತವೆ.

### ಅಧಿಕ ತೂಕವು ತಗ್ಗಲು

ಜೀರಿಗೆಪುಡಿ, ಹವೀಜದಪುಡಿ, ಮೆಣಸಿನ ಪುಡಿ ಒಂದೊಂದು 40 ಗ್ರಾಂ ನಂತೆ ತೆಗೆದುಕೊಂಡು ಆಯುರ್ವೇದ ವಿಕ್ರಯಾಲಯಗಳಲ್ಲಿ ದೊರಕುವ ಸೈಂಧವ ಲವಣದ ಪುಡಿ 10 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಒಂದು ಅಥವಾ ಎರಡು ಬಾರಿ ಬಾರಿಯೊಂದಕ್ಕೆ 200 ಮಿ.ಲೀ ಉಗುರುಬೆಚ್ಚಗಿನ ನೀರಿ ನಲ್ಲಿ 2-3 ಗ್ರಾಂ ಪುಡಿಯನ್ನು ಮತ್ತು 10 ಮಿ.ಲೀ ನಿಂಬೆ ರಸವನ್ನು ಕಲಿಸಿ ಸೇವಿಸುತ್ತಾ, ವ್ಯಾಯಾಮ ಮಾಡುತ್ತಾ ಆಹಾರ ನಿಯಮಗಳನ್ನು ಪಾಲಿಸಿದರೆ ಶೀಘ್ರವಾಗಿ ಚೊಕ್ಕವಾದ ಪರಿಷ್ಕಾರವು ದೊರಕುತ್ತದೆ.

### ದದ್ದುಗಳಿಗೆ

ಪ್ರತಿನಿತ್ಯ ಮೂರು ಬಾರಿ, ಬಾರಿಯೊಂದಕ್ಕೆ 100 ಮಿ.ಲೀ.ನೀರಿನಲ್ಲಿ 2-3 ಗ್ರಾಂ ಸ್ಫಟಿಕ ಬೆಲ್ಲ ಪುಡಿಯನ್ನು 5. ಮಿ.ಲೀ. ನಿಂಬೆರಸ ಕಲಿಸಿ ಸೇವಿಸುತ್ತಿರಬೇಕು.

**ಬಿಕ್ಕುಗಳಿಗೆ**

ದಿನವೂ ಬೆಳಗ್ಗೆ, ಸಾಯಂಕಾಲ ಬಾರಿಯೊಂದಕ್ಕೆ 10.ಮಿ.ಲೀ. ನಿಂಬೆರಸದಲ್ಲಿ 10 ಮಿ.ಲೀ. ಜೇನು ಕಲಿಸಿ ಸೇವಿಸಬೇಕು.

**ಮೂತ್ರಕೋಶದಲ್ಲಿಯ ಕಲ್ಲು ಕರಗಲು**

ದಿನವೂ ಬೆಳಗ್ಗೆ, ಸಂಜೆ, ಬಾರಿಯೊಂದಕ್ಕೆ 200 ಮಿ.ಲೀ. ನೀರಿನಲ್ಲಿ ಒಂದು ಗ್ರಾಂ ಸೈಂಧವ ಲವಣದ ಪುಡಿ 5-10 ಮಿ.ಲೀ. ನಿಂಬೆರಸ ಕಲಿಸಿ ಸೇವಿಸುತ್ತಿದ್ದರೆ ಮೂತ್ರ ವ್ಯವಸ್ಥೆಯಲ್ಲಿರುವ ಕಲ್ಲುಗಳು ಕರಗಿ ಹೋಗುತ್ತದೆ.

**ವಸುಡು ನೋವು, ಹಲ್ಲು ನೋವಿಗೆ**

ಬೇಕಾಗುವಷ್ಟು ಲವಂಗ ಪುಡಿಯಲ್ಲಿ ತಕ್ಕಷ್ಟು ನಿಂಬೆ ರಸ ಕಲಿಸಿ ಹಚ್ಚಿದರೆ ತಕ್ಷಣವೇ ನೋವು ಕಡಿಮೆಯಾಗು ತ್ತದೆ.

**ಮೊಡವೆಗಳು ಕಡಿಮೆಯಾಗಲು**

ನಿಂಬೆರಸ, ಮೊಸರು, ಜೇನು, ಎಲ್ಲವನ್ನು ಸಮಾನ ವಾಗಿ ಕಲಿಸಿ ಮುಖಕ್ಕೆ ಹಚ್ಚಿ ತಾಸು ಬಿಟ್ಟು ಉಗುರುಬೆಚ್ಚಗಿನ ನೀರಿನಲ್ಲಿ ಮುಖ ತೊಳೆಯುತ್ತಿದ್ದರೆ ಇಲ್ಲವೇ ನಿಂಬೆ ಸಿಪ್ಪೆ ಯನ್ನು ಒಣಗಿಸಿ ಮಾಡಿದ ಪುಡಿಯನ್ನು ತಕ್ಕಷ್ಟು ಕಾಯಿಸಿದ ಹಾಲನ್ನು ಹಾಕಿ ಕಲಿಸಿ ಪೇಸ್ಟಿನಂತೆ ಮಾಡಿ ಮುಖದ ಮೇಲೆ ಲೇಪಿಸಿ ಒಂದು ತಾಸು ಕಳೆದು ಉಗುರು ಬೆಚ್ಚಗಿನ ನೀರಿನಲ್ಲಿ ಮುಖ ತೊಳೆಯುತ್ತಿದ್ದರೆ ಮೊಡವೆಗಳು ತಗ್ಗಿ ಮುಖ ಕಾಂತಿ ಯುತವಾಗಿ ಸೌಂದರ್ಯಯುತವಾಗಿ ತಯಾರಾಗುತ್ತದೆ.

**ಕಜ್ಜಿ, ನವೆಯಂಥ ಚರ್ಮವ್ಯಾಧಿಗಳಿಗೆ**

ಒಣಗಿದ ನಿಂಬೆ ಸಿಪ್ಪೆಯನ್ನು ಸುಟ್ಟು ಬೂದಿ ಮಾಡಿ ಬಿಸಿಯಾರಿದ ನಂತರ ಜರಡಿ ಹಿಡಿದು ಶೇಖರಿಸಿಟ್ಟು ಕೊಂಡು ದಿನವೂ ಒಂದು ಬಾರಿ ತಕ್ಕಷ್ಟು ಪುಡಿಯನ್ನು ತಕ್ಕಷ್ಟು ಕೊಬ್ಬರಿ ಎಣ್ಣೆಯಲ್ಲಿ ಕಲಿಸಿ ಲೇಪನ ಮಾಡಿದರೆ ಶೀಘ್ರದಲ್ಲೇ ಸಮಸ್ಯೆಗಳು ತಗ್ಗುತ್ತವೆ.



**ಚೇಳು ಕಡಿತಕ್ಕೆ**

ಬೇಕಾದಷ್ಟು ನಿಂಬೆ ರಸದಲ್ಲಿ ತಕ್ಕಷ್ಟು ಉಪ್ಪು ಸೇರಿಸಿ ಪೇಸ್ಟಿ ನಂತೆ ಕಲಿಸಿ ಲೇಪನ ಮಾಡುತ್ತಿದ್ದರೆ ಕೂಡಲೇ ಚೇಳು ಕಡಿತ ದಿಂದ ಉಂಟಾಗುವ ನೋವು, ಬಾಧೆ, ಪೋಟು, ಸೆಳೆತ, ಉರಿ ತಗ್ಗಿ ಹೋಗುತ್ತದೆ.

**ಬಾಯ ದುರ್ವಾಸನೆಗೆ**

10 ಮಿ.ಲೀ. ನಿಂಬೆರಸವನ್ನು 50 ಮಿ.ಲೀ. ಪನ್ನೀರಿನಲ್ಲಿ (ರೋಜ್ ವಾಟರ್) ಕಲಿಸಿ ದಿನವೂ 1,2 ಬಾರಿ ಸ್ವಲ್ಪ ಹೊತ್ತು ಮುಕ್ಕಳಿಸಿ ಉಗುಳುತ್ತಿದ್ದರೆ ಒಳ್ಳೆಯ ಫಲಿತಾಂಶ ದೊರಕುತ್ತದೆ.

**ಕಿವಿ ನೋವಿಗೆ**

ಬೀಜಗಳನ್ನು ತೆಗೆದ ಅರ್ಧ ಹೆಚ್ಚಿದ ನಿಂಬೆಹಣ್ಣಿನ ಮೇಲೆ ಸ್ವಲ್ಪ ಉಪ್ಪ ಅದ್ದಿ ಬಿಸಿ ಮಾಡಿ 2-3 ಹನಿ ರಸವನ್ನು ಕಿವಿಯಲ್ಲಿ ಹಿಂಡಿದರೆ ತಕ್ಷಣವೇ ಕಿವಿನೋವಿನಿಂದ ಉಪಶಮನ ದೊರಕು ತ್ತದೆ.



**ಹುಲ್ಲುಗಳ ಹೊಳಪಿಗೆ**

ನಿಂಬೆ ಸಿಪ್ಪೆಯನ್ನು ಒಣಗಿಸಿ ಮಾಡಿದ ಪುಡಿ, ಉಪ್ಪ, ಸಮಾನವಾಗಿ ಕಲಿಸಿಟ್ಟುಕೊಂಡು ದಂತಧಾವನ ಚೂರ್ಣ ವಾಗಿಟ್ಟುಕೊಂಡು ಉಪಯೋಗಿಸುತ್ತಿದ್ದರೆ ಹಲ್ಲುಗಳ ಮೇಲಿನ ಕೊಳೆ ತೊಲಗಿ ಹಲ್ಲುಗಳು ಆಕರ್ಷಣೀಯವಾಗಿ ತಯಾರಾಗು ತ್ತವೆ.

# ಶ್ರೀ ರಾಮನಿಗೆ ನಮನ

- ಬಿ. ಆರ್. ಶ್ರೀಕಂಠಯ್ಯ
9449457684



ಶ್ರೀ ರಾಘವಂ ದಶರಥಾತ್ಮಜಮಪ್ರಮೇಯಂ।
ಸೀತಾಪತಿಂ ರಘುಕುಲಾನ್ವಯ ರತ್ನದೀಪಂ॥
ಆಜಾನುಬಾಹುಮರವಿಂದ ದಳಾಯತಾಕ್ಷಂ।
ರಾಮಂ ನಿಶಾಚರವಿನಾಶಕರಂ ನಮಾಮಿ॥

ದಶರಥ ಕೋಸಲ ದೇಶದ ಚಕ್ರವರ್ತಿ. ಕೋಸಲದ ರಾಜಧಾನಿ ಅಯೋಧ್ಯೆ. ದಶರಥನದು ಇಕ್ಷ್ವಾಕುವಂಶ. ಅಯೋಧ್ಯೆಯಲ್ಲಿ ದಶರಥನ ರಾಜ್ಯ ಭಾರದಲ್ಲಿ ಎಲ್ಲರೂ ಸಂತೋಷದಿಂದ ಸುಖವಾಗಿರುತ್ತಿದ್ದರು. ಎಲ್ಲಾ ಇದ್ದರು, ದಶರಥನಿಗೆ ಮಕ್ಕಳಿಲ್ಲದ ಕೊರತೆ ಕಾಡುತ್ತಿತ್ತು. ದೈವ ಪ್ರೇರಣೆಯಂತೆ ದಶರಥನು ಋಷ್ಯಶೃಂಗ ಋಷಿಯ ನೇತೃತ್ವದಲ್ಲಿ “ಪುತ್ರಕಾಮೇಷ್ಟಿ” ಎಂಬ ಯಾಗವನ್ನು ಮಾಡಿದನು. ಈ ಯಾಗದ ಕೊನೆಯಲ್ಲಿ, ಮಹಾಪುರುಷನು ಪಾಯಸದ ಕಳಶದೊಂದಿಗೆ ಅಗ್ನಿಕುಂಡದಿಂದ ಪ್ರತ್ಯಕ್ಷನಾಗುತ್ತಾನೆ. ರಾಜನೇ, ನಿನ್ನ ಯಜ್ಞದಿಂದ ತೃಪ್ತಿಯಾದ ದೇವತೆಗಳು ಪಾಯಸವನ್ನು ಕರುಣಿಸಿದ್ದಾರೆ. ಈ ಅಮೃತಮಯವಾದ ಪಾಯಸವನ್ನು ನಿನ್ನ ಪತ್ನಿಯರಿಗೆ ಕೊಡು ನಿನಗೆ ಸಂತಾನವಾಗುತ್ತದೆ ಎಂದು ಹೇಳಿ ಕಳಶವನ್ನು ರಾಜನಿಗೆ ಕೊಟ್ಟು ಅದೃಶ್ಯನಾಗುತ್ತಾನೆ. ದಶರಥ ಮಹಾರಾಜನು, ಸಂತೋಷದಿಂದ ಪಾಯಸವನ್ನು ತನ್ನ ರಾಣಿಯರಾದ ಕೌಸಲ್ಯೆ, ಕೈಕೇಯಿ ಮತ್ತು ಸುಮಿತ್ರೆಯರಿಗೆ ಕೊಡುತ್ತಾನೆ. ರಾಣಿಯರು ಕಾಲಕ್ರಮೇಣ ಗರ್ಭವತಿಯರಾಗಿ, ಕೌಸಲ್ಯೆಯ ಗರ್ಭದಲ್ಲಿ ವಿಷ್ಣುವಿನ ಅವತಾರವಾದ ಶ್ರೀ ರಾಮನು,“ಪುನರ್ವಸು”ನಕ್ಷತ್ರದಲ್ಲಿ, ಕೈಕೇಯಲ್ಲಿ ಭರತ “ಪುಷ್ಯ” ನಕ್ಷತ್ರದಲ್ಲಿ ಮತ್ತು ಸುಮಿತ್ರೆಯಲ್ಲಿ ಅವಳಿ ಮಕ್ಕಳಾದ ಲಕ್ಷ್ಮಣ ಮತ್ತು ಶತ್ರುಘ್ನರು “ಆಶ್ಲೇಷ” ನಕ್ಷತ್ರದಲ್ಲಿ ಜನಿಸುತ್ತಾರೆ. ಇವರೂ ಕೂಡ ವಿಷ್ಣುವಿನ ಅಂಶ. ಶ್ರೀ ವಾಲ್ಮೀಕಿ ಮಹರ್ಷಿಗಳು, ರಾಮಾಯಣದ ಪ್ರತ್ಯಕ್ಷ ದರ್ಶಿಗಳು,ತಾವು ನೋಡಿದ,ಅನುಭವಿಸಿದ ಎಲ್ಲವನ್ನೂ ವಿಸ್ತಾರವಾಗಿ ತಮ್ಮ ಈ ಆದಿಕಾವ್ಯದಲ್ಲಿ ತಿಳಿಸಿ ಕೊಟ್ಟಿದ್ದಾರೆ.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್॥

ಪರಿತ್ರಾಣಾಯ ಸಾದೂನಾಂ ವಿನಾಶಯ ಚ ದುಷ್ಕೃತಾಮ್ ।
ಧರ್ಮ ಸಂಸ್ಥಾಪನಾರ್ಥಯ ಸಂಭವಾಮಿ ಯುಗೇ ಯುಗೇ ।

ದೇವವಾಣಿಯಂತೆ, ಧರ್ಮ ನಶಿಸಿದಾಗ ಅದರ ರಕ್ಷಣೆಗಾಗಿ ಹಾಗೂ ದುಷ್ಟರ ವಿನಾಶಕ್ಕಾಗಿ, ನಾನು ಪ್ರತಿ ಯುಗದಲ್ಲಿ ಜನಿಸುತ್ತೇನೆ. ಆ ವಾಣಿಯಂತೆ, ದೇವತೆಗಳ ಪ್ರಾರ್ಥನೆಯ ಮೇರೆಗೆ, ಶ್ರೀ ರಾಮಚಂದ್ರನು ಚೈತ್ರ ಮಾಸದ ಶುಕ್ಲಪಕ್ಷದ ನವಮಿಯಲ್ಲಿ ಜನಿಸುತ್ತಾನೆ. ಶ್ರೀ ರಾಮನ ಅವತಾರ ವಿಷ್ಣುವಿನ ದಶಾವತಾರಗಳಲ್ಲಿ ಒಂದು. ಶ್ರೀ ರಾಮನದು ಕಾರಣ ಜನ್ಮ. ದುಷ್ಟ ರಾಕ್ಷಸರಾದ ರಾವಣ ಮತ್ತು ಕುಂಭಕರ್ಣರ ಸಂಹಾರಕ್ಕಾಗಿ. ಶ್ರೀ ರಾಮನು ತಾನು ಅವತಾರ ಪುರುಷ, ದೇವತಾಸ್ವರೂಪಿ ಎಂದು ತೋರಿಸಿಕೊಳ್ಳಲಿಲ್ಲ.ತಾನು ಮಾನವನಾಗಿ ಎಲ್ಲ ಕಾರ್ಯಗಳನ್ನು ಮಾಡಿ ಮೂವತ್ತುಸಾವಿರ ವರ್ಷಗಳ ಕಾಲ ಪ್ರಜಾನುರಾಗಿ, ರಾಜ್ಯವನ್ನು ಪರಿಪಾಲನೆ ಮಾಡಿದ ಮಹಾಪುರುಷ. ಈ ರಾಮನ ಜನ್ಮ ದಿನವನ್ನು ಇಂದಿಗೂ ನಾವೆಲ್ಲರು “ಶ್ರೀ ರಾಮನವಮಿ’, ಎಂದು ಆಚರಿಸುತ್ತೇವೆ.

ಶ್ರೀ ರಾಮನ ಕಥೆಯಾದ ರಾಮಾಯಣವು, ಭೃಗುವಂಶಕ್ಕೆ ಸೇರಿದ ಅಗ್ನಿಶರ್ಮನೆಂದು ಹೆಸರಿಸಲ್ಪಟ್ಟು ‘ವಾಲ್ಮೀಕಿ’ ಯಾದ ಆದಿಕವಿ, ಬ್ರಹ್ಮ ವರಪ್ರಸಾದಿಂದ ರಚಿತವಾದ ‘ಆದಿಕಾವ್ಯ”. ಬ್ರಹ್ಮನು ೧೦೦ ಕೋಟಿ ಶ್ಲೋಕಗಳ ರಾಮಾಯಣವನ್ನು ರಚಿಸಿ ಅದನ್ನು ನಾರಾದಾದಿ ಮಹರ್ಷಿಗಳಿಗೆ ಉಪದೇಶಿಸಿದರು, ನಾರದರು ಸಂಕ್ಷೇಪ ವಾಗಿ ವಾಲ್ಮೀಕಿಗೆ ಹೇಳಿದರು. ದೈವ ಸಂಕಲ್ಪದಂತೆ “ವಾಲ್ಮೀಕಿ” ಶಿಷ್ಯರ ಸಮೇತ ತಮಸಾ ನದಿಯ ಹತ್ತಿರ ತಮ್ಮ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು ನದಿಯ ದಂಡೆಯಲ್ಲಿ ಕುಳಿತು ಪ್ರಕೃತಿಯ ಸೊಬಗನ್ನು ನೋಡುತ್ತಾ,ಸವಿಯುತ್ತಾ ಇರುವ ಸಂದರ್ಭದಲ್ಲಿ,

ಸಂತೋಷದಲ್ಲಿರುವ "ಕ್ರೌಂಚ"ಪಕ್ಷಿಗಳ ಜೋಡಿಯನ್ನು ನೋಡಿದನು. ನೋಡುತ್ತಿರುವಂತೆಯೇ, "ನಿಷಾದ" ನೊಬ್ಬನು, ಆ ಜೋಡಿಯಲ್ಲಿ ಗಂಡು ಪಕ್ಷಿಗೆ ಬಾಣದಿಂದ ಹೊಡೆಯಲಾಗಿ, ಗಂಡು ಪಕ್ಷಿ ಭೂಮಿಗೆ ಬಿದ್ದು ಮರಣಾವಸ್ಥೆಯಲ್ಲಿದ್ದ ಸ್ಥಿತಿಯನ್ನು ನೋಡಿ ಹೆಣ್ಣು ಪಕ್ಷಿ ರೋಧಿಸುತ್ತದೆ. ಈ ದೃಶ್ಯ ವಾಲ್ಮೀಕಿಗಳ ಮೇಲೆ ಮಹತ್ತರವಾದ ಪರಿಣಾಮವಾಗಿ ಅಂತಃಕರಣದಿಂದ ಉಕ್ಕಿ ಹರಿಯುತ್ತಿದ್ದ ಕರುಣಾರಸದೊಡನೆ ಶ್ಲೋಕರೂಪವಾದ ವಾಣಿಯಿಂದ-

ಮಾ ನಿಷಾದ, ಪ್ರತಿಷ್ಠಾಂ, ತ್ವಮಗಮಃ ಶಾಶ್ವತೀಃ ಸಮಾಃ।
ಯತ್ ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಮ್॥

ಹೊರಹೊಮ್ಮುತ್ತದೆ. ಇದರ ಪರಿಣಾಮವಾಗಿ ರಾಮಾಯಣದ ರಚನೆಯಾಗುತ್ತದೆ. ಈ ಶ್ಲೋಕರೂಪವನ್ನೇ ಧ್ಯಾನ ಮಾಡುತ್ತಿರುವ ಸಮಯದಲ್ಲಿ ಬ್ರಹ್ಮನ ಆಗಮನ ಮತ್ತು ಬ್ರಹ್ಮನಿಂದ "ವಾಲ್ಮೀಕಿ" ಗೆ ನೀನು ಯಾವ ರೀತಿ ನಾರದರಿಂದ ಕೇಳಿ ದೆಯೋ ಅದೇ ರೀತಿ ನಿನಗೆ ರಹಸ್ಯಗಳು ಎಲ್ಲವೂ ಗೋಚರವಾಗುತ್ತದೆ. ಅದರಂತೆ ಶ್ರೀ ರಾಮನ ಚರಿತೆಯನ್ನು ರಚಿಸು ಎಂಬುದಾಗಿ ಹೇಳುತ್ತಾರೆ. ನೀನು ರಚಿಸಿದ "ರಾಮ ಕಥಾ" ಎಂದಿನವರೆಗೆ, ಈ ಭೂಮಿಯಲ್ಲಿ ಪರ್ವತ, ಗಿರಿ, ದುರ್ಗಗಳು ಇತ್ಯಾದಿ, ಇರುವುದೋ ಅಲ್ಲಿಯವರೆಗೆ ಪ್ರಚಾರದಲ್ಲಿರುವುದು ಮತ್ತು ಈ ಕಾವ್ಯದಲ್ಲಿ ಅಸತ್ಯವು ಸ್ವಲ್ಪವೂ ಇರಲು ಸಾಧ್ಯವಿಲ್ಲ. ಆ ಆದೇಶದಂತೆ ೨೪ ಸಾವಿರ ಶ್ಲೋಕಗಳ ರಾಮಾಯಣವನ್ನು ರಚಿಸುತ್ತಾರೆ. "ವಾಲ್ಮೀಕಿ" ಯೆಂಬ ಕವಿ ಕೋಗಿಲೆ ಹಾಡಿದ ಮಹಾಕಾವ್ಯವಿದು. "ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಮ್। ಆರುಹ್ಯ ಕವಿತಾ ಶಾಕಾಂ ವಂದೇ ವಾಲ್ಮೀಕಿ ಕೋಕಿಲಮ್॥

ಈ ಮಹಾಕಾವ್ಯದಲ್ಲಿ, ಉತ್ತರಕಾಂಡ ಸಹಿತ ಏಳು ಕಾಂಡಗಳಿವೆ. ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯ ಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ, ಯುದ್ಧ ಕಾಂಡ ಮತ್ತು ಉತ್ತರಕಾಂಡ. ಇದೇ ಜಗತ್ಪ್ರಸಿದ್ಧಿಯಾದ "ವಾಲ್ಮಿಕೀ ರಾಮಾಯಣ". ಇದರ ಆಧಾರದಮೇಲೆ ಅನೇಕ ರಾಮಾಯಣಗಳು ವಿವಿಧ ಭಾಷೆಗಳಲ್ಲಿ ರಚಿತವಾಗಿದೆ. ಆಯಾಯ ಕಾಂಡಗಳ ಹೆಸರಿಗೆ ತಕ್ಕಂತೆ, ಅದರಲ್ಲಿ ಶ್ರೀ ರಾಮನ ಚರಿತ್ರೆ ಅಡಕವಾಗಿದೆ. ವಿಶ್ವಾಮಿತ್ರ ಯಜ್ಞದ ರಕ್ಷಣೆ, ಪಿತೃವಾಕ್ಯ ಪರಿಪಾಲನೆ, ಲಕ್ಷ್ಮಣನ ಭ್ರಾತೃ ಪ್ರೇಮ, ಶೌರ್ಯ , ತಾಳ್ಮೆ, ಇನ್ನು ಅನೇಕ ರೀತಿಯ ಗುಣಗಳನ್ನು ನಾವು ಕಾಣಬಹುದು. ಈ ಕಾವ್ಯದಲ್ಲಿ ಚಿರಂಜೀವಿಯಾದ "ಹನುಮಂತ"ನ ಪಾತ್ರ ಬಹಳ ಪ್ರಮುಖವಾದದ್ದು. ಶ್ರೀರಾಮನ ಪರಮ ಭಕ್ತನಾದ ಹನುಮಂತನು (ಆಂಜನೇಯ) ಎಲ್ಲೆಲ್ಲಿ ಶ್ರೀ ರಾಮನ ಕಥೆ ನಡೆಯುತ್ತಿರುತ್ತದೆಯೋ, ಅಲ್ಲಿ ಅವ್ಯಕ್ತರೂಪದಲ್ಲಿ ಬರುತ್ತಾನೆ ಎಂದು ಅನೇಕರು ತಮ್ಮ ಅನುಭವ ಮತ್ತು ಅನಿಸಿಕೆಯನ್ನು ಹಂಚಿಕೊಂಡಿದ್ದಾರೆ. ಅದರಿಂದ, ಆ ಜಾಗದಲ್ಲಿ , ಆಂಜನೇಯನಿಗೆ ಒಂದು ಆಸನವನ್ನು ಹಾಕಿರುತ್ತಾರೆ. ಇದು ಎಲ್ಲರಿಗೂ ತಿಳಿದ ವಿಷಯ.



ಶ್ರೀ ರಾಮ ರಾವಣರ ಯುದ್ಧಕಾಲದಲ್ಲಿ , ವಿಜಯಪ್ರಾಪ್ತಿಗಾಗಿ, ಅಗಸ್ತ್ಯರು, ರಾಮನಿಗೆ ಮೂವತ್ತೊಂದು ಶ್ಲೋಕಗಳಿಂದ ಕೂಡಿದ "ಆದಿತ್ಯ ಹೃದಯ"ವನ್ನು ಉಪದೇಶಿಸುತ್ತಾರೆ. ರಾಮನು ಭಕ್ತಿ ಶ್ರದ್ಧೆಗಳಿಂದ ಇದನ್ನು ಜಪಿಸಿ ಯುದ್ಧದಲ್ಲಿ ವಿಜಯಿಯಾಗುತ್ತಾನೆ. ಈ ಆದಿತ್ಯಹೃದಯ ಸ್ತೋತ್ರವನ್ನು ಎಲ್ಲರೂ ಪಾರಾಯಣ ಮಾಡಬಹುದು. ಇದು ಬಹಳ ಪವಿತ್ರ ಮತ್ತು ಬಹಳ ಫಲಕಾರಿಯಾದುದು.

ಯುಗಗಳು ಕಳೆದರೂ ಈ ಆದಿಕಾವ್ಯ ಎಲ್ಲರಿಗೂ ಒಂದು ಆದರ್ಶ ಗ್ರಂಥ. ಇದು ರಾಮಾಯಣದ ಹಾದಿಯನ್ನು ಪ್ರತ್ಯಕ್ಷವಾಗಿ ನೋಡಿದ "ವಾಲ್ಮೀಕಿ"ಯ ವಾಣಿ. ಪ್ರಸ್ತುತ ಈ ಕಲಿಯುಗದಲ್ಲಿ ಇಂದಿನ ಪರಿಸ್ಥಿತಿಗೆ ಈ ಮಹಾ ಕಾವ್ಯ ಬಹಳ ಮಹತ್ತರವಾದ ಪರಿಣಾಮವನ್ನು ಬೀರುತ್ತದೆ. ಇದರಲ್ಲಿ ಕೆಲವು



ಮುಖ್ಯ ಪಾತ್ರಗಳು ಬಹಳ ಪರಿಣಾಮಕಾರಿಯಾಗಿ ಎಲ್ಲರ ಜೀವನ ಶೈಲಿಯನ್ನು ಬದಲಿಸಿ ಎಲ್ಲರೂ ನೆಮ್ಮದಿ ಮತ್ತು ಶಾಂತಿಯ ಬದುಕನ್ನು ಕಾಣಲು ಸಹಕಾರಿಯಾಗುತ್ತದೆ. ನವಗ್ರಹ ದಶಾಭುಕ್ತಿ ದೋಷ ಪರಿಹಾರಕ್ಕೆ, ಸಕಲ ವಿಧವಾದ ಮನೋಭಿಲಾಷೆಗಳ ಸಿದ್ಧಿ, ವಿವಾಹ ಸಿದ್ಧಿ, ಮಾನಸಿಕವಾದ ಖಾಯಿಲೆಗಳ ನಿವಾರಣೆ, ದಾರಿದ್ರ್ಯದ ನಿವಾರಣೆ, ಬೇರ್ಪಟ್ಟಿರುವ ಬಂಧುಗಳ ಪುನರ್ಮಿಲನಕ್ಕೆ, ಪುತ್ರ ಪ್ರಾಪ್ತಿಗೆ, ಸುಖ ಪ್ರಸವಕ್ಕೆ, ಇನ್ನೂ ಅನೇಕ ವಿಧವಾದ ಕಾಮನೆಗಳು "ರಾಮಾಯಣ"ಪಾರಾಯಣದಿಂದ ಸಿದ್ಧಿಸುತ್ತದೆ ಎಂಬುದನ್ನು ರಾಮಾಯಣ ಗ್ರಂಥವು ತಿಳಿಸುತ್ತದೆ.

ಇಲ್ಲಿ ರಾಮಾಯಣದ ಕೆಲವು ಪಾತ್ರಗಳನ್ನು ಮಾತ್ರ ಅವಲೋಕಿಸಿದರೆ ನಮಗೆ ಇದರ ಬಗ್ಗೆ ಹೆಚ್ಚು ಗೌರವ ಮತ್ತು ಭಕ್ತಿ ಹುಟ್ಟುತ್ತದೆ. ಶ್ರೀ ರಾಮನ ಆದರ್ಶದ ಜೀವನ, ತಾಳ್ಮೆ ನಮಗೆ ಆದರ್ಶವಾದುದು. ತಾನು ಎಲ್ಲೂ ಅವತಾರ ಪುರುಷ ಎಂದು ತೋರಿಸಿಕೊಳ್ಳಲ್ಲಿಲ್ಲ.ಸಾಮಾನ್ಯ ಮನುಷ್ಯನಂತೆ ನಡೆದು ಆದರ್ಶ ರಾಜನಾಗಿ,ಸೀತಾಪತಿಯಾಗಿ, ಕೌಸ ಲ್ಯೆಯ ಮಗನಾಗಿ, ತನ್ನ ತಮ್ಮಂದಿರಿಗೆ ಅಣ್ಣನಾಗಿ, ತಂದೆಗೆ ವಿಧೇಯನಾದ ಮಗನಾಗಿ, ಗುರುಗಳ ಆದರ್ಶ ಶಿಷ್ಯನಾಗಿ, ಪ್ರಜೆಗಳ ಗೌರವಕ್ಕೆ ಪಾತ್ರನಾಗಿ ಎಲ್ಲರಿಗೂ ಸರಿಸಮಾನವಾದ ನ್ಯಾಯವನ್ನು ದೊರಕಿಸಿಕೊಟ್ಟಂತಹ ಮಹಾಪುರುಷ. ರಾಮನ ರಾಜ್ಯದಲ್ಲಿ ಒಂದು ನಾಯಿ ಮತ್ತು ಪಕ್ಷಿ ಕೂಡ ತನ್ನ ದೂರನ್ನು ರಾಜನ ಹತ್ತಿರತಂದು ನ್ಯಾಯವನ್ನು ಪಡೆದು ಕೊಂಡ ವಿಷಯ ಎಲ್ಲರಿಗೂ ತಿಳಿದಿದೆ.

ಕ್ಷಮಾಗುಣದ ಪ್ರತೀಕ ಶ್ರೀ ರಾಮ. ರಾವಣ ಬಂದು ಸೀತೆಯನ್ನು ಒಪ್ಪಿಸಿದರೆ, ನಾನು ಅವನನ್ನು ಕ್ಷಮಿಸುತ್ತೇನೆ ಎಂದು ಹೇಳಿದ ಮಹಾಪುರುಷ. ಅಹಂಕಾರ ಮದದಿಂದ ಕೂಡಿದ ರಾವಣ ಇದಕ್ಕೆ ಒಪ್ಪಲಿಲ್ಲ. ಮೊದಲೇ ಸಾಧ್ವಿಯಾದ ವಿಭೀಷಣನು ಅಣ್ಣನನ್ನು ತೊರೆದಿದ್ದನು. ತಮ್ಮಂದಿರನ್ನು, ಮಕ್ಕಳನ್ನು ಮಿತ್ರರನ್ನು ಮತ್ತು ಎಲ್ಲರನ್ನೂ ಕಳೆದುಕೊಂಡ ಮೇಲೆ, ಯಾರ ಮಾತನ್ನು ಕೇಳದೆ, ರಣರಂಗಕ್ಕೆ ಬಂದು ರಾಮನೊಡನೆ ಯುದ್ಧ ಮಾಡುತ್ತಾನೆ. ರಾಮನು ರಾವಣನನ್ನು ಘೋರಯುದ್ಧ ಮಾಡಿ ಸೋಲಿಸಿದನು. ತನ್ನ ರಥ ಮತ್ತು ಎಲ್ಲವನ್ನು ಕಳೆದುಕೊಂಡು, ಗಾಯಗೊಂಡು ನಿಂತಿದ್ದ ರಾವಣನನ್ನು ನೋಡಿ ಶ್ರೀ ರಾಮನು ಹೇಳುತ್ತಾನೆ. " ನೀನು ದಣಿದ್ದಿದೀಯ, ಹೋಗಿ ವಿಶಾಂತಿಪಡೆದು ಹೊಸ ರಥ ಮತ್ತು ಆಯುಧಗಳೊಂದಿಗೆ ಬಾ". ಇಂತಹ ಗುಣವನ್ನು ನಾವು ಬೇರೆ ಯಾರಲ್ಲು ಕಾಣಲು ಸಾಧ್ಯವಿಲ್ಲ.

ರಾಮನುಂ ಭರತನುಂ ತಬ್ಬಿಕೊಂಡತ್ತಂದು ।  
ಪ್ರೇಮಾಶ್ರುವುಕ್ಕಿ ನದಿಯಾಗಿ ಪರಿದಂದು ॥  
ಸೀಮೆಯಂ ಮುಟ್ಟಿತಲ ಬಾಂಧಸೌಂದರ್ಯ ।  
ಕ್ಷೇಮವದು ಜೀವಕ್ಕೆ - ಮಂಕುತಿಮ್ಮ. (೪೬೧)

ಇದರಲ್ಲಿ ರಾಮನೂ ಭರತನೂ ಅರಣ್ಯದಲ್ಲಿ ಸಂಧಿಸಿ ತಬ್ಬಿಕೊಂಡು ಅತ್ತು ಒಬ್ಬರಿಗೊಬ್ಬರು ರಾಜ್ಯವನ್ನು ಕೊಡುವ ಪೈಪೋಟಿಯನ್ನು ನಡೆಸುತ್ತಾರೆ. ಅಲ್ಲಿ ಅಣ್ಣತಮ್ಮಂದಿರ ಬಾಂಧವ್ಯ ಎಂಥಾದ್ದಾಗಿರಬೇಕು ಎಂಬ ಆದರ್ಶವನ್ನು "ಡಿವಿಜಿ" ಯವರು ನಮಗೆ ತಿಳಿಸಿಕೊಟ್ಟಿದ್ದಾರೆ. ಹಾಗೆಯೇ, ಇಂದ್ರಜಿತು ಲಕ್ಷ್ಮಣನ ಮೇಲೆ ಶಕ್ತ್ಯಾಯುಧವನ್ನು ಪ್ರಯೋಗಿಸಿದಾಗ, ಅವನು ಮೂರ್ಚಿತನಾಗಿ ಬಿದ್ದು ಬಿಟ್ಟ. ಶ್ರೀ ರಾಮನಿಗೆ ಅವನನ್ನು ನೋಡಿ ಬಹಳ ದುಃಖವಾಯಿತು, ಆಗ ಹೇಳುತ್ತಾನೆ.

ಶಕ್ಯಾಸೀತಾಸಮಾ ನಾರೀ ಮರ್ತ್ಯಲೋಕೇ ವಿಚಿಗ್ವತಾ ।  
ನ ಲಕ್ಷ್ಮಣಸಮೋ ಭ್ರಾತಾ ಸಚಿವಃ ಸಾಂಪರಾಯಿಕಃ ॥  
ದೇಶೇ ದೇಶೇ ಕಲತ್ರಾಣಿ ದೇಶೇ ದೇಶೇ ಚ ಬಾನ್ಧವಾಃ ।  
ತಂ ತು ದೇಶಂ ನ ಪಶ್ಯಾಮಿ ಯತ್ರ ಭ್ರಾತಾ ಸಹೋದರಃ ॥

ರಾಮನು ಹೇಳಿದ ಈ ಮಾತು ಎಷ್ಟು ಗಹನವಾದದ್ದು. ಹೆಂಡತಿ, ಅತ್ತೆ - ಮಾವ, ಇತ್ಯಾದಿ ಎಲ್ಲರೂ ಸಿಗುತ್ತಾರೆ, ಆದರೇ "ಒಡ ಹುಟ್ಟಿದ" ಅಣ್ಣ ತಮ್ಮಂದಿರು ಮಾತ್ರ ಯಾವ

ದೇಶದಲ್ಲಿಯೂ ದೊರಕುವುದಿಲ್ಲ ಎಂದು ಪ್ರಲಾಪಿಸುತ್ತಾನೆ. ಈ ರಾಮನ ವಾಣಿ ಎಲ್ಲರಿಗೂ ಅನ್ವಯಿಸುತ್ತದೆ ಎಂದು ನನ್ನ ಅನಿಸಿಕೆ.

ಶ್ರೀ ರಾಮನು ವನವಾಸಕಾಲದಲ್ಲಿ ಓಡಾಡಿದ ಅನೇಕ ಕುರುಹುಗಳು ಮತ್ತು ಪುಣ್ಯ ಸ್ಥಳಗಳನ್ನು, ಹಂಪೆ ಕೋಲಾರದ ಹತ್ತಿರ ಇರುವ ಆವಣಿ, ಆಂಧ್ರ ಪ್ರದೇಶದ ಭದ್ರಾಚಲ, ಪರ್ಣಕುಟಿ, ಮಹಾರಾಷ್ಟ್ರದ ನಾಸಿಕಿ ಮತ್ತು ಇನ್ನೂ ಅನೇಕ ಕಡೆ ನೋಡಬಹುದು. ಶ್ರೀ ರಾಮನ ದೇವಾಲಯಗಳನ್ನು ಸಣ್ಣ ಹಳ್ಳಿಯಿಂದ ದೊಡ್ಡ ನಗರಗಳಲ್ಲಿ ನಾವು ಕಾಣಬಹುದು. ಇಲ್ಲಿ ಮಾಡುವ ರಾಮೋತ್ಸವ ಮತ್ತು ಸಂಗೀತ ಕಾರ್ಯಕ್ರಮಗಳು ಬಹಳ ಪ್ರಸಿದ್ಧಿಯಾಗಿದೆ.

ರಾಮರಾಜ್ಯವೆಂದರೆ ಅದು ಸುಖ - ಶಾಂತಿಮಯ ವಾಗಿತ್ತು. ಎಲ್ಲರೂ ಸ್ನೇಹದಿಂದ ಇರುತ್ತಿದ್ದರು. ಕಳ್ಳಕಾಕರ ಭಯವಿರಲಿಲ್ಲ, ಸುಳ್ಳು, ಕಪಟ, ವಂಚನೆಗಳಿಲ್ಲದೆ ಎಲ್ಲರೂ ಧರ್ಮಪರಾಯಣರಾಗಿದ್ದರು. ಅಂತಹ ರಾಮರಾಜ್ಯವನ್ನು ನಾವು ನೋಡಲು ಸಾಧ್ಯವೇ? ಶಬರಿ ರಾಮನಿಗೆ ಕಾದಂತೆ, ಕಾದು ನೋಡಬೇಕು.

ಆದಿಕಾವ್ಯವಾದ ರಾಮಾಯಣವನ್ನು ಎಲ್ಲರೂ ಓದಬೇಕು, ನಮ್ಮ ಮಕ್ಕಳಿಗೆ, ಯುವ ಪೀಳಿಗೆಗೆ, ಗ್ರಂಥ ಓದಲು ಪ್ರೇರೇಪಿಸಬೇಕು. ಎಲ್ಲರಿಗೂ ತಿಳಿದ ಹಾಗೆ, ಹಿಂದೆ ಮತ್ತು ಮಂದಿರಗಳಲ್ಲಿ ಸಂಜೆ ಸಾಮೂಹಿಕವಾಗಿ ಹೇಳುತ್ತಿದ್ದ ಏಳೂ ಕಾಂಡಗಳನ್ನೊಳಗೊಂಡ ಸ್ತೋತ್ರರೂಪದಲ್ಲಿರುವ "ಶ್ರೀ ರಾಮಕಥಾ" ವನ್ನು ಎಲ್ಲರೂ ಹೇಳಬಹುದು.

ಶುದ್ಧ ಬ್ರಹ್ಮಪರಾತ್ಪರ ರಾಮ ।ಕಾಲಾತ್ಮಕಪರಮೇಶ್ವರ ರಾಮ...
ಶ್ರೀಮದಯೋಧ್ಯಾ ನಂದಕ ರಾಮ ॥ ( ಬಾಲಕಾಂಡ); ॥
ಅಗಣಿತಗಣಭೂಷಿತ ರಾಮ । ಅವನೀಕಾಮಿನಿಕಾಮಿತ ರಾಮ... ।
ಭರತಾರ್ಪಿತನಿಜಪಾದುಕ ರಾಮ॥ (ಅಯೋಧ್ಯಾ ಕಾಂಡ); ॥

ದಂಡಕಾವನಜನಪಾವನ ರಾಮ ದುಷ್ಟವಿರಾಧವಿ ನಾಶನ ರಾಮ । ...
ಕಬಂಧಬಾಹುಚ್ಛೇದಕ ರಾಮ ॥ (ಅರಣ್ಯ ಕಾಂಡ); ॥
ಹನುಮತ್ಸೇವಿತನಿಜಪದರಾಮ ।ನತಸುಗ್ರೀವಾಭೀಷ್ಟದ ರಾಮ ।
ಹಿತಕರಲಕ್ಷ್ಮಣ ಸಂಯುತ ರಾಮ ॥ (ಕಿಷ್ಕಿಂಧಾ ಕಾಂಡ); ॥

ಕಪಿವರಸಂತತಸಂಸ್ತುತ ರಾಮ । ತದ್ಗತಿವಿಘ್ನಧ್ವಂಸಕ ರಾಮ ।..
ಕಪಿವರವಚನಾಶ್ವಾಸಿತ ರಾಮ ॥ (ಸುಂದರ ಕಾಂಡ); ॥
ರಾವಣಧನಪ್ರಸ್ಥಿತ ರಮ । ವಾನರಸೈನ್ಯ ಸಮಾವೃತ ರಾಮ । ..
ಸಮಸ್ತಲೋಕೋದ್ಧಾರಕ ರಾಮ ॥ (ಯುದ್ಧ ಕಾಂಡ); ॥

ಆಗತಮುನಿಗಣ ಸಂಸ್ತುತ ರಾಮ ವಿಶ್ರುತದಶಕಂಠೋದ್ಭವ ರಾಮ ।
ರಘುಪತಿ ರಾಘವ ರಾಜರಾಮ।ಪತಿತಪಾವನ ಸೀತಾರಾಮ॥(ಉತ್ತರಕಾಂಡ) ॥



ಹಾಗೂ ಶಾಲೆಗಳಲ್ಲಿ ಇದನ್ನು ಪ್ರತಿ ಶನಿವಾರವಾದರೂ ಹೇಳಿಸಿ ಅದರ ಸಾಮಾನ್ಯ ಅರ್ಥವನ್ನುಗ್ರಹಿಸಿದರೆ, ಅವರಲ್ಲಿ ಸ್ಥೈರ್ಯ ತಾಳ್ಮೆ, ಆತ್ಮ ವಿಶ್ವಾಸಗಳನ್ನು ಗಳಿಸಬಹುದು, ಹಾಗೂ ಈಗ ನಡೆಯುತ್ತಿರುವ ಅನೇಕ ದುರಂತಗಳನ್ನು ತಪ್ಪಿಸಬಹುದು ಎಂದು ತನ್ನ ಭಾವನೆ.

ಶ್ರೀ ರಾಮಚಂದ್ರನು, ಎಲ್ಲೂ ತಾನು "ದೇವರು" ಎಂದು ತೋರಿಸದೆ, ಮಾನವರೂಪಿನಲ್ಲಿದ್ದ ಶ್ರೀ ರಾಮನು, ತನ್ನ ಅವತಾರದ ಕಾರ್ಯವನ್ನು ಪೂರ್ಣಗೊಳಿಸಿ, ತನ್ನ ಮೂಲರೂಪವಾದ "ನಾರಾಯಣ" ನ ಅವತಾರದಲ್ಲಿ, ಲಕ್ಷ್ಮಣನು "ಆದಿಶೇಶ" ನ ರೂಪದಲ್ಲಿ, ಭರತ ಶತೃಘ್ನರು ರಾಮನಲ್ಲಿ "ಶಂಖ,ಚಕ್ರ"ಗಳಾಗಿ ವೈಕುಂಠವನ್ನು ಸೇರುತ್ತಾರೆ.

ಮಂಗಳ ಸ್ವರೂಪನಾದ, ಭಕ್ತರ ಆಪತ್ತುಗಳನ್ನು ಪರಿಹರಿಸತಕ್ಕವನೂ, ಸಕಲ ಸಂಪತ್ತುಗಳನ್ನು ಕೊಡತಕ್ಕವನೂ, ಸರ್ವಲೋಕ ಮನೋಹರನೂ ಆಗಿರುವ ಶ್ರೀ ರಾಮನಿಗೆ ಪುನಃ ಪುನಃ ನಮಸ್ಕಾರಗಳನ್ನು ಸಲ್ಲಿಸಿ ಶ್ರೀರಾಮನ ಜನ್ಮದಿನವನ್ನು ಆಚರಿಸಿ ಅಂದು ಸಂತೋಷದಿಂದ "ಪಾನಕ", "ಮಜ್ಜಿಗೆ,""ಕೋಸಂಬರಿ" ಸೇವಿಸಿ, ನಾವೆಲ್ಲರೂ ಅವನ ಆಶೀರ್ವಾದವನ್ನು ಪಡೆದು ಧನ್ಯರಾಗೋಣ.

ಆಪದಾಮಪಹ ಹರ್ತಾರಂ ದಾತಾರಂ ಸರ್ವಸಂಪದಾಮ್।
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್॥

**ಪಾರುವೇಟ ಉತ್ಸವ (ಬೇಟೆ ಉತ್ಸವ)**

ಪ್ರತಿ ವರ್ಷ ಸಂಕ್ರಾಂತಿ ಹಬ್ಬದ ಮರುದಿನ ಕಣಿಹಬ್ಬ ದಂದು ಸ್ವಾಮಿಯವರಿಗೆ ಈ ಉತ್ಸವ ನಡೆಯುತ್ತದೆ. ಶ್ರೀ ಮಲೆಯಪ್ಪಸ್ವಾಮಿಯವರು ಶಂಖ, ಚಕ್ರ, ಗದೆ, ಖಡ್ಗ, ಧನಸ್ಸು, ಈ ಪಂಚಾಯುಧಗಳನ್ನು ಧರಿಸಿ ಬೇಟೆಗೆ ಹೊರಟು ಬೇಟೆಯ ಮಂಟಪವನ್ನು ಸೇರುತ್ತಾರೆ.ಆ ಸ್ವಾಮಿಯ ಹಿಂದೆ ಮತ್ತೊಂದು ಪಲ್ಲಕಿಯಲ್ಲಿ ಶ್ರೀ ಕೃಷ್ಣ ಸ್ವಾಮಿಯು ಬರುತ್ತಾರೆ.

ಅಲ್ಲಿ ಶ್ರೀ ಸ್ವಾಮಿಯವರು ತಾಳ್ಳಪಾಕದವರು, ಸನ್ನಿಧಿ ಗೊಲ್ಲರ ಸೇವೆಯನ್ನು ಸ್ವೀಕರಿಸುತ್ತಾರೆ.

ಸಂಜೆಯವರೆಗೂ ಈ ಬೇಟೆಯಲ್ಲಿ ಪಾಲ್ಗೊಂಡ ನಂತರ ಶ್ರೀನಿವಾಸ, ಶ್ರೀ ಕೃಷ್ಣರು ಮೆರವಣಿಗೆಯಲ್ಲಿ ದೇವಾಲಯವನ್ನು ತಲುಪುತ್ತಾರೆ.

ಅಧಿಕಮಾಸ ಬಂದಾಗ ಶ್ರೀನಿವಾಸನಿಗೆ ಎರಡು ಬ್ರಹ್ಮೋತ್ಸವಗಳು ನಡೆಯುತ್ತವೆ. ಮೊದಲನೆಯದನ್ನು "ವಾರ್ಷಿಕ ಬ್ರಹ್ಮೋತ್ಸವವೆಂದೂ" ಎರಡನೆಯದನ್ನು "ನವ ರಾತ್ರಿ ಬ್ರಹ್ಮೋತ್ಸವವೆಂದೂ" ಕರೆಯುತ್ತಾರೆ. ಈ ರೀತಿ ಎರಡು ಬ್ರಹ್ಮೋತ್ಸವಗಳು ನಡೆದ ಸಂದರ್ಭದಲ್ಲಿ ಎರಡನೆಯ ಬ್ರಹ್ಮೋತ್ಸವ ಮುಗಿದ ಕೂಡಲೇ "ಪಾರುವೇಟ ಉತ್ಸವ" ನಡೆಸುತ್ತಾರೆ.

**ರಥಸಪ್ತಮಿ:**

ಪ್ರತೀ ವರ್ಷ ಮಾಘ ಮಾಸದಲ್ಲಿನ ಶುದ್ಧ ಸಪ್ತಮಿ "ಸೂರ್ಯಜಯಂತಿ" ಯಂದು ರಥಸಪ್ತಮಿ ಎಂಬ ಹೆಸರಿನಲ್ಲಿ ತಿರುಮಲೆಯಲ್ಲಿ ಉತ್ಸವಗಳು ನಡೆಯುತ್ತವೆ.

ಆ ದಿನ ಶ್ರೀ ವೇಂಕಟೇಶ್ವರಸ್ವಾಮಿಯು ಸೂರ್ಯೋದಯದಿಂದ ರಾತ್ರಿ ಚಂದ್ರೋದಯದವರೆಗೂ ಏಳು ವಾಹನಗಳಲ್ಲಿ ವಿಹರಿಸುತ್ತಾನೆ. ಸೂರ್ಯಪ್ರಭ, ಚಿಕ್ಕ ಶೇಷವಾಹನ, ಗರುಡವಾಹನ, ಹನುಮಂತ ವಾಹನ, ಕಲ್ಪವೃಕ್ಷ ವಾಹನ, ಸರ್ವ ಭೂಪಾಲವಾಹನ, ಚಂದ್ರ ಪ್ರಭವಾಹನ ಹೀಗೆ ಏಳು ವಾಹನಗಳಲ್ಲಿ ಶ್ರೀ ಮಲೆಯಪ್ಪ ಸ್ವಾಮಿಯವರು ದರ್ಶನವನ್ನು ನೀಡುತ್ತಾರೆ. ನಂತರ ಶ್ರೀ ಸ್ವಾಮಿ ಪುಷ್ಕರಿಣಿಯಲ್ಲಿ ಚಕ್ರಸ್ನಾನ ನಡೆಯುತ್ತದೆ. ರಥಸಪ್ತಮಿ ಯಂದು ನಡೆಯುವ ಉತ್ಸವಗಳನ್ನು "ಅರ್ಧಬ್ರಹ್ಮೋತ್ಸವ ಗಳು" ಎಂದು ಕರೆಯುತ್ತಾರೆ.

**ತೆಪ್ಪೋತ್ಸವಗಳು:**

ಪ್ರತಿವರ್ಷ ಫಾಲ್ಗುಣ ಹುಣ್ಣಿಗೆ ಪೂರ್ತಿಯಾಗುವಂತೆ ಐದು ದಿನಗಳ ಕಾಲ ತೆಪ್ಪೋತ್ಸವಗಳನ್ನು ಶ್ರೀ ಸ್ವಾಮಿ ಪುಷ್ಕರಿಣಿಯಲ್ಲಿ ನಡೆಯುತ್ತದೆ.15 ನೆಯ ಶತಮಾನದಲ್ಲಿ ನಿಂತು ಹೋಗಿದ್ದ ಈ ಉತ್ಸವಗಳನ್ನು ದೇವಸ್ಥಾನ 1921 ರಿಂದ ಪುನರುದ್ಧರಿಸಿದೆ.

ಈ ತೆಪ್ಪೋತ್ಸವಗಳಲ್ಲಿ ಮೊದಲ ದಿನ ಶ್ರೀ ಸೀತಾರಾಮ ಲಕ್ಷ್ಮಣರು, ಎರಡನೆಯ ದಿನ ರುಕ್ಮಿಣಿ ಶ್ರೀ ಕೃಷ್ಣರು, ಕೊನೆಯ ಮೂರು ದಿನಗಳು ಶ್ರೀದೇವಿ ಭೂದೇವಿ ಸಮೇತ ಶ್ರೀ ಮಲೆಯಪ್ಪ ಸ್ವಾಮಿ ಪಾಲ್ಗೊಳ್ಳುತ್ತಾರೆ.


ಮೇಲೆ ತಿಳಿಸಿದ ಉತ್ಸವಗಳೇ ಅಲ್ಲದೇ ಧನುರ್ಮಾಸದಲ್ಲಿ ತಿರುಪ್ಪಾವೈ,ವೈಕುಂಠ ಏಕಾದಶಿಯಂದು ಪ್ರಣಯ ಕಲಹೋತ್ಸವ, ಅಧ್ಯಯನೋತ್ಸವ, ನರಸಿಂಹ ಜಯಂತಿ, ಶ್ರೀ ವರಾಹ ಜಯಂತಿ, ಅನಂತಪದ್ಮನಾಭ ಚತುರ್ದಶಿ, ಚಕ್ರತೀರ್ಥ ಮುಕ್ಕೋಟಿ , ಕೈಶಿಕ ದ್ವಾದಶಿ (ಉತ್ಥಾನ ದ್ವಾದಶಿ), ಕಾರ್ತೀಕ ದೀಪೋತ್ಸವ, ಕ್ಷೇತ್ರಪಾಲಕ ಉತ್ಸವ, ಶ್ರೀವಾರಿ ಬಾಗ್ ಸವಾರಿ ಉತ್ಸವ, ಪುಲಿಶೈತೋಟಉತ್ಸವ, ತಣ್ಣೀರ್ ಮುದು ಉತ್ಸವ ದಂತಹಾ ವಾರ್ಷಿಕ ಉತ್ಸವಗಳು ತಿರುಮಲೆಯ ಕ್ಷೇತ್ರದಲ್ಲಿ ನಡೆಯುತ್ತವೆ.

ಆನಂದನಿಲಯನು ಉತ್ಸವ ಪ್ರಿಯನೂ ಹೌದು. ಅದಕ್ಕಿಂತಲೂ ಹೆಚ್ಚಾಗಿ ಭಕ್ತ ಪ್ರಿಯ! ಆ ಸ್ವಾಮಿಗೆ ಇರುವ ಭಕ್ತಿ ಪ್ರಿಯತೆ ಅಷ್ಟಿಷ್ಟಲ್ಲ. ತನ್ನನ್ನು ನೋಡಲು ಬರುವ ಭಕ್ತ ಕೈಯಲ್ಲಿ ಉತ್ಸವಗಳನ್ನು ಮಾಡಿಸಿಕೊಳ್ಳುತ್ತಾನೆ. ದರ್ಶನ ನೀಡುತ್ತಾನೆ. ಹರಕೆಗಳನ್ನು ಸಲ್ಲಿಸಿಕೊಳ್ಳುತ್ತಾನೆ.ಒಂದು ವೇಳೆ ಉತ್ಸವಗಳನ್ನು ಮಾಡಿಸದಿದ್ದರು ಪರವಾಗಿಲ್ಲವಂತೆ! ಆ ಸಪ್ತಗಿರೀಶನ ವೈಭವದ ಉತ್ಸವಗಳನ್ನು ನೋಡಿದರೆ ಸಾಕಂತೆ! ಪಾಪಗಳು ಹೇಳ ಹೆಸರಿಲ್ಲದಂತೆ ಮಾಯವಾಗುವುದು ಖಚಿತ! ಕೋರಿಕೆಗಳು ನೆರವೇರುತ್ತವೆ! ಜೀವನದಲ್ಲಿ ನೆಮ್ಮದಿ ದೊರೆಯುತ್ತದೆ. ಅಂತ್ಯವಿಲ್ಲದ ಆನಂದ ದೊರೆಯುತ್ತದೆ.




**ಓಂ ನಮೋ ವೇಂಕಟೇಶಾಯ**
**(ಮುಕ್ತಾಯ)**

ಮೂಲ: ಜೆ. ಬಾಲಸುಬ್ರಹ್ಮಣ್ಯಂ
ಅನುವಾದ : ಶ್ರೀಮತಿ ಬಿ.ಪದ್ಮಜ
9010379476



# ಪಾಠ -3 ಸಂಸ್ಕೃತ ಕಲಿಯೋಣ...!!

- ನಿರ್ವಹಣೆ - ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್

## संयुक्ताक्षराणि

| | | | | | | | | | |
|---|---|---|---|---|---|---|---|---|---|
| क | ख | ग | घ | ङ | ಕ | ಖ | ಗ | ಘ | ಙ |
| क् | ख् | ग् | घ् | ङ् | ್ಕ | ್ಖ | ್ಗ | ್ಘ | |
| च | छ | ज | झ | ञ | ಚ | ಛ | ಜ | ಝ | ಞ |
| च् | छ् | ज् | झ् | ञ् | ್ಚ | ್ಛ | ್ಜ | ್ಝ | ್ಞ |
| ट | ठ | ड | ढ | ण | ಟ | ಠ | ಡ | ಢ | ಣ |
| ट् | ठ् | ड् | ढ् | ण् | ್ಟ | ್ಠ | ್ಡ | ್ಢ | ್ಣ |
| त | थ | द | ध | न | ತ | ಥ | ದ | ಧ | ನ |
| त् | थ् | द् | ध् | न् | ್ತ | ್ಥ | ್ದ | ್ಧ | ್ನ |
| प | फ | ब | भ | म | ಪ | ಫ | ಬ | ಭ | ಮ |
| प् | फ् | ब् | भ् | म् | ್ಪ | ್ಫ | ್ಬ | ್ಭ | ್ಮ |
| य | र | ल | व | श | ष | स | ह | क्ष | ज्ञ |
| य्/य | र्/्र | ल् | व् | श् | ष् | स् | ह् | क्ष् | ज्ञ् |
| ಯ | ರ | ಲ | ವ | ಶ | ಷ | ಸ | ಹ | ಕ್ಷ | ಜ್ಞ |
| ್ಯ | ್ರ | ್ಲ | ್ವ | ್ಶ | ್ಷ | ್ಸ | ್ಹ | ್ಕ್ಷ | ಜ್ಞ |

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸ್ವಾಮಿಯ ಆರ್ಜಿತ ಸೇವೆಗಳು - ತಿರುಮಲೆ

## ಆರ್ಜಿತ ಸೇವೆಗಳು/ ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ದಿನ | ಸೇವಾ / ಪ್ರವೇಶ ಸಮಯ | ಪ್ರವೇಶ | ಟಿಕೆಟ್ಟು ಬೆಲೆ |
|---|---|---|---|---|---|
| | **ಸೇವೆಗಳು** | | | | |
| 1. | ಸುಪ್ರಭಾತ | ಪ್ರತಿದಿನ | ಬೆ. 2.00-3.00 ಗಂ॥ | 1 | ರೂ. 120.00 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 3.00-3,30 ಗಂ॥ | 1 | ರೂ. 220.00 |
| 3. | ಅರ್ಚನೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 4.00-4.30 ಗಂ॥ | 1 | ರೂ. 220.00 |
| | **ನಿತ್ಯ ಉತ್ಸವಗಳು** | | | | |
| 4. | ಕಲ್ಯಾಣೋತ್ಸವ | ಪ್ರತಿದಿನ | ಮ. 10.00-12.00 ಗಂ॥ | 2 | ರೂ. 1,000.00 |
| 5. | ಡೋಲೋತ್ಸವ (ಊಂಜಲ್ ಸೇವೆ) | ಪ್ರತಿದಿನ | ಮ. 11.00-1.00 ಗಂ॥ | 1 | ರೂ. 200.00 |
| 6. | ಆರ್ಜಿತ ಬ್ರಹ್ಮೋತ್ಸವ | ಪ್ರತಿದಿನ | ಮ. 12.30-2.00 ಗಂ॥ | 1 | ರೂ. 200.00 |
| 7. | ವಸಂತೋತ್ಸವ | ಪ್ರತಿದಿನ | ಮ. 2.30-3.00 ಗಂ॥ | 1 | ರೂ. 300.00 |
| 8. | ಸಹಸ್ರದೀಪಾಲಂಕರಣ ಸೇವೆ | ಪ್ರತಿದಿನ | ಸಾ. 5.00-5.30 ಗಂ॥ | 1 | ರೂ. 200.00 |
| | **ವಾರದ ಸೇವೆಗಳು** | | | | |
| 9. | ವಿಶೇಷಪೂಜೆ | ಸೋಮವಾರ | ಬೆ. 6.00-6,30 ಗಂ॥ | 1 | ರೂ. 600.00 |
| 10. | ಅಷ್ಟದಳ ಪಾದಪದ್ಮಾರಾಧನೆ | ಮಂಗಳವಾರ | ಬೆ. 5.00-5.30 ಗಂ॥ | 1 | ರೂ. 1,250.00 |
| 11. | ಸಹಸ್ರ ಕಲಶಾಭಿಷೇಕ | ಬುಧವಾರ | ಬೆ. 5.00-5.30 ಗಂ॥ | 1 | ರೂ. 850.00 |
| 12. | ತಿರುಪ್ಪಾವಡ ಸೇವೆ | ಗುರುವಾರ | ಬೆ. 5.00-5.30 ಗಂ॥ | 1 | ರೂ. 850.00 |
| 13. | ವಸ್ತ್ರಾಲಂಕಾರ ಸೇವೆ | ಶುಕ್ರವಾರ | ಬೆ. 3.00-4.00 ಗಂ॥ | 2 (ಗಂಡ ಹೆಂಡತಿ) | ರೂ. 12,250.00 |
| ಅ. | ಪೂರಾಭಿಷೇಕ (12 ವರ್ಷದ ಮಕ್ಕಳನ್ನು ಅನುಮತಿಸುವುದಿಲ್ಲ) | ಶುಕ್ರವಾರ | ಬೆ. 3.00-4.00 ಗಂ॥ | 1 | ರೂ. 750.00 |
| 14. | ನಿಜಪಾದ ದರ್ಶನ | ಶುಕ್ರವಾರ | ಬೆ. 4.30-5.30 ಗಂ॥ | 1 | ರೂ. 200.00 |
| | **ವಾರ್ಷಿಕ ಸೇವೆಗಳು / ಪ್ರತ್ಯೇಕ ಸಂದರ್ಭ ಸೇವೆಗಳು** | | | | |
| 15. | ತೆಪ್ಪೋತ್ಸವ | ಫೆಬ್ರವರಿ/ ಮಾರ್ಚ್ | ಸಾ.6.00-7-00 ಗಂ॥ | 1 | ರೂ. 500.00 |
| 16. | ವಸಂತೋತ್ಸವ | ಮಾರ್ಚ್/ ಏಪ್ರಿಲ್ | ಮ. 1.00-2.00 ಗಂ॥ | 1 | ರೂ. 300.00 |
| 17. | ಪದ್ಮಾವತಿ ಪರಿಣಯ | ಮೇ | ಸಾ. 4-00-4.30 ಗಂ॥ | 1 | ರೂ. 1,000.00 |
| 18. | ಅಭಿಧೇಯಕ ಅಭಿಷೇಕ | ಜೂನ್ | ಬೆ. 8-00 ಗಂ॥ | 1 | ರೂ. 400.00 |
| 19. | ಪುಷ್ಪಪಲ್ಲಕಿ | ಜುಲೈ | ಸಾ. 6-30-7-30 ಗಂ॥ | 1 | ರೂ. 200.00 |
| 20. | ಪವಿತ್ರೋತ್ಸವ | ಆಗಸ್ಟ್ | ಬೆ. 8-00-9-00 ಗಂ॥ | 1 | ರೂ. 2,500.00 |
| 21. | ಪುಷ್ಪಯಾಗ | ನವೆಂಬರ್ | ಬೆ. 8-00-9-00 ಗಂ॥ | 1 | ರೂ. 700.00 |
| 22. | ಕೋಯಿಲ್ ಆಳ್ವಾರ್ ತಿರುಮಂಜನ | ವರ್ಷಕ್ಕೆ 4 ಬಾರಿ | ಬೆ. 10-00-11-00 ಗಂ॥ | 1 | ರೂ. 300.00 |

Call Centre : 0877–2233333, 0877–2277777
Toll free : 18004254141, 1800425333333
What's app : 9399399399
e-mail : helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಆನ್‌ಲೈನ್ ನಲ್ಲಿ ಮಾತ್ರವೇ ಟಿಕೆಟ್ ಬುಕ್ ಮಾಡಿಕೊಳ್ಳಬೇಕು. ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : www.ttdsevaonline.com / www.tirumala.org ನು ಸಂಪ್ರದಿಸಬೇಕು.

# ನಿನ್ನ ಸುಖದುಃಖಗಳಿಗೆ ನೀನೇ ಕಾರಣ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಭೂಮಿಕ

ಪ್ರಪಂಚದಲ್ಲಿ ಹಲವರು ತುಂಬಾ ಸುಖದಲ್ಲಿರುವಂತೆ, ಮತ್ತೆ ಕೆಲವರು ದುಃಖದಲ್ಲಿರುವಂತೆ ಕಂಡು ಬರುತ್ತದೆ. ಹಲವರು ಯಶಸ್ಸಿನ ಹಾದಿಯಲ್ಲಿ ಪಯಣಿಸುತ್ತಿದ್ದರೆ ಮತ್ತೆ ಹಲವರು ನಿರಂತರವಾದ ಓಟದಲ್ಲಿ ಪಾಲ್ಗೊಳ್ಳುತ್ತಿರುವಂತೆ ಕಂಡು ಬರುತ್ತದೆ. ಹಲವರು 90 ವರ್ಷ ವಯಸ್ಸಾದರೂ ಬೆಟ್ಟ ಹತ್ತುತ್ತಿದ್ದರೆ ಇನ್ನು ಹಲವರು 40 ವರ್ಷಕ್ಕೆ ಮಂಚ ಹತ್ತಿ ಬಿಡುತ್ತಾರೆ. ಏಕೆ ಹೀಗೆ ಘಟಿಸುತ್ತಿದೆ? ಇದೆಲ್ಲವನ್ನು ಕಂಡು ಹಲವರು ನೇರವಾಗಿ ಪರಮಾತ್ಮನನ್ನೇ ದೂಷಿಸಲು ಮುಂದಾಗುತ್ತಾರೆ. ಇಲ್ಲಿ, ಭಕ್ತಿ ಮಾರ್ಗದಲ್ಲಿ ಈಗಾಗಲೇ ಇರುವವರು ಭಕ್ತಿಯನ್ನು ಕಿತ್ತೊಗೆದು ನಾಸ್ತಿಕರಾಗಿ ಬಿಡುತ್ತಾರೆ. ಇಲ್ಲವೆಂದರೆ ನಾನಾ ವಿಧವಾದ ದೇವರುಗಳನ್ನು ಬದಲಾಯಿಸಿ ಕೊಳ್ಳುತ್ತಿರುತ್ತಾರೆ. ಅದ್ಯಾವುದೋ ಹೊಸ - ಹೊಸ ವ್ರತಗಳನ್ನು ಕೈಗೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಅಷ್ಟಕ್ಕು ಮನುಷ್ಯನಿಗುಂಟಾಗುವ ಸುಖ - ದುಃಖಗಳಿಗೆ ಕಾರಣರಾದವರಾರು? ಯುವಕರನ್ನು ಸಾಮಾನ್ಯವಾಗಿ ಪೀಡಿಸುವ ವಿಷಯಗಳೆಂದರೆ ಓದು, ಉದ್ಯೋಗ, ಭವಿಷ್ಯ, ಮನರಂಜನೆ , ಅವು ಹಲವರಿಗೆ ಸುಲಭವಾಗಿಯೂ, ಪುಷ್ಕಳವಾಗಿಯೂ ಲಭಿಸುವಂತೆ ಕಂಡು ಬಿದ್ದರೆ, ಮತ್ತೂ ಕೆಲವರಿಗೆ ಅವು ಯಾವೂ ಸಿಗದಿರುವುದು ಕಂಡು ಬರುತ್ತದೆ. ಓದು - ಉದ್ಯೋಗವಿಲ್ಲದೆ ಯುವಕರೇ ಸಾಮಾಜಿಕ ವ್ಯವಸ್ಥೆಗೆ ವ್ಯತಿರಿಕ್ತವಾದ ಕಾರ್ಯಗಳಲ್ಲಿ ಸೆಳೆಯಲ್ಪಡುವುದು ಹೆಚ್ಚಾಗಿ ಕಾಣಿಸುತ್ತದೆ. ಅದರಿಂದ ಅವರ ಜೀವನಗಳೇ ಪ್ರಮಾದಕರವಾಗಿ ಬಿಡುತ್ತವೆ. ಈ ಸಮಸ್ಯೆಗೆ ನಮ್ಮ ಭಗವದ್ಗೀತೆ ಹೇಳುವ ಉತ್ತರವೇನೆಂದು ತಿಳಿಯೋಣ.



"ಜಗತ್ತಿನ ಎಲ್ಲಾ ಭೌತಿಕ ಕಾರ್ಯಾಚರಣೆಗಳಿಗೆ ಕಾರಣವು ಪ್ರಕೃತಿಯೆಂದೂ, ಅದರ ಸುಖದುಃಖಕ್ಕೆ ಜೀವನೇ ಸ್ವತಃ ಕಾರಣೀಭೂತ" ನೆಂದು ಹೇಳಲಾಗಿದೆ. (ಭಗವದ್ಗೀತೆ 13- 21)

ಸಾವಿರ - ಕೋಟ್ಯಾದಿ ವರ್ಷಗಳ ಹಿಂದೆ ಹೇಳಲ್ಪಟ್ಟ ಭಗವದ್ಗೀತೆಯ ಸಂದೇಶದ ಪ್ರಕಾರ ಪ್ರತಿವ್ಯಕ್ತಿಯ ಅನುಭವಿಸಲ್ಪಡುವ ಸುಖದುಃಖಗಳಿಗೆ ಸ್ವತಃ ಅವನೇ ಕಾರಣ ಹೊರತು ಮತ್ತ್ಯಾರು ಅಲ್ಲವೆಂದುದು ಸತ್ಯ-ಯಾವಾಗ ಮನುಷ್ಯನಿಗೆ ತನ್ನ ಸುಖ-ದುಃಖಗಳಿಗೆ ತಾನೇ ಕಾರಣನೆಂದು ಅರಿವಾಗುತ್ತದೋ ಆಗ ಆತನ ಜೀವನವೇ ಬದಲಾಗಿಬಿಡುತ್ತದೆ. ಅಂತಹ ಬದಲಾವಣೆ ತರಲೆಂದೇ ಭಗವದ್ಗೀತೆ ಸ್ಥಿತವಿದೆ. ಪ್ರಸ್ತುತ ಅನುಭವಿಸುವ ದುಃಖಗಳು ಪೂರ್ವ ಜನ್ಮದ ಕರ್ಮಫಲವೇ ಎಂದು ನಮಗೆ ಗೊತ್ತು! ನಾವು ಈ ವರೆಗೆ ತಿಳಿದು ಯಾವುದೇ ತಪ್ಪು ಮಾಡಿಲ್ಲ - ಯಾವುದೇ ಪಾಪ ಮಾಡಿಲ್ಲ. ಆದರೂ ಯಾಕಿಂತ ಕಷ್ಟ? ಏತಕ್ಕಾಗಿ ದುಃಖಗಳು? ಒಳ್ಳೆಯವರಿಗೇ ಏಕೆ ಬಹಳ ದುಃಖಗಳುಂಟಾಗುತ್ತವೆ? ಪಾಪಗಳನ್ನು ಮಾಡುವಂತವರೆಲ್ಲಿ ಚೆನ್ನಾಗಿಯೇ ಇದ್ದಾರಲ್ಲಾ? ಎಂದು ಬಹಳ ಮಂದಿ ಊಹಿಸುತ್ತಿರುತ್ತಾರೆ. ಗೀತಜ್ಞಾನವಿಲ್ಲದಿರುವುದೇ ಇಂತಹ ಮಾತುಗಳಿಗೆ ಕಾರಣವೇ ವಿನಃ ಮತ್ತೊಂದು ಕಾರಣ ಅಕ್ಷರಶಃ ಇಲ್ಲ.

ಹಾಗಾದರೆ ನಾವು ಯಾವಾಗಲೂ ಸುಖದಲ್ಲೇ ಇರುವಂತೆ-ದುಃಖಗಳಿಂದ ಹೊರಬರುವಂತಿರಲು ಸಾಧ್ಯವೇ?" ಎಂದು ಯಾರಾದರೂ ಕೇಳಿದರೆ ಅದನ್ನು ಕಾರ್ಯಗತಗೊಳಿಸಲೆಂದೇ ಮಾನವ ಜನ್ಮ ದೊರತಿದೆ. ಅದನ್ನು

ಕಾರ್ಯಾಚರಣೆಗೆ ತರಲು ಮಾರ್ಗದರ್ಶನ ಮಾಡುವುದೇ ಭಗವದ್ಗೀತೆ ಎಂದು ಉತ್ತರಿಸಬೇಕಾಗಿ ಬರುತ್ತದೆ. ಮನುಷ್ಯ ತನ್ನಲ್ಲಿ ತಾನು ತಯಾರು ಮಾಡಿಕೊಳ್ಳುವ ಕಲ್ಮಷ ಹೃದಯವೇ ದುಃಖಕ್ಕೆ ಕಾರಣ ಮನುಷ್ಯ ಅಳವಡಿಸಿಕೊಳ್ಳುವ ಆತನ ದೈವಿಕ ಗುಣವೇ. ಆತನ ಗುಣವೇ ಆತನ ಸುಖಕ್ಕೆ ಕಾರಣ ಹೃದಯ ನಿರ್ಮಲವಾಗಿರಬೇಕು. ನಮ್ಮ ಗುರಿ ಮಹೋನ್ನತವಾಗಿರಬೇಕು. ಆಗಲೇ ಜೀವನವು ಸುಖಸಾಗರವಾಗಿ ಮಾರ್ಪಡುತ್ತದೆ. ಹೃದಯವು ಕಲ್ಮಷಗಳಿಂದ ತುಂಬಿ ಗುರಿಯಿಂದ ಜೀವನದ ಖಂಡಿತವಾಗಿಯೂ ದುಃಖಸಾಗರವೇ. ಹೃದಯವನ್ನು ನಿರ್ಮಲವಾಗಿಟ್ಟುಕೊಳ್ಳುವುದು, ಉನ್ನತವಾಗಿ ಗುರಿಯನ್ನು ಹೊಂದುವುದು ನಮ್ಮ ಕೆಲಸವಲ್ಲವೇ? ಅದು ಮತ್ತೊಬ್ಬರ ಕೆಲಸವಂತೂ ಅಲ್ಲವೇ ಅಲ್ಲ. ಈ ಎರಡೂ ಇದ್ದಲ್ಲಿ ಸುಖ ಸೇವೆಗೆ ಮುನ್ನುಡಿ ಬರದಂತೆಯೇ ಹೃದಯ ನಿರ್ಮಲವಾಗಿದ್ದುಕೊಳ್ಳುವುದೆಂದರೇನು? ಇದು ಅತಿ ಮುಖ್ಯವಾದ ಪ್ರಶ್ನೆ. ಅಸೂಯೆ ಇಲ್ಲದಿರುವುದು, ದ್ವೇಷವಿಲ್ಲದಿರುವುದು, ಕೋಪ ವಿಲ್ಲದಿರುವುದು ಇವೇ ಹೃದಯವನ್ನು ನಿರ್ಮಲವಾಗಿಟ್ಟುಕೊಳ್ಳುವುದೆಂದರೆ ಧ್ರುವನಿಗೆ ಐದು ವರ್ಷವಿರುವಾಗ ಒಂದೊಂದಾದ ಅವಮಾನದಿಂದಾಗಿ ಮಹೋನ್ನತವಾದ ಲಕ್ಷ್ಯವನ್ನು ತನ್ನದಾಗಿಸಿಕೊಂಡಿದ್ದಾನೆ. ತಂದೆಯ ತೊಡೆಯ ಮೇಲೆ ಕೂಡಬೇಕೆಂದು ಆತನಿಗೆ ಆಸೆ ಹುಟ್ಟಿದೆ. ಆದ್ದರಿಂದಲೇ ಆತನು ತಂದೆಗಿಂತಲೂ ಮಿಗಿಲಾದ, ತಾತನಿಗಿಂತಲೂ ಮಿಗಿಲಾದ ಮುತ್ತಾತನಿಗಿಂತಲೂ ಉನ್ನತವಾದ ಸ್ಥಾನದಲ್ಲಿ ಕುಳಿತುಕೊಳ್ಳುತ್ತೇನೆಂದು ಸಂಕಲ್ಪ ಮಾಡಿಕೊಂಡಿದ್ದಾನೆ. ಗುರಿ ನಿರ್ಧಾರವಾಗಿ ಬಿಟ್ಟಿದೆ. ಅಷ್ಟಿದ್ದರೆ ಕೆಲಸವಾಗದು ಆಗ ಆತನ ತಾಯಿ ಸುನೀತ ಉಪದೇಶ ಮಾಡುತ್ತಾ "ಧ್ರುವ! ನಿನಗೆ ಅವಮಾನ ಮಾಡಿದವರಿಗೆ ಅಪಕಾರವಾಗೆಂದು ಮಾತ್ರ ಆಶಿಸಬೇಡ" ಎಂದು ಉಪದೇಶಿಸಿದ್ದಾಳೆ. ಅಂದರೆ ಹೃದಯ ನಿರ್ಮಲವಾಗಿರಬೇಕೆಂದೂ, ದ್ವೇಷವನ್ನು ಹತ್ತಿರಕ್ಕೂ ಬರಗೊಡಬೇಡೆಂದು ಅದರ ಅರ್ಥ. ಆಗ ಧ್ರುವನು ತನ್ನ ಮೇಲೆ ಅವಮಾನ ಮಾಡಿದವರ ಮೇಲೆ ಯಾವುದೇ ದ್ವೇಷವಿರದೇ ಅಡವಿಗೆ ತೆರಳಿ, ತಪಸ್ಸುಗೈದು ಭಗವದ್ಧರ್ಶನದಿಂದ ತನ್ನ ಕೋರಿಕೆಯನ್ನು ತೀರಿಸಿಕೊಂಡು ಧ್ರುವ ತಾರೆಯಾಗಿ ಉಳಿದು ಬಿಟ್ಟಿದ್ದಾನೆ. ಇದೇ ಜೀವನದ ವಿಜಯ ರಹಸ್ಯ!

**ಎಡದಿಂದ ಬಲಕ್ಕೆ**

1. ತಿರುಚ್ಚಂದ ವಿರುತ್ತಂ
2. ಆಡುಹವೇ
3. ತೋಳೀ
4. ತಿರುವೆಷುಕ್ಕೂತ್ತಿರುಕ್ಕೈ

**ಬಲದಿಂದ ಎಡಕ್ಕೆ**

5. ಮತ್ಸ್ಯ
6. ಕಾಶಿ
7. ತಿರುವಲ್ಲಿಕ್ಕೇಣಿ
8. ತತ್ವತ್ರಯ
9. ನಾನ್ಮುಹನೇ ಮುಕ್ಕಣ್ಣಪ್ಪ

**ಮೇಲಿಂದ ಕೆಳಕ್ಕೆ**


10. ಅಂಜಿನೋಂತಡಂ
11. ಪರಶು
12. ಅಡಿಪ್ಪೋತ್ತಿ

**ಕೆಳಗಿನಿಂದ ಮೇಲಕ್ಕೆ**

13. ಈಡು
14. ವದರಿ
15. ತಿರುವಿರುತ್ತಂ

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 ತಿ | ರು | ಚ್ಚಂ | ದ | ವಿ | ರು | ತ್ತಂ | 10 ಅಂ |
| 2 | 2 ಆ | ಡು | ಹ | ವೇ | | 11 ಪ | ರು | ಜಿ |
| 3 | 12 ಅ | 13 ಈ | ತ್ಸ್ಯ | 5 ಮ | ರಿ | ರ | ವಿ | ನೋಂ |
| 4 | ಡಿ | ಶಿ | 6 ಕಾ | | ದ | ಶು | ರು | ತ |
| 5 | ಪ್ಪೋ | ಣಿ | ಕ್ಕೇ | ಳ್ಳಿ | 14 ವ | ರು | 7 ತಿ | ಡಂ |
| 6 | ತ್ತಿ | 3 ತೋ | ಳೀ | | ಯ | ತ್ರ | ತ್ವ | 8 ತ |
| 7 | ಪ್ಪ | ಣ್ಣ | ಕ್ಕ | ಮು | ನೇ | ಹ | ನ್ಮು | 9 ನಾ |
| 8 | 4 ತಿ | ರು | ವೆ | ಷು | ಕ್ಕೂ | ತ್ತಿ | ರು | ಕ್ಕೈ |

# ಶ್ರೀ ರಾಮಾವತಾರ



ಭಗವಂತನು ಭುವಿಯಲ್ಲಿ ಅವತರಿಸುವುದಕ್ಕೆ ಬಲವತ್ತರವಾದ ಕಾರಣಗಳಿರುತ್ತವೆ. ಇದನ್ನನುಸರಿಸಿ ಶ್ರೀ ಹರಿಯ ಸೇವೆಗೋಸ್ಕರವಾಗಿ, ದೇವ, ಋಷಿ, ಗಂಧರ್ವಾದಿಗಳು ಆತನ ಅನುಜ್ಞೆಯಿಂದತರಿಸಿ, ಆತನ ಸಂಕಲ್ಪಾನುಸಾರ ಕಾರ್ಯನಿರ್ವಹಿಸಿ, ತಮ್ಮ ಸಾಧನೆಯನ್ನೂ ಮಾಡಿಕೊಂಡು ಉಧೃತರಾಗುತ್ತಾರೆ. ಇಲ್ಲಿ ದುಷ್ಟಶಿಕ್ಷಣ, ಶಿಷ್ಟರಕ್ಷಣ ಕಾರ್ಯವು ಅವ್ಯಾಹತವಾಗಿ ನಡೆದಿರುತ್ತದೆ. ಶ್ರೀಹರಿಯ ಒಂದು ಕಾರ್ಯವು, ಅನೇಕ ಕಾರ್ಯ ಮತ್ತು ಘಟನೆಗಳಿಗೆ ಕಾರಣವಾಗಿರುತ್ತದೆ. ತಾನು ಸರ್ವತ್ರ ವ್ಯಾಪ್ತನೆಂದು ತಿಳಿಸಲು ಮತ್ಸ್ಯ, ಕೂರ್ಮಾದಿ ರೂಪಗಳಿಂದವತರಿಸಿ, ಬಿಂಬ ರೂಪದ ವ್ಯಾಪ್ತತ್ವಾದಿ ಕ್ರಿಯೆಗಳನ್ನು ಸಮಯ ಸಂದರ್ಭಾನುಸಾರ ಲೋಕದಲ್ಲಿ ವ್ಯಕ್ತ ಪಡಿಸಿದ್ದಾನೆ.ಶ್ರೀರಾಮಾವತಾರದಲ್ಲಿ ಮನುಷ್ಯನಾಗಿ ಅವತರಿಸಿ, ಮಾನವ ಧರ್ಮಗಳ ಪ್ರತಿಪಾದನೆಯನ್ನು ಲೋಕದಲ್ಲಿ ಸಾರಿ, ಮರ್ಯಾದಾ ಪುರುಷೋತ್ತಮನೆಂದು ಜಗದ್ವಿಖ್ಯಾತನಾಗಿದ್ದಾನೆ. ಆ ಕಾರ್ಯಗಳೆಲ್ಲವೂ ಜಗತ್ತಿಗೆ ಮಾರ್ಗಸೂಚಿಯಾಗಿವೆ. ಈ ಅವತಾರವೂ ಬಲವತ್ತರವಾದ ಅನೇಕ ಕಾರಣಗಳಿಂದ ಕೂಡಿದೆ. ಜಗತ್ತಿನ ಆದಿ ದೈತ್ಯರೆನ್ನಿಸಿದ ಹಿರಣ್ಯಕಶ್ಯಿಪು ಮತ್ತು ಹಿರಣ್ಯಾಕ್ಷರು ಪುಲಸ್ತ್ಯರ ಪುತ್ರ, ವಿಶ್ರವಸ್‌ರ ಮಕ್ಕಳಾಗಿ ಜೀವದ್ವಯಾವೇಶವುಳ್ಳ ರಾವಣ, ಕುಂಭಕರ್ಣರೆಂಬ ನಾಮದಿಂದ ಜನಿಸಿದ್ದರು. ಇವರಿಬ್ಬರೂ, ಬ್ರಹ್ಮ ದೇವರ ವರದಿಂದಾಗಿ , ನರವಾನರಾದಿಗಳನ್ನು ಹೊರತು ಪಡಿಸಿ, ಇತರರಿಂದ ಅಜೇಯ ಮತ್ತು ಅವಧ್ಯರಾಗಿದ್ದ ಕಾರಣದಿಂದಾಗಿ, ಇವರ ಪೀಡೆಯು ದೇವಲೋಕಕ್ಕೂ ವ್ಯಾಪಿಸುವಷ್ಟು ಭಯಂಕರವಾಗಿತ್ತು.

ಸನಕಾದಿಗಳ ಶಾಪದ ನಿಮಿತ್ತವಾಗಿ, ಜಯ ವಿಜಯರು, ಪರಮಾತ್ಮನ ಸಾನಿಧ್ಯ ಮತ್ತು ಸೇವೆಯಿಂದ ಬಹಳ ಕಾಲ ಅಗಲಿರಲಾರದೆ, ಕೇವಲ ಮೂರು ಜನ್ಮಗಳಲ್ಲಿ, ಶ್ರೀ ಹರಿಯಲ್ಲಿ ಶತೃತ್ವೇನ ಉಪಾಸನೆಯಿಂದ ಬೇಗ ಶಾಪ ವಿಮುಕ್ತರಾಗಬೇಕೆಂದೂ, ತಮ್ಮ ಅಂತ್ಯವೂ ಶ್ರೀಹರಿಯಿಂದಲೇ ಆಗಬೇಕೆಂಬುದರ ಪ್ರಾರ್ಥನಾನುಸಾರ, ಅವರಿಗೆ ಶ್ರೀಹರಿಯಿಂದ ಅಭಯ ಮತ್ತು ವಚನ ದೊರೆತಿದ್ದ ಕಾರಣದಿಂದಾಗಿ ಆದಿ ಹಿರಣ್ಯಕಶ್ಯಪು ಮತ್ತು ಹಿರಣ್ಯಾಕ್ಷರ ಜೊತೆಗೆ ಅಂದರೆ ರಾವಣ, ಕುಂಭ ಕರ್ಣರ ದೇಹದಲ್ಲಿ ಆವಿಷ್ಕರಾಗಿದ್ದುದರಿಂದ ದ್ವಿಜಾವೇಶ ಪ್ರಾಪ್ತಿಯಾಗಿತ್ತು. ಜಯ, ವಿಜಯರನ್ನು ಶ್ರೀ ಹರಿಯ ಹೊರತು ಬೇರೆಯವರು ವಧಿಸಲು ಅಶಕ್ಯವಾಗಿದ್ದುದು ಹಾಗೂ ಹಿರಣ್ಯಕಶ್ಯಪು ಮತ್ತು ಹಿರಣ್ಯಾಕ್ಷರಿಗಿದ್ದ ಬ್ರಹ್ಮದೇವರ ವರವೂ ಸೇರಿ ಅವರಿಗೆ ಅವಧ್ಯತ್ವ ಮತ್ತು ಅಜೇಯತ್ವ ಸಿದ್ಧಿಸಿತ್ತು.

"ಮಧು ಮತ್ತು ಕೈಟಭರು, ಬ್ರಹ್ಮನ ಮುಖದಿಂದ ಹೊರ ಹೊಮ್ಮಿದ ವೇದ ಅವಾಂತರಾಭಿಮಾನಿಗಳ ಸಮುದಾಯವನ್ನು ಅಪಹರಿಸಿದ್ದ ಅವರನ್ನು, ಶ್ರೀ ಹರಿಯು ಹಯಗ್ರೀವ ರೂಪದಿಂದ ಸಂಹರಿಸಿ , ಅವರ ಮೇದಸ್ಸಿನಿಂದ "ಮೇದಿನಿ"ಯನ್ನು, ನಿರ್ಮಿಸಿದ ಕಾರಣ ಅದು ಅಪವಿತ್ರವಾಗಿದೆ. ಅಲ್ಲದೆ ಅಸುರರ ಬಲವೂ ವರಗಳ ನೀಡಿಕೆಯಿಂದ ಬಂದಂತಹುದು. ಈ ಬಲವೂ ನಿನ್ನ ಅಧೀನ. ಅವರುಗಳು ಕೇವಲ ಮನುಷ್ಯ ಮತ್ತು ವಾನರರಿಂದ ಮಾತ್ರ ವಧ್ಯರು. ವಿಶ್ವಸ್ವಾಮಿಯೂ, ಸರ್ವ ಸಮರ್ಥನೂ ಆದ ನೀನು ಈ ಇಬ್ಬರೂ ದೈತ್ಯರನ್ನು ಸಂಹರಿಸಿ ಮೇದಿನಿಯನ್ನು ಪವಿತ್ರಗೊಳಿಸಲು ಮನುಷ್ಯ ರೂಪದಲ್ಲವತರಿಸಿ ಅನುಗ್ರಹಿಸು'' ಎಂದು ಅನನ್ಯಗತಿಕರಾಗಿ, ಎಲ್ಲ

- ಡಾ॥ ರಾಮಚಂದ್ರ ದಾಸ್ ಸಿ.ಜೆ.

ದೇವತೆಗಳು, ಋಷಿಮುನಿಗಳು ಶ್ರೀಹರಿಯಲ್ಲಿ ಪ್ರಾರ್ಥಿಸಿದಾಗ, ಅವರುಗಳು ಅನುಗೃಹೀತರಾದರು.

ಇದಕ್ಕೆ ಪೂರಕವೆಂಬಂತೆ, ಧರ್ಮಜ್ಞನಾದ ದಶರಥ ಮಹಾರಾಜನಿಗೆ ವಂಶೋದ್ಧಾರಕರಾದ ಗಂಡು ಮಕ್ಕಳಿಲ್ಲದ್ದಕ್ಕಾಗಿ ಕುಲಗುರುಗಳಾದ ವಸಿಷ್ಠರು ಮತ್ತು ಪುರೋಹಿತರಾದ ವಾಮದೇವಾದಿಗಳ ಸಲಹೆಯಂತೆ, ಋಷ್ಯಶೃಂಗರ ಅಧ್ವರ್ಯತ್ವದಲ್ಲಿ ನಡೆದ ಅಥರ್ವಣ ವೇದೋಕ್ತವಾದ ಪುತ್ರಕಾಮೇಷ್ಟಿ ಯಾಗದ ಪೂರ್ಣಾಹುತಿಯ ನಂತರ ಆಹವನೀಯ ಯಜ್ಞ ಕುಂಡದಲ್ಲಿ ಪ್ರಜ್ವಲಿಸುತ್ತಿರುವ ಯಜ್ಞೇಶ್ವರನ ಜ್ವಾಲೆಯ ಮಧ್ಯದಿಂದ, ದಿವ್ಯ ಯಜ್ಞಪುರುಷನು, ಪಾಯಸದ ಪಾತ್ರೆಯೊಂದಿಗೆ ಆವಿರ್ಭವಿಸಿ ದಶರಥ ಮಹಾರಾಜನನ್ನು ಕುರಿತು, ಅರ್ಹರಾದ ನಿನ್ನ ಪತ್ನಿಯರು ಇದನ್ನು ಭುಂಜಿಸಿದಲ್ಲಿ ಕುಲೋದ್ಧಾರಕ ರಾದ ಪುತ್ರರು ಜನಿಸುವರು ಎಂದು, ಆ ಪಾತ್ರೆಯನ್ನು ಅವನಿಗೆ ನೀಡಿ ಅಂತರ್ಧಾನನಾದನು.

ದಶರಥ ಮಹಾರಾಜನು, ಪಾಯಸದಲ್ಲಿ ಅರ್ಧ ಭಾಗವನ್ನು ಕೌಸಲ್ಯೆಗೆ ನೀಡಿದ್ದರಿಂದ, ಇಕ್ಷ್ವಾಕು ಕುಲವರ್ಧನನಾದ ರಾಮನು, ಚೈತ್ರ ಶುದ್ಧ ನವಮಿಯಂದು ಪುನರ್ವಸು ನಕ್ಷತ್ರದಲ್ಲಿ, ಉಳಿದ ಅರ್ಧ ಭಾಗದಲ್ಲಿ ಪುನಃ ಎರಡು ಭಾಗ ಮಾಡಿ, ಒಂದು ಭಾಗವನ್ನು ಸುಮಿತ್ರಾದೇವಿಗೆ ನೀಡಿ, ಉಳಿದ ಕಾಲು ಭಾಗದಲ್ಲಿ ಪುನಃ ಎರಡು ಭಾಗ ಮಾಡಿ, ಒಂದು ಭಾಗವನ್ನು ಕೈಕೇಯಿಗೆ, ನಂತರ ಉಳಿದ ಇನ್ನೊಂದು ಭಾಗ ವನ್ನು ಪುನಃ ಸುಮಿತ್ರಾದೇವಿಗೆ ನೀಡಿದನು. ಇದರಿಂದ ಕ್ರಮವಾಗಿ ಕೈಕೇಯಿಯಲ್ಲಿ ಭರತನು, ದಶಮಿಯ ದಿನ ಪುಷ್ಯ ನಕ್ಷತ್ರ, ಮೀನ ಲಗ್ನದಲ್ಲಿ, ನಂತರ ಸರ್ಪದೇವತಾಕವಾದ ಆಶ್ಲೇಷ ನಕ್ಷತ್ರ, ಕರ್ಕಾಟಕ ಲಗ್ನದಲ್ಲಿ ಲಕ್ಷ್ಮಣ ಶತ್ರುಘ್ನರು, ಅವತರಿಸಿದರು.

ಭರತ, ಲಕ್ಷ್ಮಣ ಮತ್ತು ಶತ್ರುಘ್ನರ ಮೂಲ ರೂಪಗಳಲ್ಲಿ ಕ್ರಮವಾಗಿ ಪ್ರದ್ಯುಮ್ನ, ಸಂಕರ್ಷಣ ಮತ್ತು ಅನಿರುದ್ಧ ಎಂಬ ಶ್ರೀ ಹರಿಯ ರೂಪಗಳ ಆವೇಶದೊಂದಿಗೆ, ಪ್ರದ್ಯುಮ್ನ, ಶೇಷ ಮತ್ತು ಅನಿರುದ್ಧರ ಅವತಾರವಾಯಿತು.



ರಾಮಾವತಾರದ ಕಾಲದಲ್ಲಿ ನಡೆದ ಕಾರ್ಯಗಳನ್ನು ಲೋಕಕಲ್ಯಾಣ ಮತ್ತು ಲೋಕವಿಡಂಬನೆಯ ಆಧಾರದಲ್ಲಿ ಸಮಯ ಸಂದರ್ಭಾನುಸಾರ ಅರ್ಥೈಸಲ್ಪಟ್ಟಿದೆ. ಇಲ್ಲಿ ಕಂಡು ಬರುತ್ತಿರುವ ಅನೇಕ ಘಟನೆಗಳಲ್ಲಿ ಮೇಲ್ನೋಟದ ಅರ್ಥಕ್ಕೂ ಅಂತರಾರ್ಥಕ್ಕೂ ತುಂಬ ವ್ಯತ್ಯಾಸವಿರುತ್ತಿದ್ದು, ಅವುಗಳ ಹಿಂದಿನ ಆಂತರ್ಯದ ಉದ್ದಿಶ್ಯ ಮಾತ್ರ, ಮುಂದಿನ ಅನೇಕ ಘಟನೆಗಳಿಗೆ ನಾಂದಿಯಾಗಿರುತ್ತದೆ. ಶ್ರೀಮದಾಚಾರ್ಯರು ಇಂತಹ ಕ್ಲಿಷ್ಟ ಸಮಸ್ಯೆಗಳಿಗೆ ನಿರಾಯಾಸವಾಗಿ, ತಾತ್ವಿಕವಾಗಿ, ಸುಂದರವಾಗಿ ಉತ್ತರವನ್ನು ನೀಡಿದ್ದಾರೆ.

ರಾಮಾವತಾರದ ಸುಸಂದರ್ಭದಲ್ಲಿ ಅನೇಕ ದೇವತೆಗಳು, ಋಷಿ ಮುನಿ, ಮುಂತಾದವರು ಪರಮಾತ್ಮನ ಅನುಜ್ಞೆ ಪಡೆದು ನರ ವಾನರ ರೂಪದಲ್ಲಿವತರಿಸಿ ಶ್ರೀ ಹರಿಯ ಸೇವೆಗೈದು, ತಮ್ಮ ಸಾಧನೆಯನ್ನು ಮಾಡಿಕೊಂಡರು. ಸ್ವಾಯಂಭುವ ಮನು, ದಶರಥನಾಗಿ, ಇಂದ್ರ ವಾಲಿಯಾಗಿ ಸೂರ್ಯ ಸುಗ್ರೀವನಾಗಿ, ಮರುತ (ಧ್ರುವ) ಕೇಸರಿಯಾಗಿ, ಪುಂಜಕಸ್ಥಿ (ಅಪ್ಸರೆ) ಅಂಜನಾದೇವಿಯಾಗಿ, ಕಣ್ವಮುನಿ ವಿಭೀಷಣನಾಗಿ, ಭಾವಿ ಸುಭದ್ರೆ ತ್ರಿಜಟೆಯಾಗಿ, ಇವೆಲ್ಲಕ್ಕೂ ಮೂಲ ಕಳಸವಿಟ್ಟಂತೆ ವಾಯು ದೇವರು ಹನುಮಂತನಾಗಿ ಇಡೀ ರಾಮಾಯಣಕ್ಕೆ ಸೂತ್ರಧಾರರಂತೆ ಅವತರಿಸಿದ್ದರು.

ವಿಶ್ವಾಮಿತ್ರರಿಂದ ಅಸ್ತ್ರಾದಿಗಳ ಸ್ವೀಕಾರ, ತಾಟಕಾ ಎನ್ನುವ ಸ್ತ್ರೀ (ಮಿಥ್ಯಾ ಅಥವಾ ಅನ್ಯಥಾ ಜ್ಞಾನ) ವಧೆ, (ಕೃಷ್ಣಾವತಾರದಲ್ಲಿಯೂ ಮೊಟ್ಟಮೊದಲು ಪೂತನಾ ಎನ್ನುವ ಸ್ತ್ರೀ ವಧೆಯಿಂದ ಪ್ರಾರಂಭವಾಯಿತು) ಆ ಲಕ್ಷ್ಮೀ ರೂಪಿಯಾದ ಮಂಥರೆಯ ನಿಮಿತ್ತ ( ಒಂದು ರೀತಿಯಲ್ಲಿ ) ರಾಮಾಯಣದ ಕಥೆಗೆ ನಾಂದಿಯಾಯಿತು.

ವಾಯುದೇವರ ಅನುಗ್ರಹವಾದರೆ ಶ್ರೀಹರಿಯು ಸುಲಭವಾಗಿ ಒಲಿಯುವವನು ಎಂಬ ಅಂಶವನ್ನು ಸುಗ್ರೀವನ ಸಖ್ಯ, ವಾಲಿಯ ನಿಗ್ರಹ ಕಾರ್ಯದಲ್ಲಿ, ಇದು ಕೃಷ್ಣಾವತಾರದ ಕಾಲದಲ್ಲಿದ್ದು ಅದಲು ಬದಲಾಗಿರುವುದನ್ನು ಗಮನಿಸಬಹುದು. ಸುಗ್ರೀವನ ಸಖ್ಯದ ನಿಮಿತ್ತ ದುಂದುಭಿಯ ಶವದಿಂದಲೇ ರಸಾತಲದಲ್ಲಿನ

ದೈತ್ಯರ, ತಾಲ ವೃಕ್ಷದ ರೂಪದಲ್ಲಿದ್ದ (ಚತುರ್ಮುಖ ಬ್ರಹ್ಮ ಪದವಿ ಪಡೆಯಲು ತಪಸ್ಸು ಗೈಯ್ಯುತ್ತಿದ್ದ) ದೈತ್ಯರ, ಹಾಗೂ ಕೆಳಗಿನ ಏಳು ಲೋಕಗಳಲ್ಲಿ ನೆಲೆಸಿದ್ದ "ಕುಮುದಿ'ಗಳು ಎಂಬ ದೈತ್ಯರ ಸಂಹಾರ ಮಾಡಿದರು.

ವಾಲಿಯ ನಿಗ್ರಹದ ಘಟನೆ ನಿರೂಪಣೆಯು ಅತ್ಯಂತ ಜಟಿಲ ಮತ್ತು ಕ್ಲಿಷ್ಟಕರ. ಇದರಲ್ಲಿ ಅನೇಕ ಲೋಕನೀತಿಗಳ ಪುಂಜವಿದೆ. ಭಗವಂತನು ಜೀವರಿಗೆ ಸಾಧನ ಶರೀರವನ್ನು ಅನುಗ್ರಹಿಸಿರುವುದನ್ನು ಮರೆತು, ಸಾಂಸಾರಿಕ ಭೋಗಗಳಲ್ಲಿ ಮಿತಿ ಮೀರಿ ಆಸಕ್ತರಾಗುವ ಸುಜೀವಿಗಳನ್ನು ವಾಯುದೇವರು, ತಮ್ಮ ಮಧ್ವಾದಿ ರೂಪಗಳಿಂದ ಉದ್ಧರಿಸುವರು. ರಾಮ ದೇವರಿಂದ ಪ್ರಯೋಗಿಸಲ್ಪಟ್ಟ ಬಾಣವು ವಾಯುದೇವರ ಸಂಕೇತವಾಗಿದ್ದು,ವಾಲಿಯ ಉದ್ಧಾರ ಹೇಗಾಯಿತು ಎಂಬುದರ ಮೂಲಕ ಮಧ್ವಶಾಸ್ತ್ರವು (ಹನುಮನ ಮತ) ಹೃದ ಯಕ್ಕೆ ತಟ್ಟಿದರೆ, ಮುಟ್ಟಿದರೆ ಜ್ಞಾನ ಬರುವುದು ಶತಸ್ಸಿದ್ಧ ಎಂಬುದನ್ನು ತಿಳಿಸುತ್ತದೆ. ಶ್ರೀ ಮದಾಚಾರ್ಯರು ಬಹು ಸುಂದರವಾಗಿ ಸಮಸ್ಯೆಯನ್ನು ಬಿಡಿಸಿ ನಿರೂಪಿಸಿದ್ದಾರೆ.

ಸಾಗರ ಲಂಘನದ ವಿಷಯದಲ್ಲಿ ಹನುಮಂತ ದೇವರ ನಡೆ ಮತ್ತು ಉದ್ಧಿಷ್ಯದಲ್ಲಿ "ಕರ್ಮಣಾ ಜ್ಞಾತ ಮಾತನೋತಿ" ಎಂಬ ಶೃತಿ ವಾಕ್ಯದ ಪ್ರತಿಪಾದನೆಯಿದೆ. ಹಾಗೆಯೇ ಸೇತು ಬಂಧನದ ನಿಮಿತ್ತ (ರುದ್ರದೇವರ ವರದಿಂದ) ಸಾವು ಮತ್ತು ಸೋಲಿಲ್ಲದೆ ಸಾಗರದಲ್ಲಿ ನೆಲೆಸಿದ್ದ ಅಂತ್ಯಜ ರೂಪದ ದೈತ್ಯರ ಸಂಹಾರ ಮಾಡಿದ್ದು, ಸೀತಾ (ಪ್ರತಿಕೃತಿ ವೇದವತಿ) ನಿಮಿತ್ತವಾಗಿ ರಾವಣ, ಕುಂಭಕರ್ಣರ ವಧೆ, ವಿಭೀಷಣನ ಉದ್ಧಾರ, ವೇದವತೀ ನಿಮಿತ್ತವಾಗಿ ಕಲಿಯುಗದಲ್ಲಿ ಶ್ರೀನಿವಾಸ ಮತ್ತು ಪದ್ಮಾವತಿ ಅವತಾರಕ್ಕೆ ಅಂಕುರಾರ್ಪಣೆ, ಇತ್ಯಾದಿ ಅನೇಕ ಘಟನೆಗಳ ಮೂಲಕ, ಭಗವಂತನ ಕರ್ತೃತ್ವ, ವ್ಯಾಪ್ತತ್ವ, ಮತ್ತು ನಿಯಾಮಕತ್ವದ ಜೊತೆಗೆ ಸತ್ಯ ಸಂಕಲ್ಪತ್ವ ಇತ್ಯಾದಿ ಗುಣಗಳ ಪ್ರತಿಪಾದನೆಯೇ ಮುಖ್ಯ ಉದ್ಧಿಶ್ಯ ಎಂಬುದೇ ಗಮನಾರ್ಹ ಅಂಶವಾಗಿದೆ. ಈ ಅನೇಕ ಕಾರಣಗಳಿಂದಾಗಿ ರಾಮಾವತಾರವಾಯಿತು ಎಂಬುದು ನಿರ್ವಿವಾದ.

**ದಶರಥ ಮಹಾರಾಜನು, ಪಾಯಸದಲ್ಲಿ ಅರ್ಧ ಭಾಗವನ್ನು ಕೌಸಲ್ಯೆಗೆ ನೀಡಿದ್ದರಿಂದ ಇಕ್ಷ್ವಾಕು ಕುಲವರ್ಧನನಾದ ರಾಮನು, ಚೈತ್ರ ಶುದ್ಧ ನವಮಿಯಂದು ಪುನರ್ವಸು ನಕ್ಷತ್ರದಲ್ಲಿ, ಉಳಿದ ಅರ್ಧ ಭಾಗದಲ್ಲಿ ಪುನಃ ಎರಡು ಭಾಗದಲ್ಲಿ ಮಾಡಿ ಒಂದು ಭಾಗವನ್ನು ಸುಮಿತ್ರಾದೇವಿಗೆ ನೀಡಿ, ಉಳಿದ ಕಾಲು ಭಾಗದಲ್ಲಿ ಪುನಃ ಎರಡು ಭಾಗ ಮಾಡಿ, ಒಂದು ಭಾಗವನ್ನು ಕೈಕೇಯಿಗೆ,ನಂತರ ಉಳಿದ ಇನ್ನೊಂದು ಭಾಗವನ್ನು ಪುನಃ ಸುಮಿತ್ರಾದೇವಿಗೆ ನೀಡಿದನು. ಇದರಿಂದ ಕ್ರಮವಾಗಿ ಕೈಕೇಯಿಯಲ್ಲಿ ಭರತನು, ದಶಮಿಯ ದಿನ ಪುಷ್ಯ ನಕ್ಷತ್ರ, ಮೀನ ಲಗ್ನದಲ್ಲಿ, ನಂತರ ಸರ್ಪದೇವತಾಕವಾದ ಆಶ್ಲೇಷ ನಕ್ಷತ್ರ, ಕರ್ನಾಟಕ ಲಗ್ನದಲ್ಲಿ ಲಕ್ಷ್ಮಣ ಶತ್ರುಘ್ನರು, ಅವತರಿಸಿದರು.**


**ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.**

ತಿರುಮಲೆ ತಿರುಪತಿ ದೇವಸ್ಥಾನಗಳು

**ಟೋಲ್ ಫ್ರಿ ನಂಬರ್**

**18004254141**

**ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!**

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

# ದಾಸ್ಯ ಸಾಹಿತ್ಯದಲ್ಲಿ ತೀರ್ಥ ಕ್ಷೇತ್ರಗಳ ವಿವರಣೆ



ಡಾ|| ಬಿ. ಗೋಪಾಲಾಚಾರ್

ಭಾರತದ ಮಣ್ಣಿನಲ್ಲಿ ಮೈ ಮನಗಳ ಕೊಳೆಯನ್ನು ತೊಳೆಯುವ ಅದ್ಭುತವಾದ ಶಕ್ತಿ ಇದೆ. ರಾಮಕೃಷ್ಣಾದಿ ಭಗವದ್ರೂಪಗಳ ಅಭಿವ್ಯಕ್ತಿಯಿಂದ ಈ ದೇಶದ ಪಾವಿತ್ರ್ಯತೆ ಇಮ್ಮಡಿಯಾಗಿದೆ. ಮನುಷ್ಯನಾಗಿ ಹುಟ್ಟಿದ ಮೇಲೆ ಒಮ್ಮೆಯಾದರೂ ಭರತ ಖಂಡವನ್ನು ಸಂಚರಿಸಬೇಕು. ಇಲ್ಲಿ ಹರಿಯುವ ನದಿಗಳು, ಕಣ್ಣಿಗೆ ಆನಂದವನ್ನುಂಟು ಮಾಡುವ ಗಿರಿಕಂಧರಗಳು, ದೇವನ ನಿತ್ಯಸನ್ನಿಧಾನದ ಅಯೋಧ್ಯಾ - ಮಥುರಾ - ಪುಷ್ಕರ - ಗಯಾ - ಕಾಶಿ - ಪ್ರಯಾಗ - ಬದರಿ - ಶ್ರೀರಂಗ - ಕಂಚೀ - ಪುರೀ - ಉಡುಪಿ ಮೊದಲಾದ ಕ್ಷೇತ್ರಗಳು ನಮ್ಮನ್ನು ಉದ್ಧರಿಸುತ್ತವೆ. ಮುಂಜಾನೆ ಎದ್ದು ಭಾರತದ ಪವಿತ್ರ ತೀರ್ಥ - ಕ್ಷೇತ್ರಗಳನ್ನು ಸ್ಮರಿಸಿದರೆ ಅನಂತಪುಣ್ಯ ಲಭಿಸುತ್ತದೆ. "ಸ್ಮರಿಸಿ ತೀರ್ಥಕ್ಷೇತ್ರಗಳ ಸಜ್ಜನರು ನಿತ್ಯದಲಿ ಅರುಣೋದಯದಲೆದ್ದು ಭಕ್ತಿ ಪೂರ್ವಕವಾಗಿ ಕರಣಶ್ರಮದಿ ಮಾಳ್ಪ ಪಾಪರಾಶಿಗಳ ಪರಿಹರಿಸುತ್ತ ಸಂತೈಸುವಾ... ಈ ಭರತಖಂಡದೊಳಗುಳ್ಳ ತೀರ್ಥಕ್ಷೇತ್ರವೈಭವ ಅಬ್ಜಭವಾಂಡಪೌರಣದೊಳಗೆ ಹರಿನಾಭಿಸಂಭ ಪೇಳ್ವ ನಾರದನಿಗಿನಿತೆಂದು ಪರಮಕಾರುಣ್ಯದಿಂದ ಸ್ತ್ರೀ ಬಾಲಗೋವಿ ಪ್ರಮಾತಾ ಪಿತೃಗಳ ಧನ ಲೋಭದಿಂದಲಿ ಪೇಳ್ವ ನಾರದನಿಗಿನಿತೆಂದು ಪರಮಕಾರುಣ್ಯದಿಂದ ಸ್ತ್ರೀಬಾಲಗೋವಿಪ್ರಮಾತಾ ಪಿತೃಗಳ ಧನಲೋಭದಿಂದಲಿ ಕೊಂದ ಪಾತಕವ ಪರಿಹರಿಸಿ ಶ್ರೀ ಭೂರಮಣ ಜಗನ್ನಾಥವಿಠಲ ಕೊಡುವ ಬೇಡಿದಿಷ್ಟಾರ್ಥಗಳನು...'ಎಂದು ಶ್ರೀ ಜಗನ್ನಾಥದಾಸರು ತೀರ್ಥಕ್ಷೇತ್ರಗಳ ಸ್ಮರಣೆಯ ಪ್ರಯೋಜನವನ್ನು ಸೊಗಸಾಗಿ ವರ್ಣಿಸಿದ್ದಾರೆ. "ಬಹುಜನ್ಮಾರ್ಜಿತ್ಯೈಃ ಪುಣ್ಯೈಃ ಲಭ್ಯತೇ ಕ್ಷೇತ್ರದರ್ಶನಮ್, ದುರ್ಲಭಂ ದೇವ ಸಂಘಾನಾಂ ಮನುಷ್ಯಾಣಾಂ ತು ಕಾ ಕಥಾ " ಎನ್ನುವ ಭವಿಷ್ಯೋತ್ತರ ಪುರಾಣದ ಮಾತಿನಿಂದ ಕ್ಷೇತ್ರದರ್ಶನವು ಜನ್ಮಾಂತರೀಯ ಪುಣ್ಯದಿಂದ ಪಡೆಯಲು ಸಾಧ್ಯ ಎಂದು ತಿಳಿಯುತ್ತದೆ.

ವೇದ-ಪುರಾಣಗಳು ತೀರ್ಥ ಕ್ಷೇತ್ರಗಳ ಮಹಿಮೆ, ತೀರ್ಥಯಾತ್ರೆಯ ಮಹಿಮೆಯನ್ನು ವರ್ಣಿಸಿವೆ. ಋಷಿ - ಮುನಿಗಳು ಹಾಗೂ ಅನೇಕ ಮಹಾನುಭಾವರು ಈ ತೀರ್ಥಯಾತ್ರೆಯನ್ನು ಶಾಸ್ತ್ರದ ಕ್ರಮದಂತೆ ಮಾಡಿ ಮಹತ್ವವನ್ನು ತೋರಿಸಿ ಕೊಟ್ಟಿದ್ದಾರೆ. ಸಂಸ್ಕೃತದಲ್ಲಿದ್ದ ಯಾತ್ರೆಯ ವರ್ಣನೆಯನ್ನು ನಮ್ಮ ಹರಿದಾಸರು ಕನ್ನಡದಲ್ಲಿ ಸೆರೆಹಿಡಿದಿದ್ದಾರೆ. ಹರಿದಾಸರು ವರ್ಣಿಸಿದ ತೀರ್ಥಯಾತ್ರೆಯನ್ನು ಯಥಾಮತಿ ನಿರೂಪಿಸುತ್ತಿದ್ದೇನೆ.

### ಯಾತ್ರೆಯ ಉದ್ದೇಶ

ನಮ್ಮ ಪೂರ್ವಿಕರು ತೀರ್ಥಯಾತ್ರೆಗೆ ಬಹಳ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ತೀರ್ಥಕ್ಷೇತ್ರಗಳು ಭಕ್ತರಿಗೆ ಸ್ಫೂರ್ತಿ ನೀಡುವ ತಾಣವಾಗಿದೆ.ಇಲ್ಲಿಯ ಪಾವಿತ್ರತೆಯನ್ನು ವರ್ಣಿಸಲು ಸಾಧ್ಯವಿಲ್ಲ. ಕ್ಷೇತ್ರಗಳಲ್ಲಿ ಸಾತ್ವಿಕರು ಗಿಡ - ಮರ - ಬಳ್ಳಿಗಳ ರೂಪದಿಂದ ನೆಲೆಸಿ ಸಾಧನೆ ಮಾಡುತ್ತಾರೆ.ದೇವತೆಗಳೂ ತರುಲತೆಗಳ ರೂಪವನ್ನು ಹೊಂದಿ ಭಗವಂತನನ್ನು ಸೇವಿಸುತ್ತಾರೆ. ಇಂತಹ ಕ್ಷೇತ್ರಗಳಿಗೆ ಹೋದಾಗ ನಮ್ಮ ಮನಸ್ಸೂ ಸಾತ್ವಿಕವಾಗುತ್ತದೆ. ದೇವನ ನಿತ್ಯ ಸನ್ನಿಧಾನವಿರುವ ಸ್ಥಳದಲ್ಲಿ "ನೀನಿದ್ದ ಸ್ಥಾನದಲ್ಲಿ

ಸರ್ವತೀರ್ಥಗಳು, ನೀನಿದ್ದಸ್ಥಾನದಲ್ಲಿ ಸಮಸ್ತ ಸಾತ್ವಿಕರು." ಎಂದು ವಿಜಯದಾಸರು ಸನ್ನಿಧಾನದ ಮಹತ್ವವನ್ನು ತಿಳಿಸಿದ್ದಾರೆ. ಕ್ಷೇತ್ರಗಳಿಗೆ ಹೋದಾಗ ಅನೇಕ ಭಕ್ತರ ದರ್ಶನ ಭಾಗ್ಯ ನಮಗಾಗುತ್ತದೆ. ಅವರ ಉಪದೇಶಾಮೃತದಿಂದ ತತ್ವಚಿಂತನೆ ಹೆಚ್ಚಾಗುತ್ತದೆ. ಇದನ್ನೆ ವ್ಯಾಸವಿಠಲರು "ಗಂಗೆ ಮಿಂದರೆ ಮಲವು ಹಿಂಗಿತಲ್ಲದೆ ರಂಗನೊಲಿಯನು ಭಕ್ತರ ಸಂಗ ದೊರೆಯದೆ" ಎಂದು ಸೊಗಸಾಗಿ ನಿರೂಪಿಸಿದ್ದಾರೆ."ಸಾಧು ಸಜ್ಜನ ಸಂಗವ ಮಾಡಿ ವೇದಶಾಸ್ತ್ರವನು ಓದು ನೀ" ಎಂದು ಪುರಂದರದಾಸರು ಸಜ್ಜನ ಸಹವಾಸದ ಪ್ರಾಮುಖ್ಯತೆಯನ್ನು ತಿಳಿಸಿದ್ದಾರೆ. ಸಜ್ಜನ ಸಹವಾಸದಲ್ಲಿ ಮಾಡಿದ ಯಾತ್ರೆ ಫಲಕಾರಿಯಾಗುತ್ತದೆ. ಭವಿಷ್ಯೋತ್ತರ ಪುರಾಣ ನಿರೂಪಿ ಸುವಂತೆ ಅಸಂಖ್ಯ ಪಾಪಗಳನ್ನು ಮಾಡಿದ್ದು ಮಾಧವನು ಸಜ್ಜನರೊಂದಿಗೆ ಕಪಿಲತೀರ್ಥದಲ್ಲಿ ತೀರ್ಥವಿಧಿಯನ್ನು ಮಾಡಿ ಶೇಷಾಚಲವನ್ನು ಹತ್ತಲು ಸಿದ್ಧನಾದಾಗ ಬೆಟ್ಟದ ಸ್ಪರ್ಶಮಾತ್ರದಿಂದ ಪಾಪಗಳಿಂದ ಮುಕ್ತನಾಗಿ ಭಗವಂತನಿಗೆ ಮಾವನಾಗುವ ಭಾಗ್ಯವನ್ನು ಪಡೆಯುತ್ತಾನೆ. ಆದ್ದರಿಂದಲೇ "ಪಾತ್ರರ ಸಂಗಡ ಯಾತ್ರೆಯ ಮಾಡಿ" ಎಂದು ದಾಸರು ಉಪದೇಶಿಸಿದ್ದಾರೆ. ಭರತ ಖಂಡದ ಸುಪ್ರಸಿದ್ಧಗಳಾದ ಪವಿತ್ರಗಳಾದ ಸಪ್ತತೀರ್ಥಗಳನ್ನು ಪ್ರತಿದಿನವೂ ಸ್ನಾನದ ಸಮಯದಲ್ಲಿ ಸ್ಮರಿಸಬೇಕು. ಆ ಎಲ್ಲ ತೀರ್ಥಗಳೂ ನಮ್ಮ ಸ್ನಾನದ ನೀರಿನಲ್ಲಿ ಸನ್ನಿಹಿತರಾಗಿ ಸ್ನಾನಮಾಡಿದವನಿಗೆ ಶುದ್ಧಿಯನ್ನು ತಂದು ಕೊಡುತ್ತಾರೆ. ಈ ಅನು ಸಂಧಾನವು ತುಂಬ ಶ್ರೇಷ್ಠವಾದದ್ದು. ಈ ಅನುಸಂಧಾನವುಳ್ಳವನನ್ನು ಶ್ರೀ ಪುರಂದರದಾಸರು "ಹರಿಸ್ಮರಣೆ ಮಾಡುವರು ನರರಲ್ಲವೊ,ಶರೀರವದು ಎಲ್ಲರಂತಲ್ಲವರದು... ಪುರಂದರವಿಠಲನು ಅವರೊಶ ದೊಳಿಹನು" ಎಂದು ಎಲ್ಲ ಕ್ಷೇತ್ರಗಳೂ ನಮ್ಮ ಶರೀರದಲ್ಲಿರುವುದನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಈ ದೇಶದ ಪವಿತ್ರಕ್ಷೇತ್ರಗಳನ್ನು ಸಂದರ್ಶಿಸಿದ ಹರಿದಾಸರು ಅಲ್ಲಿನ ಭಗವದ್ರೂಪಗಳ ಚಿಂತನೆಯೊಂದಿಗೆ ಉಪದೇಶಿಸಿದ್ದಾರೆ. ದಾಸರು ವರ್ಣಿಸಿರುವ ಕೆಲವು ಕ್ಷೇತ್ರಗಳನ್ನು ಆಯ್ದುಕೊಂಡಿದ್ದೇನೆ.

### ತಿರುಪತಿ

ಭೂವೈಕುಂಠವೆನಿಸಿದ ತಿರುಮಲೆ ಕ್ಷೇತ್ರದ ವೇದ - ಪುರಾಣಗಳಲ್ಲಿ ವರ್ಣಿತವಾಗಿದೆ. "ಅರಾಯಿಕಾಣೆ ವಿಕಟೇ ಗಿರಿಂ ಗಚ್ಛ ಸದಾನ್ವೈ "ಈ ಪರ್ವತವು ಶ್ರೀ ಹರಿಯ ಆವಾಸಸ್ಥಾನವಾಗಿದೆ. ಇದನ್ನು ಸಂದರ್ಶಿಸುವ ಬುದ್ಧಿಯುಳ್ಳವನಾಗು ಎಂದಿದೆ ವೇದ. ಎಲ್ಲ ಪುರಾಣಗಳೂ ಈ ಪರ್ವತವನ್ನು ವರ್ಣಿಸಿವೆ. ಏಳು ಬೆಟ್ಟಗಳ ಮೇಲೆ ಭಗವಂತನು ಸ್ವಯಂವ್ಯಕ್ತನಾಗಿ ನೆಲೆಸಿದ್ದಾನೆ. ಈ ಸನ್ನಿಧಾನದಲ್ಲಿ ಹರಿದಾಸರೊಂದಿಗೆ ಭಗವಂತನು ಅನೇಕ ಲೀಲೆಗಳನ್ನು ತೋರಿದ್ದಾನೆ. ಭಗವಂತನೊಂದಿಗೆ ಅನುಭ ವಿಸಿದ ಮಹಿಮೆಗಳನ್ನು ತಮ್ಮ ಸಾಹಿತ್ಯದಲ್ಲಿ ಹರಿದಾಸರು ಪೋಣಿಸಿದ್ದಾರೆ. "ತಿಳಿಯದೋ ನಿನ್ನಾಟ ತಿರುಪತಿಯ ವೇಂಕಟ" ಎಂದು ಹರಿಯ ಲೀಲೆಯನ್ನು ಕೊಂಡಾಡಿದ್ದಾರೆ. ಶ್ರೀ ಕನಕದಾಸರು " ಬಂದೇವಯ್ಯ ಗೋವಿಂದಶೆಟ್ಟಿ ನಿಮ್ಮ ಹರಿವಾಣ ತೀರ್ಥ ಪ್ರಸಾದ ಉಂಟೆನಲಾಗಿ, ಶೇಷಗಿರಿಯಲ್ಲಿ ವಾಸಮಾಡಿಕೊಂಡು ದೇಶ ದೇಶಕ್ಕೆ ಹೆಸರಾದ ಶೆಟ್ಟಿ. ಕಾಸುಕಾಸಿಗೆ ಬಡ್ಡಿಗಳಿಸಿ ಕೊಂಬ ಆದಿಕೇಶವ ನಾರಾಯಣ ತಿಮ್ಮಶೆಟ್ಟಿ." ಎಂದು ನಿಂದಾಸ್ತುತಿಯಲ್ಲಿ ಸ್ತುತಿಸಿದ್ದಾರೆ. ಶ್ರೀ ವಿಜಯದಾಸರು ಶ್ರೀನಿವಾಸನ ವಿಶೇಷಾನುಗ್ರಹ ಪಾತ್ರರು. ಬ್ರಹ್ಮೋತ್ಸವ ಪರ್ವಕಾಲದಲ್ಲಿ ದೇವರ ದರ್ಶನವನ್ನು ಮಾಡಿ "ಬಾ ಬಾ ಭಕುತರ ಹೃದಯ ಮಂದಿರ ಬಾ ಬಾ ಜಗ ದೋದ್ಧಾರ... ಭೃತ್ಯರ ಸಂಗಡೋ ಡ್ಯಾಡುವ ಧೊರೆಯೆ ಎನ್ನತ್ತಿಲಿ ಆಡುವ ಮರಿಯೇ" ಎಂದು ಭಾವುಕರಾಗಿ ಸ್ತುತಿಸಿದ್ದಾರೆ. ಪುರಂದರದಾಸರು "ವೈದ್ಯ ಬಂದ ನೋಡಿ ವೆಂಕಟನೆಂಬೋ ವೈದ್ಯ ಬಂದ ವೇದ ವೇದ್ಯ ನೋಡೀಗಲೇ, ಶ್ರೀದೇವಿ ರಮಣನು ಶ್ರೀನಿವಾಸನೆಂಬೋ, ಅನ್ಯವೈದ್ಯನೇಕೆ ಅನ್ಯ ಔಷಧವೇಕೆ ಅನ್ಯಮಂತ್ರ ತಂತ್ರ ಜಪವೇಕೆ. ಚನ್ನಶ್ರೀ ಪುರಂದರವಿಠಲನ ನೆನೆದರೆ ಮನ್ನಿಸಿ ಸಲಹುವ ವೈದ್ಯ ಶಿರೋಮಣಿ" ಎಂದು ಶ್ರೀನಿವಾಸನನ್ನು ಭವರೋಗದ ವೈದ್ಯನೆಂದು ಕೊಂಡಾಡಿದ್ದಾರೆ. ಶ್ರೀನಿವಾಸನಿಂದ ಉಪಚರಿಸಿಕೊಂಡು ಊಟ ಮಾಡಿದ ಶ್ರೀ ಜಗನ್ನಾಥ ದಾಸರು "ತುತಿಸಬಲ್ಲನೆ ನಾ ನಿನ್ನ ವೇಂಕಟರನ್ನ. ನಮಿಪ ಜನರ ಕಲ್ಪದ್ರುಮ..." ಹೀಗೆ ಶ್ರೀನಿವಾಸನನ್ನು ಕಲ್ಪವೃಕ್ಷ ಎಂದು ಕೊಂಡಾಡಿದ್ದಾರೆ. "ತೊಳಸದಕ್ಕಿಯ ತಿಂಬ ಕಿಲುಬು ತಳಿಗೆ ಯಲುಂ ಕೊಳಗದಲಿ ಹಣಗಳನು ಅಳೆಸಿ ಕೊಂಬ.. ಅಡ್ಡ ಬಿದ್ದ ಜನರ ವಿಡ್ಡೂರಗಳ ಕಳೆದು ದೊಡ್ಡವರ ಮಾಳ್ಪ ವಿಜಯವಿಠಲರೇಯ..." ಎಂದು ಶ್ರೀ ವಿಜಯದಾಸರು ನಿಂದಾಸ್ತುತಿಯಿಂದ ವರ್ಣಿಸಿದ್ದಾರೆ. ಶ್ರೀ ಗೋಪಾಲದಾಸರೇ ಮೊದಲಾದ ಅನೇಕ ಹರಿದಾಸರು ಶ್ರೀನಿವಾಸನನ್ನು ಕೊಂಡಾಡಿದ್ದಾರೆ. ಶ್ರೀ ವಿಜಯದಾಸರಿಗೆ ಶ್ರೀನಿವಾಸನು ಮಾಡಿದ ವಿಶೇಷವಾದ ಅನುಗ್ರಹವನ್ನು ಭಕ್ತಿಯಿಂದ ಸ್ಮರಿಸಿದ್ದಾರೆ. ದೇವನ ವೈಭವವನ್ನು ನೋಡಿ ಭಕ್ತಿಯಿಂದ ಹಾಡಿ ಸ್ತುತಿಸಿದರು.ಸ್ತುತಿ ಪ್ರಿಯನಾದ ಶ್ರೀನಿವಾಸನು ತನ್ನ ದರುಶನವನ್ನು ನೀಡಿ ದಾಸರನ್ನು ಸಂತೋಷಪಡಿಸಿದನು.



ಈ ಘಟನೆ ನಡೆದದ್ದು ಕ್ರಿ.ಶ. 1740 ರ ರೌದ್ರಿ ನಾಮ ಸಂವತ್ಸರದ ಪುಷ್ಯಮಾಸದ ಕೃಷ್ಣಪಕ್ಷದ ಚತುರ್ದಶಿ ಶನಿವಾರ ಮಧ್ಯರಾತ್ರಿ ಎಂದು ದಾಸರೇ ಉಲ್ಲೇಖಿಸಿದ್ದಾರೆ. "ಉತ್ಸವ ಮಂಟಪದೊಳಗೆ ಕುಳಿತು ಭಕ್ತವತ್ಸಲನೆಂದು ನುತಿಸಿ ಕೊಂಬನ ಕೂಡ ವಾರ ಶನಿ ಚತುರ್ದಶಿ ಕೃಷ್ಣ ಪುಷ್ಯದಿ..........ಪುರಂದರರ ಉಪದೇಶದ ಬಲದಿಂದ ಸಿರಿ ವಿಜಯವಿಠಲನ ಚರಣ ತರ್ಕೈಸಿ" ಎಂದು. ತಿರುಪತಿಯ ಶ್ರೀನಿವಾಸನಿಗೂ ಹರಿದಾಸರಿಗೂ ಬಹಳ ನಿಕಟವಾದ ಸಂಬಂಧವಿದೆ. ಇದರ ಸ್ಮಾರಕವಾಗಿ ಇಂದಿಗೂ ಶ್ರೀನಿವಾಸನ ಸನ್ನಿಧಿಯಲ್ಲಿ ಹರಿದಾಸ ಕೃತಿಗಳ ಅಖಂಡ ಸಂಕೀರ್ತನೆ ನಡೆಯುತ್ತದೆ. ಶ್ರೀನಿವಾಸನ ಪ್ರೇರಣೆಯಿಂದಲೇ ತಿರುಮಲೆ ದೇವಸ್ಥಾನದ ಅಧೀನದಲ್ಲಿ "ದಾಸಸಾಹಿತ್ಯ ಪ್ರಾಜೆಕ್ಟ್" ಎಂಬ ಸಂಸ್ಥೆಯು ಸ್ಥಾಪಿತ ವಾಗಿದೆ. ದೇಶದಾದ್ಯಂತ ಹರಿದಾಸರ ಸಾಹಿತ್ಯವನ್ನು ವ್ಯಾಪಕವಾಗಿ ಪ್ರಚಾರಮಾಡುತ್ತಿದೆ. ಇದರ ವಿಶೇಷ ಅಧಿಕಾರಿಗಳಾದ ವಿದ್ವಾನ್ ಪಿ.ಆರ್. ಆನಂದತೀರ್ಥಾಚಾರ್ ಇವರು ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

### ಅಹೋಬಲ

ಶ್ರೀ ನರಸಿಂಹ ದೇವರ ದಿವ್ಯ ಕ್ಷೇತ್ರ ಇದಾಗಿದೆ. ಮಹಾನುಭಾವರಾದ ಶ್ರೀ ಮಾರ್ಕಂಡೇಯ ಮಹಾಮುನಿಗಳು ಇಲ್ಲಿ ಹದಿನಾಲ್ಕು ಸಾವಿರ ವರ್ಷಗಳ ಕಾಲ ತಪಸ್ಸನ್ನು ಆಚರಿಸಿದರು. ಭವನಾಶಿನಿಯಲ್ಲಿ ಸ್ನಾನವನ್ನು ಮಾಡಿ ಸರ್ಪಗಿರಿಯ ಪ್ರದಕ್ಷಿಣೆಯನ್ನು ಪ್ರತಿದಿನವೂ ಮಾಡುತ್ತಿದ್ದರು. ಇವರ ಸೇವೆಗೆ ಭಗವಂತನು ಶ್ರೀ ನರಸಿಂಹ ರೂಪದಿಂದ ವ್ಯಕ್ತನಾಗಿ ದರ್ಶನವನ್ನು ನೀಡಿದನು. ಈ ಘಟನೆಯನ್ನು ಶ್ರೀ ವಿಜಯದಾಸರು "ಕಲ್ಪಾಯು ಪಡೆದ ಮುನಿ ಮಾರ್ಕಂಡೇಯ ಸಪ್ತಗಿರಿಯಲ್ಲಿ ಶ್ರೀನಿವಾಸನ ನೋಡಿ.... ಮುನಿ ಉಭಯ ಸಂಕಟದಿಂದ ಪದುಮನಾಭನ ಚರಣವ ನೆನೆಸಿ ಗುಣಿಸೆ ...ಉದುಭವನಾದನು ಅಹೋ ಬಲರಾಯಾ" ಎಂದು ವರ್ಣಿಸಿದ್ದಾರೆ. ಶ್ರೀ ಗೋಪಾಲದಾಸರು ಇಲ್ಲಿಯ ಮಹಿಮೆಯನ್ನು ಸುಳಾದಿಯಲ್ಲಿ ಸುಂದರವಾಗಿ ನಿರೂಪಿಸಿದ್ದಾರೆ. ಹಿಂದೆ ಈ ಸ್ಥಳವು ಹಿರಣ್ಯಕಶಿಪುವಿನ ರಾಜಧಾನಿಯಾಗಿತ್ತು. ಈ ಕ್ಷೇತ್ರದಲ್ಲಿ ಅನೇಕ ತೀರ್ಥಗಳಿವೆ. ಎಲ್ಲದರಲ್ಲೂ ಭಗವಂತನು ಸನ್ನಿಹಿತನಾಗಿದ್ದಾನೆ ಎಂದು ತಿಳಿಸುತ್ತಾರೆ.

"ಅನಂತನ್ನ ನೋಡಿ ಅಗಣಿತ ಗುಣಗಣನ... ಅನಂತಪರಿಯಲಿ ತುತಿಪೋ ಆ ಮಾರ್ಕಂಡೇಯಗೊಲಿದು ಅನಂತ ಮೂರ್ತಿ ತೋರಿ ಆತನ ವ್ರತವ ಗೆಲಿಸಿ ಅನಂತ ಪರಿಯಲಿ ಸ್ಮರಿಸಿಕೊಳುತಲಿಪ್ಪ ಅನಂತಗಿರಿವಾಸ ಗೋಪಾಲವಿಠಲ ಅನಂತ ನಿಂದಲಿ ಅನಂತತೀರ್ಥ ಉಂಟು. ಭವನಾಶನ ಮಾಳ್ಪ ಭಾಗೀರಥೀ ಜನಕ ಭವನಾಶನಿ ತೀರ್ಥದಲ್ಲಿ ತಾನೆ ನಿಂದು ಅವನಿಯೊಳಗೆ ಒಬ್ಬ ಚಂಡಶಾಸನನು ಎಂಬುವನು ತಾನು ಬಹುಕವಿಗಳ ದೂಷಿಸುತ ಭವಪೀಡಿತನಾಗಿ ಬಹು ವಿಪ್ರರ ದ್ರೋಹವನು ತಾಕಿ ಶವನು ಆಗಿ ಬೀಳೆ ಜವನದೂತರು ಬಂದು ಜಬರಿಸಿ ಒಯ್ಯುವ ಸಮಯಕ್ಕವನ ಅಂಗುಟ ಬೆರಳು ಬವನಾಸಿಲಿ ಬೀಳೆ ಭವ ತರಿದು ಅನುಭವಕೆ ತಂದು ಇತ್ತು ಭುವನದೊಳಗೆ ದಶರಥರಾಯನೆ ಆದ ಭವರೋಗವೈದ್ಯ ಗೋಪಾಲವಿಠಲನು ಪವನನಂತರ ನಿಂತು ಪಂಡಿತರನು ಪೊರೆವ" ಎಂಬುದಾಗಿ ಇಲ್ಲಿನ ತೀರ್ಥದ ಮಹತ್ವವನ್ನು ವರ್ಣಿಸಿದ್ದಾರೆ. ಶ್ರೀಕನಕದಾಸರು ಅಹೋಬಲದ ಶ್ರೀ ನರಸಿಂಹದೇವರು ಬಾಯಿ ತೆರೆದಿರುವುದನ್ನು ದಶಾ ವತಾರಗಳ ಚಿಂತನೆಯಲ್ಲಿ ಸೊಗಸಾಗಿ ವರ್ಣಿಸಿದ್ದಾರೆ. "ಏನು ಕಾರಣ ಬಾಯಿ ತೆರದೆ ಪೇಳೆಲೋ ದಾನವಾಂತಕ ಅಹೋಬಲ ನಾರಸಿಂಹನೇ .... ಮಾರಪಿತ ಕಾಗಿನೆಲೆ ಯಾದಿಕೇಶವ ರಂಗ ಧೀರ ಶ್ರೀನಾಥ ಭವನಾಶ ಪೇಳೋ ಏತಕೆ ಅಹೋಬಲ ನರಸಿಂಹನೇ? " ಎಂಬುದಾಗಿ ತಮ್ಮದೇ ಆದ ಧಟಿಯಲ್ಲಿ ಸ್ತುತಿಸಿದ್ದಾರೆ.



### ಶ್ರೀರಂಗಂ

ತಮಿಳುನಾಡಿನ ಕಾವೇರಿತೀರದಲ್ಲಿರುವ ಈ ಕ್ಷೇತ್ರವು ಭಕ್ತರ ಸ್ಫೂರ್ತಿಯ ತಾಣವಾಗಿದೆ. ಇಲ್ಲಿ ಭಗವಂತನು ಶೇಷನ ಮೇಲೆ ಮಲಗಿದ್ದಾನೆ. ಶ್ರೀ ಶ್ರೀ ಪಾದರಾಜರಿಗೆ ದಾಸಸಾಹಿತ್ಯ ಪ್ರಚಾರಕ್ಕೆ ಪ್ರೇರಣೆ ನೀಡಿದವನೂ ಈ ರಂಗನಾಥನೇ. ಕಾವೇರಿ ನದಿಯಲ್ಲಿ ಮಿಂದು ಸಪ್ತಪ್ರಾಕಾರ ಪ್ರದಕ್ಷಿಣೆಯನ್ನು ಮಾಡಿದರೆ ಪಾಪಗಳಿಂದ ಮುಕ್ತನಾಗುವನು

ಎಂಬ ಭಾವನೆ ಭಕ್ತರದ್ದು. ಯೋಗನಿದ್ರೆಯಲ್ಲಿರುವ ಶ್ರೀ ರಂಗನಾಥನನ್ನು ಹರಿದಾಸರು ಹಾಡಿಹೊಗಳಿದ್ದಾರೆ.ಶ್ರೀ ಶ್ರೀ ಪಾದರಾಜರು "ಕಂಗಳಿ ದ್ಯಾತಕೋ ಕಾವೇರಿರಂಗನ ನೋಡದ ಜಗಂಗಳೊಳಗೆ ಮಂಗಳಮೂರುತಿ ರಂಗನ ಶ್ರೀಪಾದಂಗಳ ನೋಡದ...... ತೇರನೇರಿ ಬೀದಿಲಿ ಮೆರೆವ ರಂಗವಿಠಲನ್ನ ನೋಡದ..." ಈ ದೇವರನ್ನು ನೋಡುವುದರಿಂದ ಕಂಗಳಿಗೆ ಸಾರ್ಥಕ್ಯವನ್ನು ಪಡೆಯುತ್ತೇವೆ ಎಂದು ತಿಳಿಸಿದ್ದಾರೆ.

ಇನ್ನೊಂದು ಹಾಡಿನಲ್ಲಿ "ರಂಗನಾಥನ ನೋಡುವ ಬನ್ನಿ ಶ್ರೀರಂಗನ ದಿವ್ಯ ವಿಮಾನದಲ್ಲಿನ ....ಕಾಮಧೇನು ಕಾವೇರಿ ರಂಗನ.... ಸಂಗೀತಲೋಲನ ಸಾಧುಸಂಮತನ ರಂಗವಿಠಲ ರಾಜೀವನೇತ್ರನ" ಎಂದು ಅನೇಕ ವಿಶೇಷಣಗಳಿಂದ ಕೊಂಡಾಡಿ ದ್ದಾರೆ. ಶ್ರೀ ಶ್ರೀಪಾದರಾಜರು ಶ್ರೀರಂಗನಾಥನ ಮೇಲೆ ಅನೇಕ ಕೃತಿಗಳನ್ನು ರಚಿಸಿದ್ದಾರೆ.

**ಕಂಚಿ**

ಮೋಕ್ಷದಾಯಕ ಸಪ್ತಮಹಾ ಕ್ಷೇತ್ರಗಳಲ್ಲಿ ಇದೂ ಸ್ಥಾನವನ್ನು ಪಡೆದಿದೆ. ಕಂಚಿ ಎಂದರೆ ಮಧ್ಯಸ್ಥಳ ಎಂದರ್ಥ. ಭೂಮಿಯ ಮಧ್ಯದಲ್ಲಿರುವ ಈ ಕಂಚೀ ಕ್ಷೇತ್ರದಲ್ಲಿ ಎಲ್ಲರಿಗೂ ಅಭಯವನ್ನು ನೀಡಲು ವರದರಾಜನು ನೆಲೆಸಿದ್ದಾನೆ. ಬ್ರಹ್ಮದೇವರು ಪೂಜಿಸಿದ ಸ್ಥಳವಾಗಿದೆ. ಇಲ್ಲಿ ಸ್ವಲ್ಪ ಪುಣ್ಯ ಮಾಡಿದರೂ ಅನಂತ ಫಲಪ್ರಾಪ್ತಿ. ದುರ್ಮರಣವನ್ನು ದೂರ ಅಟ್ಟುವ ತಾಣವೂ ಇದಾಗಿದೆ. ಒಮ್ಮೆ ಶ್ರೀ ಪುರಂದರದಾಸರ ಹಿರಿಯ ಮಗನನ್ನು ಕರ್ಮಾನುಗುಣವಾಗಿ ವಿಚಿತ್ರವ್ಯಾಧಿಯು ಪೀಡಿಸಿತು. ಸಾವಿನ ಸೂಚನೆಯೂ ಮೂಡಿತು.ಆಗ ದಾಸರು ಮಗನನ್ನು ಕಂಚಿಯ ವರದರಾಜನಲ್ಲಿಗೆ ಕರೆತಂದರು. ದೇವರನ್ನು ಮೊರೆಹೋದರು. ಕರುಣಾ



ಮಯನಾದ ವರದರಾಜನು ದಾಸರಿಗೆ ಕನಸಿನಲ್ಲಿ ಬಂದು ರೋಗನಿವಾರಿಸಿ ಅನುಗ್ರಹಿಸಿರುವುದನ್ನು ತಿಳಿಸಿದನು. ಅಂದಿನಿಂದ ಮಗನಿಗೆ ವರದ ಎಂದು ಹೆಸರಿಟ್ಟರು. ಇಲ್ಲಿನ ವರದರಾಜನನ್ನು ಸ್ಮರಿಸಿದರೂ ಅಪಶಕುನಗಳು ನಾಶವಾಗು ವವು. ಹರಿದಾಸರಿಗೆ ಕೀರ್ತಿನೀಡುವ ದೇವತೆ ಇವನು. ಒಮ್ಮೆ ಶ್ರೀ ಗೋಪಾಲದಾಸರು ವೇಣಿಸೋಮಪುರದಲ್ಲಿದ್ದಾಗ ಒಂದು ಘಟನೆ ನಡೆಯಿತು. ಧ್ಯಾನದಲ್ಲಿದ್ದಾಗ ಇದ್ದಕ್ಕಿದ್ದಂತೆ ಮುಸುಕು ಹಾಕಿ ಬಟ್ಟೆಯನ್ನು ಉಜ್ಜಿದರಂತೆ. ಇದನ್ನು ನೋಡಿದ ಶಿಷ್ಯರಿಗೆ ಆಶ್ಚರ್ಯ. ದಾಸರನ್ನು ವಿನಂತಿಸಿದಾಗ ನಗುತಾ ಉತ್ತರಿಸಿದರು- ಇಂದು ವರದರಾಜನ ಬಟ್ಟೆಗೆ ದೀಪದ ಬೆಂಕಿ ತಾಕಿತು. ಅದನ್ನು ಆರಿಸುವ ಯೋಗವನ್ನು ನನಗೆ ದಯಪಾಲಿಸಿದ್ದಾನೆ. ಆದ್ದರಿಂದ ನಾನು ಇಲ್ಲೇ ಬಟ್ಟೆಯನ್ನು ಉಜ್ಜಿ ಆರಿಸಿದೆ ಎಂದು ತಿಳಿಸಿದರು. "ಕಂಚಿವರದ ರಾಜನ ವಸನ ದೀಪಕ್ಕೆ ಸೋಕಲು ಮುಸುಕು ತೂರೆದು ತುಂಗನದಿಯೊಳು ನಸು ನಗುತಲದ ವರೆಸಲು." ಎಂದು ನಡೆದ ಘಟನೆಯನ್ನು ಮೆಲಕುಹಾಕಿದ್ದಾರೆ.

ಶ್ರೀ ಪುರಂದರದಾಸರು "ಕಣ್ಣಾರೆ ಕಂಡೆ ಅಚ್ಯುತನ ಕಂಚೀಪುಣ್ಯಭೂಮಿ ಕರಿರಾಜವರದನ.......ಶೃಂಗಾರ ಕಂಬು ಕಂಧರನ ದೇವಗಂಗೆಯ ಪಿತ ಪುರಂದರವಿಠಲನ" ಎಂದು ದೇವರ ರೂಪವನ್ನು ಸುಂದರವಾಗಿ ವರ್ಣಿಸಿದ್ದಾರೆ.

**ಉಡುಪಿ**

"ರೂಪ್ಯಾತ್ಮಕಾಲಯ.. ಶ್ರೀಮಧ್ವಹಸ್ತ ಕಮಲಾರ್ಚಿತ ಕೃಷ್ಣಮೂರ್ತ್ಯಾ"ಎಂಬ ಮಹಾಮಹಿಮರಾದ ಶ್ರೀ ವಾದಿರಾಜಗುರುಗಳ ಮಾತು ಉಡುಪಿಯ ಮಹತ್ವವನ್ನು ಸಾರುತ್ತಿದೆ. ಜಗತ್ತಿನಲ್ಲಿ ಉಡುಪಿಗೆ ಸಮವಾದ ಕ್ಷೇತ್ರವಿಲ್ಲ. ಮಧ್ವರು ಪೂಜಿಸಿದ ಶ್ರೀ ಕೃಷ್ಣನು ಇಲ್ಲಿರುವುದರಿಂದ ಈ ಊರಿಗೆ ಇಷ್ಟು ಹಿರಿಮೆ. ಶ್ರೀ ಕೃಷ್ಣನು ಎಲ್ಲ ಭಾಗ್ಯಗಳ ತವರಾದ ದ್ವಾರಕೆಯನ್ನೂ ಬಿಟ್ಟು ಮಧ್ವರ ಭಕ್ತಿಗೆ ಓಗೊಟ್ಟು ಉಡುಪಿಗೆ ಬಂದು ನೆಲೆಸಿದನು. ಆದ್ದರಿಂದ ಉಡುಪಿ ಎಷ್ಟು ಪುಣ್ಯವನ್ನು ಮಾಡಿದೆಯೆಂದು ಹಿರಿಯರು ಕೊಂಡಾಡಿದ್ದಾರೆ. "ತದ್ಧಜತ ಪೀಠಪುರಂ ಗರೀಯಃ"ಎಂದು ಶ್ರೀ ವಾದಿರಾಜರು ವರ್ಣಿಸಿದ್ದಾರೆ. ಕಲಿಯುಗದಲ್ಲಿ ಭಕ್ತರಿಗೆ ಬರಬಹುದಾದ ವಿಘ್ನಗಳ



ನಿವಾರಣೆಗಾಗಿಯೇ ಶ್ರೀಮಧ್ವಾಚಾರ್ಯರು ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿದ್ದಾರೆ. ತಾಯಿಯಾದ ದೇವಕಿಯ ಇಚ್ಛೆಯಂತೆ ಶ್ರೀ ಕೃಷ್ಣನು ತಾನೇ ವಿಶ್ವಕರ್ಮನಿಂದ ನಿರ್ಮಿಸಿದನು. ಅನೇಕ ದಿನಗಳ ಕಾಲ ಋಕ್ಮಿಣಿಯು ಪೂಜಿಸಿದ ಮೂರ್ತಿ ಇದು. ಇಂಥಹ ಶ್ರೀ ಕೃಷ್ಣನನ್ನು ಶ್ರೀ ಮಧ್ವಾಚಾರ್ಯರು ಪ್ರತಿಷ್ಠಾಪಿಸಿದರು. ನಿರಂತರ ಅನ್ನದಾನಕ್ಕಾಗಿ ಅಕ್ಷಯಪಾತ್ರೆಯನ್ನು ಇಲ್ಲಿ ಇಟ್ಟಿದ್ದಾರೆ. ಆದ್ದರಿಂದಲೇ ಶ್ರೀ ಕೃಷ್ಣನನ್ನು ಅನ್ನಬ್ರಹ್ಮ ಎಂದು ಸ್ತುತಿಸಿದ್ದಾರೆ. ಹರಿದಾಸರಿಗೆ ಉಡುಪಿ ಸ್ಫೂರ್ತಿಯ ತಾಣ. ಶ್ರೀ ಪ್ರಸನ್ನವೆಂಕಟದಾಸರು "ಎಂದು ಕಾಂಬೆನೊ ಎನ್ನ ಸಲಹುವ ತಂದೆ ಉಡುಪಿಯ ಜಾಣನ.. ದ್ವಾರಕೆ ಮಣ್ಣಿನೊಳು ಪ್ರಕಟಿಸಿದನಾ.." ಎಂದು ನಡೆದ ಘಟನೆಯನ್ನು ಪೋಣಿಸಿದ್ದಾರೆ. ಶ್ರೀ ಕೃಷ್ಣನು ಮಧ್ವರ ಮನೆದೈವ. ಅವನು ನಮಗೂ ಮನೆದೈವನಾಗಿದ್ದಾನೆ. ಶ್ರೀ ಕೃಷ್ಣನನ್ನು ಅನನ್ಯವಾಗಿ ಆರಾಧಿಸಿದ ಉಡುಪಿಯ ಅಭಿವೃದ್ಧಿಯ ಹರಿಕಾರರಾದ ಹಾಗೂ ಪರ್ಯಾಯ ವ್ಯವಸ್ಥೆಯನ್ನು ಎರಡು ವರ್ಷಗಳಿಗೆ ವಿಸ್ತರಿಸಿದ ಶ್ರೀ ವಾದಿರಾಜರು "ಈ ಮುದ್ದು ಕೃಷ್ಣನ ಈ ಕ್ಷಣದ ಸುಖವೆ ಸಾಕು ಶ್ರೀ ಮಧ್ವಮುನಿಯ ಮನೆದೈವ ಉಡುಪಿಯ ಕೃಷ್ಣ" ಎಂದು ಶ್ರೀ ಕೃಷ್ಣನ ಸೌಂದರ್ಯವನ್ನು ವರ್ಣಿಸಿದ್ದಾರೆ.

ಮಧ್ವರ ಮನೆದೈವನಾದ ಶ್ರೀ ಕೃಷ್ಣನು "ತನ್ನ ದಾಸಜನರಿ ಗೊಲಿದು ಉನ್ನತ ಉಡುಪಿಯಲ್ಲಿ ನಿಂತು ಘನ್ನ ಮಹಿಮೆಯಿಂದ ಮೆರೆವ ಪ್ರಸನ್ನ ಹಯವದನ ಕೃಷ್ಣ, ಲೋಕಭರಿತನೋ ರಂಗ" ಎಂಬ ಪ್ರಸಿದ್ಧವಾದ ಹಾಡಿನಲ್ಲಿ ಶ್ರೀ ವಾದಿರಾಜರು ಉಡುಪಿಯಲ್ಲಿ ನೆಲೆನಿಂತ ಕಾರಣವನ್ನು ಸಮರ್ಥಿಸಿದ್ದಾರೆ. ಶ್ರೀಕಮಲೇಶವಿಠಲರು "ಉಡುಪಿಯ ಕೃಷ್ಣನ ಸಡಗರ ನೋಡಲು ನಡಿಯೇ ನಾರಿಮಣಿ...... ಈ ಕಲಿಯುಗದೊಳು ಇದೇ ವೈಕುಂಠವು ಕಾಮಿತಫಲ ಕೊಡುವ ಚೆಲುವ" ಎಂದು ಶ್ರೀಕೃಷ್ಣಮಠದ ಪೂಜಾದಿ ಸಂಭ್ರಮವನ್ನು ಸೊಗಸಾಗಿ ಸೆರೆಹಿಡಿದಿದ್ದಾರೆ. ಶ್ರೀ ವಿಜಯದಾಸರು ಶ್ರೀ ಕೃಷ್ಣನ ಪ್ರತಿಷ್ಠಾಪನೆಯ ಹಿಂದಿರುವ ರೋಚಕವಾದ ಕಥೆಯನ್ನು "ಅಂದು ದೇವಕೀದೇವಿ ದ್ವಾರಕಾಪುರದಲ್ಲಿ....ನಂದಿತೀರ್ಥರಿಗೊ ಲಿದ ಉಡುಪಿ ಸಿರಿ ಕೃಷ್ಣ ಕಂದರ್ಪಿತ ನಮ್ಮ ವಿಜಯವಿಠಲರೇ" ಎಂಬುದಾಗಿ ಸವಿವರವಾಗಿ ನಿರೂಪಿಸಿದ್ದಾರೆ. ಹರಿದಾಸರಿಗೆ ಉಡುಪಿ ಯನ್ನು ಎಷ್ಟು ವರ್ಣಿಸಿದರೂ ತೃಪ್ತಿಯಿಲ್ಲ. ಉಡುಪಿಯಲ್ಲಿ ಶ್ರೀ ಅನಂತಾಸನ ದೇವರ ಆದೇಶದಂತೆ ಶ್ರೀ ಮಧ್ವಾಚಾರ್ಯರಿಗಾಗಿ ಗಂಗಾದೇವಿಯು ಆಗಮಿಸಿ ಸರೋವರದಲ್ಲಿ ಸನ್ನಿಹಿತಳಾಗಿದ್ದಾಳೆ. ಅಂದು ಶಿಷ್ಯರೊಂದಿಗೆ ಆಚಾರ್ಯರು ಸ್ನಾನ ಮಾಡಿದ ಸರೋವರವೇ ಇಂದು "ಮಧ್ವ ಸರೋವರ" ಎಂದು ಪ್ರಸಿದ್ಧವಾಗಿದೆ. ಇದನ್ನೇ ಶ್ರೀ ವಿಜಯದಾಸರು "ಮಧ್ವಸರೋವರಸ್ನಾನ ಮುದ್ದು ಕೃಷ್ಣನ ಧ್ಯಾನ, ಶುದ್ಧ ಭಕುತಿಯೊಳ್ ಮಡೆ ವಿಜಯವಿಠಲ ಒಲಿವಾ.... ಸಕಲ ಕ್ಷೇತ್ರ ಗಳು ಉಡುಪಿನ ತರುವಾಯ ಸಕಲ ವಿಗ್ರಹಗಳು ಕೃಷ್ಣನ ತರುವಾಯ" ಎಂದು ಕೊಂಡಾಡಿದ್ದಾರೆ.

**ಪಂಢರಾಪುರ -**

ಭಕ್ತರ ಭಕ್ತಿಗೆ ಶ್ರೀ ಹರಿ ಸುರಿಸುವ ಕಾರಣ್ಯ ಅಮೋಘವಾದದ್ದು. ಇದಕ್ಕೆ ಪಂಢರಾಪುರಕ್ಷೇತ್ರವೇ ಸಾಕ್ಷಿ. "ಮಾತೃದೇವೋಭವ ಪಿತೃದೇವೋಭವ" ಎಂಬ ವೇದದ ಮಾತಿಗೆ ಈ ಕ್ಷೇತ್ರ ನಿದರ್ಶನ ವಾಗಿದೆ. ಪುಂಡರೀಕನೆಂಬ ಭಕ್ತನು ತಂದೆ-ತಾಯಿಯರ ಸೇವೆಯನ್ನು ಶ್ರೀಹರಿಸೇವೆ ಎಂದು ಭಾವಿಸಿ ಪೂಜಿಸುತ್ತಿದ್ದನು. ಅವನ ಶುದ್ಧವಾದ ಭಕ್ತಿಗೆ ಮೆಚ್ಚಿದ ಶ್ರೀ ಹರಿಯು ಚಂದ್ರಭಾಗಾ ನದಿ ದಡದಲ್ಲಿರುವ ಅವನ ಮನೆಗೆ ಬಂದನು. ಅತಿಥಿಯಾಗಿ ಬಂದ ಭಗವಂತನನ್ನು ಸ್ತುತಿಸಿದನು. ಆದರೆ ಪಿತೃಸೇವೆಯಲ್ಲಿದ್ದ ಪುಂಡರೀಕನು ಅಲ್ಲೇ ಇದ್ದ ಒಂದು ಇಟ್ಟಿಗೆಯನ್ನು ವಿಶ್ರಾಂತಿಗಾಗಿ ನೀಡಿದನು. ಸಂತುಷ್ಟನಾದ ಶ್ರೀಹರಿಯು ಸೊಂಟದ ಮೇಲೆ ಕೈಯನ್ನಿಟ್ಟ ಸುಂದರ ರೂಪದಲ್ಲಿ ನಿಂತು ಅನುಗ್ರಹಿಸಿದನು. ಅದೇ ರೂಪ ಇಂದು ನಾವು ನೋಡುವ ಪಂಢರಾಪುರದ ವಿಠಲ.

ಕಷ್ಟದಲ್ಲಿರುವ ಭಕ್ತರಿಗೆ ತನ್ನ ಜ್ಞಾನವನ್ನು ನೀಡಿ ಅನುಗ್ರಹಿಸುವನಾದ್ದರಿಂದ "ವಿಠ್ಠಲ" ಎಂದು ಜ್ಞಾನಿಗಳು ಸ್ತುತಿಸಿದ್ದಾರೆ. ಹರಿದಾಸರಿಗೆ ಅತ್ಯಂತ ಪ್ರೇರಣೆ ನೀಡುವ ರೂಪ ಇದಾಗಿದೆ. ನಾದ ಬ್ರಹ್ಮನಾದ ಪಾಂಡುರಂಗನನ್ನು ಅನೇಕ ಹರಿದಾಸರು ಹಾಡಿಹೊಗಳಿದ್ದಾರೆ ಪುರಂದರದಾಸರು "ಕಟಿಯಲ್ಲಿ ಕರವಿಟ್ಟನು ಪಂಢರೀರಾಯ....ನೇಮದಿಂದಲಿ ಬಂದ ಭಕ್ತರು ನಿಮ್ಮ ಚರಣಕಮಲಯುಗ್ಮವ ಮುಟ್ಟಿ ಭಜಿಸುತಿರೆ, ಮಮತೆಯಿಂದಲಿ ಅವರ ಭವವ ಕಳೆವೆನೆಂದು ಕಮಲನಾಭ ಶ್ರೀ ಪುರಂದರವಿಠಲ

ತಾ ಕಟಿಯಲ್ಲಿ ಕರವಿಟ್ಟನು'' ಎಂದು ನಿಂತ ಭಂಗಿಯನ್ನು ಸೊಗಸಾಗಿ ವರ್ಣಿಸಿದ್ದಾರೆ. ಶ್ರೀಪತಿ ವಿಠಲದಾಸರು " ಈ ಸುಕ್ಷೇತ್ರದಲ್ಲಿ ನಿಂದಿಹ ಭೀಮಾತೀರ ಚಂದ್ರಭಾಗಾ ಅಲ್ಲಿಯ ವೈಭೋಗ ತಂದೆ ಶ್ರೀಪತಿವಿಠಲ ಸುಖ ಸಿಂಧೋ ಅನಾಥಬಂಧೋ'' ಎಂಬ ಕೃತಿಯಲ್ಲಿ ದೇವರ ಮಹಿಮೆಯನ್ನು ಕೊಂಡಾಡಿದ್ದಾರೆ.ಇಲ್ಲಿ ದೇವನನ್ನು "ಇಟ್ಟಿಗೆವಾಸ'' ಭಕ್ತನು ಕೊಟ್ಟ ಇಟ್ಟಿಗೆಯ ಮ್ಯಾಲೆ ನಿಂತ ದೇವ'' ಎಂದು ಶ್ರೀ ವಿಜಯದಾಸರು ಸ್ತುತಿಸಿದ್ದಾರೆ.

**ಮಂತ್ರಾಲಯ**

ಕಲಿಯುಗದಲ್ಲಿ ನಂಬಿದ ಭಕ್ತರಿಗೆ ಕಾಮಧೇನುವಾಗಿ ಅನುಗ್ರಹಿಸುವ ಗುರುಗಳೆಂದರೆ ಶ್ರೀ ರಾಘವೇಂದ್ರ ಗುರುಗಳು. ಶ್ರೀ ಪ್ರಹ್ಲಾದನಾಗಿ ಶ್ರೀ ನರಸಿಂಹನನ್ನು ಆರಾಧಿಸಿ, ಶ್ರೀ ವ್ಯಾಸರಾಜರಾಗಿ ಶ್ರೀ ವೇಣುಗೋಪಾಲನನ್ನು ಆರಾಧಿಸಿ, ಶ್ರೀ ರಾಘವೇಂದ್ರರಾಗಿ ಶ್ರೀ ರಾಮನನ್ನು ಆರಾಧಿಸಿದರು. ಅನೇಕ ಮಹಿಮೆಗಳನ್ನು ತೋರಿ ತುಂಗಾನದಿಯ ತೀರದ ಮಂತ್ರಾಲಯದಲ್ಲಿ ಸಶರೀರವಾಗಿ ಬೃಂದಾವನವನ್ನು ಪ್ರವೇಶಿಸಿದರು. ಬೃಂದಾವನದಲ್ಲಿದ್ದು ಇಂದಿಗೂ ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ. ಹರಿದಾಸರು ಮಂತ್ರಾಲಯದ ಗುರುಗಳನ್ನು ಶ್ರದ್ಧೆಯಿಂದ ಕೊಂಡಾಡಿದ್ದಾರೆ. ಶ್ರೀದವಿಠಲದಾಸರು "ರಾಘವೇಂದ್ರ ಗುರುರಾಯರ ಸೇವಿಸಿರೋ ಸೌಖ್ಯದಿ ಜೀವಿಸಿರೋ, ತುಂಗಾತೀರದಿ ರಘುರಾಮನ ಪೂಜಿಪರೋ ನರಸಿಂಗನಭಜಕರೋ... ಪಾದ ಸ್ಮರಣೆಯ ಮಾಡದವನೇ ಪಾಪಿ ನಾ ಪೇಳುವೆ ಸ್ಥಾಪಿ'' ಎಂದು ಗುರುಗಳ ಮಹಿಮೆಯನ್ನು ವರ್ಣಿಸಿದ್ದಾರೆ. ಶ್ರೀ ಜಗನ್ನಾಥದಾಸರು "ರೋಗಹರನೆ ಕೃಪಾಸಾಗರ ಶ್ರೀ ಗುರು ರಾಘವೇಂದ್ರ ಪರಿಪಾಲಿಸೋ ..... ಘನ್ನ ಮಹಿಮ ಜಗನ್ನಾಥ ವಿಠಲಪ್ರಿಯ ನಿನ್ನಾರಾಧನೆ ಮಾಡಿಸೋ''ಎಂದು ಪ್ರಾರ್ಥಿಸಿದ್ದಾರೆ.ಶ್ರೀ ಗೋಪಾಲದಾಸರು "ಮನಿಯ ನೋಡಿರೋ ಮುಕುತಿಧನವ ಬೇಡಿರೋ ಜನುಮರಹಿತವಾಗಿ ನಿಂದು ಘನವರವೀವ ರಾಘವೇಂದ್ರ'' ಎಂದು ಕೊಂಡಾಡಿದ್ದಾರೆ.



ಶ್ರೀಗುರುಜಗನ್ನಾಥದಾಸರು " ಎದ್ದು ಬರುತಾರೆ ನೋಡೆ ಎದ್ದು ಬರುತ್ತಾರೆ ಮುದ್ದು ಬೃಂದಾವನದ ಮಧ್ಯದೊಳಗಿಂದ ತಿದ್ದಿ ಹಚ್ಚಿದ ನಾಮ-ಮುದ್ರೆಗಳೊಪ್ಪುತ ಈಗ'' ಎಂದು ಬೃಂದಾವನದ ಸನ್ನಿಧಾನವನ್ನು ಹೊಗಳಿದ್ದಾರೆ. ಹೀಗೆ ಶ್ರೀ ವಿಜಯದಾಸರೇ ಮೊದಲಾದ ದಾಸವರೇಣ್ಯರು ಗುರುಗಳ ಮಹಿಮೆಯನ್ನು ಕೊಂಡಾಡಿದ್ದಾರೆ. ಶ್ರೀ ಗೋಪಾಲದಾಸರು ಮಂತ್ರಾಲಯದ ಇತಿಹಾಸವನ್ನು ಸುಂದರವಾಗಿ ವರ್ಣಿಸಿದ್ದಾರೆ. "ಧರೆಯೊಳಗೆ ನಮ್ಮ ಗುರು ರಾಘವೇಂದ್ರರನ್ನು ಇರುತಿಪ್ಪ ವಿವರವ ಅರಿತು ವರ್ಣಿಸುವೆ. .... ಗುರುವಂತರ್ಯಾಮಿಯಾಗಿ ವರವ ನೀಡಲು ಜಗಕೆ ನರಹರಿ ತಾನೆ ನಿಂತು ನಿರುತ ಪೂಜೆಯಗೊಂಡು.... ಗೋಪಾಲವಿಠಲ ತನ್ನ ಶರಣರ ಪೊರೆವಂಥಚರಿಯ ಪರಿಪರಿವುಂಟು'' "ರಾಘವೇಂದ್ರನೆಂಬ ರೂಪ ತಾನೆಯಾಗಿ ರಾಘವೇಂದ್ರನೆಂಬ ನಾಮ ಇಡಿಸಿಕೊಂಡು.......ರಾಘವೇಂದ್ರಮೂರುತಿ ಗೋಪಾಲವಿಠಲ ಭಾಗವತರಲ್ಲಿ ಬಹುಪೂಜೆಯನುಗೊಂಬ'' "ದಿನದಿನಕಿಲ್ಲಿ ನೂತನ ಪೂಜೆಗಳಾಗುವುವು ದಿನದಿನಕಿಲ್ಲಿ ನೂತನ ಉತ್ಸವವಾಗುವವು ಜನರ ಸಂದಣಿ ಪ್ರತಿದಿನ ವಿಪ್ರಭೋಜನ...... ಜಗನ್ನಾಥ ತಾನಿಲ್ಲಿ ಅಣನುವಾಗಿ ತಾ ನಿಂದು ಜನರ ಪಾಲಿ ಪುದಕ್ಕನುಮಾನ ಸಲ್ಲದು ಗುಣಗಣ ಪರಿಪೂರ್ಣ ಗೋಪಾಲ ವಿಠಲ ಅಣೋರಣೀಯ ಎಂಬುವಗೆ ಎಣೆಯಾರೋ ಜಗದೊಳಗೆ'' "ಮಂತ್ರಸಿದ್ಧಿಯ ಕ್ಷೇತ್ರ ಇದು ನೋಡಿ ಕೋವಿದರು ಮಂತ್ರಪ್ರತಿಪಾದ್ಯ ಗೋಪಾಲವಿಠಲ ನಿಂದ'' ಎಂದು ಸೊಗಸಾಗಿ ನಿರೂಪಿಸಿದ್ದಾರೆ.

**ಮಧ್ವೇಶಾರ್ಪಣಮಸ್ತು**

# ಭಕ್ತರ ಸೇವೆಯಲ್ಲಿ ......



ಫೆಬ್ರವರಿ 14 2020, ಶುಕ್ರವಾರ ತಿರುಮಲೆಯಲ್ಲಿ ಆಧುನೀಕರಿಸಿದ ಅಶ್ವಿನಿ ಆಸ್ಪತ್ರೆಯ ಪ್ರಾರಂಭೋತ್ಸವದಲ್ಲಿ ತಿ.ತಿ.ದೆ ಪಾಲಕ ಮಂಡಲಿಯ ಅಧ್ಯಕ್ಷರಾದ ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ಪಾಲ್ಗೊಂಡು ಪೂಜೆಗಳನ್ನು ಸಲ್ಲಿಸಿದರು. ನಂತರ ಅವರು ಮೀಡಿಯಾದೊಂದಿಗೆ ಮಾತನಾಡುತ್ತಾ ತಿರುಮಲೆಗೆ ಬರುವ ಭಕ್ತರು, ಸ್ಥಾನಿಕರ ಸೌಕರ್ಯಾರ್ಥವಾಗಿ ಅಪೋಲೋ, ಟಾಟಾ ಟ್ರಸ್ಟ್ ಅವರ ಸಹಕಾರದೊಂದಿಗೆ ಅಶ್ವಿನಿ ಆಸ್ಪತ್ರೆಯ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದರು. ಇನ್ನು ಮುಂದೆ ಅಪೋಲೋ, ಟಾಟಾ ಟ್ರಸ್ಟ್ ಅವರ ಸಹಕಾರ ದೊಂದಿಗೆ ತಿರುಮಲೆ ಅಶ್ವಿನಿ ಆಸ್ಪತ್ರೆಯಲ್ಲಿ ಉತ್ತಮವಾದ ವೈದ್ಯ ಸೇವೆಯನ್ನು ನೀಡುವುದಾಗಿ, ಎಲ್ಲರೂ ಆ ಅವಕಾಶವನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಫೆಬ್ರವರಿ 17, 2020 ಸೋಮವಾರ ಶ್ರೀಶೈಲದಲ್ಲಿನ ಶ್ರೀಭ್ರಮರಾಂಬ ಸಮೇತ ಮಲ್ಲಿಕಾರ್ಜುನ ಸ್ವಾಮಿಗೆ ತಿ.ತಿ.ದೇ ಪಾಲಕ ಮಂಡಲಿ ಅಧ್ಯಕ್ಷರಾದ ಶ್ರೀ ವೈ.ವಿ.ಸುಬ್ಬಾರೆಡ್ಡಿ, ಕಾರ್ಯನಿರ್ವಹಣಾಧಿಕರಿಗಳಾದ ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಅವರು ತಿ.ತಿ.ದೇ.ಪರವಾಗಿ ರೇಷ್ಮೆಯ ವಸ್ತ್ರಗಳನ್ನು ಸಮರ್ಪಿಸಿದರು. ಇವರಿಗೆ ಶ್ರೀ ಶೈಲದ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಕೆ.ಎಸ್.ರಾಮಾರಾವು, ಅರ್ಚಕರು ಸ್ವಾಗತವನ್ನು ಬಯಸಿದರು.





ಫೆಬ್ರವರಿ 23, 2020 ಭಾನುವಾರ ಚಿತ್ತೂರು ಜಿಲ್ಲೆಯ ಶ್ರೀ ಕಾಳಹಸ್ತಿಯಲ್ಲಿ ನಡೆದ ಮಹಾಶಿವರಾತ್ರಿಯ ವಾರ್ಷಿಕ ಬ್ರಹ್ಮೋತ್ಸವದಲ್ಲಿ ಅತ್ಯಂತ ಮುಖ್ಯವಾದ ಕಲ್ಯಾಣೋತ್ಸವದ ಸಂದರ್ಭದಲ್ಲಿ ಸೋಮಸ್ಕಂದ ಮೂರ್ತಿ, ಜ್ಞಾನಾಂಬಿಕೆಗೆ ತಿ.ತಿ.ದೇ ಪರವಾಗಿ ತಿ.ತಿ.ದೇ ಪಾಲಕಮಂಡಲಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ, ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಅನಿಲ್‌ಕುಮಾರ್ ಸಿಂಘಾಲ್ ದಂಪತಿಗಳು ರೇಷ್ಮೆಯ ವಸ್ತ್ರಗಳನ್ನು ಸಮರ್ಪಿಸಿದರು.



Edited and Published on behalf of T.T.Devasthanams by Dr. K. Radha Ramana, M.A., M.Phil., Phd., Chief Editor, T.T.D. and Printed at T.T.D. Press by Sri R.V. Vijaya Kumar, B.A., B.Ed., Dy. E.O. (Publications & Press), T.T.D. Press, Tirupati - 517 507.

ತಿರುಮಲ ತಿರುಪತಿ ದೇವಸ್ಥಾನಗಳು

# ತಿರುಪತಿ

## ಶ್ರೀ ಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು

28-05-2020 ರಿಂದ 05-06-2020 ರ ವರೆಗೆ



**28-05-2020**
ಗುರುವಾರ
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**29-05-2020**
ಶುಕ್ರವಾರ
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**30-05-2020**
ಶನಿವಾರ
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**31-05-2020**
ಭಾನುವಾರ
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**01-06-2020**
ಸೋಮವಾರ
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ
ರಾತ್ರಿ: ಗರುಡವಾಹನ


**02-06-2020**
ಮಂಗಳವಾರ
ಹಗಲು: ಹನುಮದ್ವಾಹನ
ಸಂಜೆ : ವಸಂತೋತ್ಸವ
ರಾತ್ರಿ: ಗಜವಾಹನ

**03-06-2020**
ಬುಧವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**04-06-2020**
ಗುರುವಾರ
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**05-06-2020**
ಶುಕ್ರವಾರ
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams printing on 25-03-2020. Regd. with the Registrar of Newspapers under "RNI" No.10742.
Postal Regd.No.TRP/14- 2018-2020, Licensed to post without prepayment
No.PMGK/RNP/WPP-04/2018-2020



ಅಯೋಧ್ಯೆಯಲ್ಲಿ ರಾಮನಿಗೆ ವೈಭವವಾಗಿ ಪಟ್ಟಾಭಿಷೇಕ ನಡೆಯಿತು.
ರಾಮನು ರಾಜ್ಯವಾಳಿದ ಕಾಲದಲ್ಲಿ ಪ್ರಜೆಗಳೆಲ್ಲರೂ ಯಾವುದೇ
ಕಷ್ಟವೂ ಇಲ್ಲದೇ, ಎಲ್ಲರೂ ಸುಖ ಸಂತೋಷದಿಂದ ಬಾಳುತ್ತಿದ್ದರು.
ರಾಮನ ರಾಜ್ಯದಲ್ಲಿ ಧರ್ಮವು ನಾಲ್ಕು ಪಾದಗಳಿಂದ ನಡೆಯಿತು. ರಾಮನ
ಆಳ್ವಿಕೆಯೇ ಅವರ ಅನಂತರದ ರಾಜರುಗಳಿಗೆ ಆದರ್ಶವಾಗಿ ರಾಮರಾಜ್ಯವೆಂಬ
ಹೆಸರಿನಿಂದ ಯುಗಯುಗಗಳಿಗೂ ಶಾಶ್ವತವಾಗಿ ನಿಂತು ಹೋಗಿದೆ.